(Revised Edition)

# ವೇದಗಳು ಮತ್ತು ಕುರ್‌ಆನ್ ಬೋಧನೆಗಳು

**Makkah or Makteshwar?**

**Manu or Hazrat Nooh ?**

**Purush medha or Bakri Eid?**

**When Kalki Avtar will come?**

**Who is holy Narashansa?**

**Common verses between holy Vedas & holy Quran?**

# ವೇದಗಳು ಮತ್ತು ಕುರ್‌ಆನ್ ಬೋಧನೆಗಳು

ಸಾಮ್ಯತೆ

Printed by

**Al Qalam Publications Pvt. Ltd**

344, Gali Garhaiyya, Bazar Matia Mahal, Jama Masjid, Delhi - 6

Phone : 011-23241481, 23261481, Fax : 011-23241481 (On demand)

email : alqalambooks@gmail.com

## No Copyright

### ಕೃತಿ ಸ್ವಾಮ್ಯ

ಈ ಪುಸ್ತಕವನ್ನು ಇತರ ಭಾಷೆಗಳಿಗೆ ಅನುವಾದಿಸಲು ಅಥವಾ ಉಚಿತವಾಗಿ ವಿತರಿಸಲು ಮುದ್ರಿಸಲು ಅನುಮತಿಯನ್ನು ನೀಡಲಾಗಿದೆ. ಈ ಪುಸ್ತಕದ ಯಾವುದೇ ಕೃತಿ ಸ್ವಾಮ್ಯ (ಕಾಪಿ ರೈಟ್) ಇರುವುದಿಲ್ಲ. ಆದರೆ ಪುಸ್ತಕದ ವಿಷಯದ ಯಾವುದೇ ಭಾಗವನ್ನು ತೆಗೆದು ಹಾಕುವುದು ಅಥವಾ ಹೊಸ ವಿಷಯವನ್ನು ಸೇರಿಸುವುದು ಮಾಡಬಾರದು.


# Teachings of Vedas and Quran


1 st Edition: Year 2014

ISBN No. 978-93-80778-09-9

Price: ₹ 25/-

Published by

**Tanveer Publication**

Hydro electric Machinery Premises
A-13, Ram-Rahim Udyog Nagar, Bus Stop Lane,
L.B.S Marg, Sonapur, Bhandup (W) Mumbai -78
Phone: 022-2596 2055 / 2596 2047 / 2596 5930
Mobile: 932006 4026 / 9892064026
E-mail: hydelect@vsnl.com, hydelect@mtnl.net.in
Websites: www.tanveerpublication.com
www.freeeducation.co.in



**THIS BOOK COULD BE FREE DOWNLOADED FROM**
**www.freeeducation.co.in**

# Preface
# ಮುನ್ನುಡಿ

ಇಸ್ಲಾಮ್ ಮತ್ತು ಹಿಂದೂ ಧರ್ಮಗಳಲ್ಲಿ ಬಹಳಷ್ಟು ಸಾಮ್ಯತೆವಿದೆ. ಈ ಕಿರು ಪುಸ್ತಕದಲ್ಲಿ ಈ ಬಗ್ಗೆ ಬೆಳಕನ್ನು ಚೆಲ್ಲಲು ಪ್ರಯತ್ನಿಸಲಾಗಿದೆ. ಈ ರೀತಿ ಹಿಂದೂ ಮತ್ತು ಮುಸ್ಲಿಮರಲ್ಲಿ ಪರಸ್ಪರರ ಬಗ್ಗೆ ಇರಬಹುದಾದ ಅಪನಂಬಿಕೆಗಳು, ತಪ್ಪುಕಲ್ಪನೆಗಳು ದೂರವಾಗಿ ಪ್ರೀತಿ, ಸೌಹಾರ್ದತೆ ಮೂಡಿ ಬಲಿಷ್ಠ ಸಮಾಜದ ನಿರ್ಮಾಣಕ್ಕೆ ನಾಂದಿಯಾಗುವುದೆಂದು ಆಶಿಸಲಾಗಿದೆ.

ಕ್ಯೂ.ಎಸ್. ಖಾನ್
hydelect@vsnl.com.

# INDEX

1. ಪವಿತ್ರ ವೇದಗಳ ಪರಿಚಯ

2. ಕುರ್‌ಆನಿನ ಅರ್ಥವರಿಯುವುದು ಹೇಗೆ?

3. ಪವಿತ್ರ ಕುರ್‌ಆನ್‌ನಲ್ಲಿ ವೇದಗಳ ವರ್ಣನೆ

4. ಪುರುಷ ಮೇಧ ಅಥವಾ ಬಕ್ರೀದ್

5. ಮನು ಅಥವಾ ಹ. ನೂಹ್(ಅ)?

6. ಮಕ್ಕಾ ಅಥವಾ ಮಕ್ತೇಶ್ವರ

7. ಆವಗಮನ ಮತ್ತು ಮರಣೋತ್ತರ ಜೀವನ

8. ಕಲ್ಕಿ ಅವಕಾಶ ಯಾವಾಗ ಬರುವರು?

9. ನಾವು ಯಾರನ್ನು ಆರಾಧಿಸಬೇಕು?

10. ಇಸ್ಲಾಮ್ ಎಂದರೇನು?

11. ಸೃಷ್ಟಿಕರ್ತನು ಯಾರು?

12. ದೈವ ಶಿಕ್ಷೆಗೆ ಕಾರಣಗಳು

13. ವೇದಗಳು ಮತ್ತು ಕುರ್‌ಆನ್‌ನಲ್ಲಿರುವ ಸಮಾನ ಸೂಕ್ತಗಳು

ಅಧ್ಯಾಯ: 1

# 1. ಪವಿತ್ರ ವೇದಗಳ ಪರಿಚಯ
## Introduction to Holy Vedas

• 'ವೇದ' ಪದವು ಮೂಲಪದ– 'ವಿದ್' ಅಥವಾ 'ವಿದ್ಯಾ'ದಿಂದ ಉದ್ಭವಿಸಿದೆ. 'ವಿದ್' ಅಥವಾ 'ವಿದ್ಯಾ' ಪದದ ಅರ್ಥ ಜ್ಞಾನ. ವೇದಗಳ ಅರ್ಥ ಅತ್ಯುತ್ತಮ ಜ್ಞಾನ ಅಥವಾ ಶ್ರೇಷ್ಠ ಜ್ಞಾನವಾಗಿದೆ.

• ಮಹಾಮುನಿ ಪಾತಾಂಜಲಿಯವರ ಕಾಲದಲ್ಲಿ ಸುಮಾರು 1,121 ಸಂಖ್ಯೆ ವೇದಗಳು ಚಾಲ್ತಿಯಲ್ಲಿದ್ದವು. ಸ್ವಾಮಿ ದಯಾನಂದರವರು, ವೇದಗಳು ಕೇವಲ ನಾಲ್ಕು– ಋಗ್ವೇದ, ಅಥರ್ವವೇದ, ಸಾಮವೇದ ಮತ್ತು ಯಜುರ್ವೇದಗಳಾಗಿದ್ದು, ಉಳಿದವು ವೇದಗಳು ವ್ಯಾಖ್ಯಾನಗಳಾಗಿವೆ ಎಂದಿರುವರು.

### ಋಗ್ವೇದ:

• ಋಗ್ವೇದವು ನಾಲ್ಕೂ ವೇದಗಳಲ್ಲಿ ಅತ್ಯಂತ ಹಳೆಯದಾದ ವೇದವಾಗಿದ್ದು, ಸೃಷ್ಟಿಕರ್ತನ ಕೀರ್ತನೆಗಳನ್ನು ಒಳಗೊಂಡಿದೆ. ಋಗ್ವೇದದಲ್ಲಿ ಎರಡು ವಿಧಗಳಿವೆ. ಮೊದಲನೆಯ ವಿಧದಲ್ಲಿ 10 ಮಂಡಲಗಳು (ಪುಸ್ತಕದ ಸಂಪುಟಕ್ಕೆ ಸಮಾನ), ಅನ್‌ವಕ್ (ಪುಸ್ತಕದ ಅಧ್ಯಾಯಕ್ಕೆ ಸಮಾನ) ಮತ್ತು 10,589 ಸೂಕ್ತಗಳಿವೆ. ಎರಡನೆಯ ವಿಧದ ಋಗ್ವೇದದಲ್ಲಿ ಎಂಟು ಅಷ್ಟಕಗಳು (ಸಂಪುಟಗಳು) 64 ಅಧ್ಯಾಯಗಳು ಮತ್ತು 10,589 ಸೂಕ್ತಗಳಿವೆ.

### ಯಜುರ್ವೇದ:

• ಯಜುರ್ವೇದ ಗದ್ಯ ರೂಪದಲ್ಲಿದೆ. ಇದು 'ಯಜ್ಞ'ದ ವಿಧಿ, ವಿಧಾನಗಳ ವಿವರಣೆಗಳನ್ನು ಒಳಗೊಂಡಿದೆ. ಯಜುರ್ವೇದವು ಋಗ್ವೇದದ 75% ರಷ್ಟಿದೆ.

### ಸಾಮವೇದ:

• ಸಾಮವೇದವು ಧಾರ್ಮಿಕ ಜ್ಞಾನ ಮತ್ತು ಪ್ರಾರ್ಥನೆಗಳನ್ನು ಒಳಗೊಂಡಿದೆ. ಸಾಮವೇದದ ಎಲ್ಲಾ ಸೂಕ್ತಗಳು ಪದ್ಯ ರೂಪದಲ್ಲಿವೆ. ಈ ಸೂಕ್ತಗಳನ್ನು 'ಯಜ್ಞ'ದ ಸಮಯದಲ್ಲಿ ಪಠಿಸಲಾಗುತ್ತದೆ. ಸಾಮವೇದದಲ್ಲಿ 1810 ಮಂತ್ರಗಳಿವೆ. 1735 ಮಂತ್ರಗಳೂ ಋಗ್ವೇದಕ್ಕೆ ಸಂಬಂಧಿಸಿದವಾಗಿವೆ.

### ಅಥರ್ವವೇದ:

• ಅಥರ್ವವೇದ ಎಲ್ಲಾ ವೇಶಗಳ ಸಾರಾಂಶವಾಗಿದೆ. ಅಥರ್ವವೇದಲ್ಲಿ ಮಂತ್ರಗಳು ಪದ್ಯ ರೂಪದಲ್ಲೂ, ಗದ್ಯರೂಪದಲ್ಲೂ ಇವೆ. ಅಥರ್ವವೇದವು, ಇಂದ್ರಜಾಲ, ದುಷ್ಟ ಆತ್ಮ, ಪ್ರಾರ್ಥನೆಗಳು, ರಾಜಕೀಯ ಮತ್ತು ಸಾಮಾಜಿಕ ಕಾನೂನುಗಳ ಬಗ್ಗೆ ವಿವರಣೆ ನೀಡುವ ಸೂಕ್ತಗಳನ್ನು ಒಳಗೊಂಡಿದೆ. ವಿವಾಹ ಮತ್ತು ವಿವಾಹಕ್ಕೆ ಸಂಬಂಧಿಸಿದ ಆಚರಣೆಗಳ ಬಗ್ಗೆ ಸೂಕ್ತಗಳೂ ಇದರಲ್ಲಿವೆ. ಅಥರ್ವವೇದದಲ್ಲಿ ಈ ಜಗತ್ತಿಗೆ ಬರಲಿದ್ದ 'ಅಂತಿಮ ಪ್ರವಾದಿ'ಯ ಬಗ್ಗೆ ಭವಿಷ್ಯವಾಣಿವಿದೆ.

ವೇದಗಳಲ್ಲಿರುವ ಮಂತ್ರಗಳ ವರ್ಗೀಕರಣಕ್ಕೆ 'ಸಂಗ್ತ'ವೆನ್ನುತ್ತಾರೆ. ಮಹಾ ವಿದ್ವಾಂಸ ವೇದ ವ್ಯಾಸರವರು ಎಲ್ಲಾ ವೇದಗಳಲ್ಲಿಯ ಮಂತ್ರಗಳನ್ನು ವರ್ಗೀಕರಿಸಿದ್ದಾರೆ.

• ಹಿಂದೂ ಧರ್ಮ ಗ್ರಂಥಗಳ ಬಗ್ಗೆ ಸಂಶೋಧನೆ ನಡೆಸಿರುವ ಆಂಗ್ಲ ಲೇಖಕರಾದ ಮಿ. ಮ್ಯಾಗ್‌ಡನೆಲ್ (ಒಡಿ. ಒಚಿರಿಜಚಿಟಿಜಟ), ಮಿ. ರೆವೆರೆಂಟ್ ಇಮರ್‌ಷನ್ (ಒಡಿ. ಖಜತಜಡಿಜಟಿಣ ಖಟಟಜಡ್ಲಿಲಿಟಿ), ಮಿ. ಮ್ಯಾಕ್ಸ್ ಮುಲ್ಲರ್ (ಒಡಿ. ಒಚಿಥ ಒಣಟಟಜಡಿ) ಮೊದಲಾದವರು, ವೇದಗಳು ಕ್ರಿಸ್ತಪೂರ್ವ 800-1200ರಲ್ಲಿ ಅವತೀರ್ಣಗೊಂಡಿವೆಂದು ನುಡಿಯುತ್ತಾರೆ. ಸ್ವಾಮಿ ದಯಾನಂದರು ಈ ಜಗತ್ತಿನ ಸೃಷ್ಟಿಯ ಸಮಯದಲ್ಲಿ ಮಿಲಿಯ ವರ್ಷಗಳ ಹಿಂದೆ ವೇದಗಳು ಅವತೀರ್ಣಗೊಂಡಿದ್ದವುವೆನ್ನುತ್ತಾರೆ.

• ಜನಸಮಾನ್ಯರು ವೇದಗಳನ್ನು 'ಅಪ್ಸರ್ ಶೀ'ವೆಂದು ಪರಿಗಣಿಸುತ್ತಾರೆ. ಅಂದರೆ ಯಾವನೇ ಪುರುಷ ಅಥವಾ ವ್ಯಕ್ತಿ ಇವುಗಳನ್ನು ರಚಿಸಿಲ್ಲ. ವೇದಗಳನ್ನು (आदी ज्ञान) 'ಆದಿ ಜ್ಞಾನ'- ದೇವವಾಡೆ (आदी ग्रंथ) ಮತ್ತು ಆದಿ ಗ್ರಂಥ- ಪ್ರಾಚೀನ ಗ್ರಂಥವೆಂತಲೂ ಕರೆಯುತ್ತಾರೆ.

• ವೇದಗಳನ್ನು 'ಶ್ರುತಿ ಜ್ಞಾನ' (श्रुती ज्ञान) ಎಚಿದೂ ಕರೆಯುತ್ತಾರೆ. ಅಂದರೆ ಶ್ರವಣ ಮಾಡುವ ಜ್ಞಾನ ಅಥವಾ ಶ್ರವಣ ಶಕ್ತಿಯಿಂದ ಪಡೆಯುವ ಜ್ಞಾನ. ಸಹಸ್ರಾರು ವರ್ಷಗಳವರೆಗೆ ವೇದಗಳು ಲಿಖಿತ ರೂಪದಲ್ಲಿ ಇರಲಿಲ್ಲ. ಪುರೋಹಿತ ವರ್ಗ ಸಂಪೂರ್ಣ ವೇದಗಳನ್ನು ಕಂಠಪಾಠ ಮಾಡುತ್ತಿತ್ತು. ಈ ರೀತಿ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾಯಿಸಲ್ಪಡುತ್ತಿತ್ತು. ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ಮಾಕ್ಸ್ ಮುಲ್ಲರ್ ಪ್ರಥಮ ಬಾರಿಗೆ ವಿವಿಧ ಮೂಲಗಳಿಂದ ವೇದಗಳನ್ನು ಕ್ರೋಢೀಕರಿಸಿ ಗ್ರಂಥ ರೂಪದಲ್ಲಿ ತಂದರು.

• ಕೆಲ ಸಂಸ್ಕೃತ ವಿದ್ವಾಂಸರು, ವೇದಗಳು ಸೃಷ್ಟಿಕರ್ತನಿಂದ ಅವತೀರ್ಣಗೊಂಡ ಗ್ರಂಥಗಳಾಗಿರದೇ ಮಾನವ ರಚಿತ ಗ್ರಂಥಗಳಾಗಿವೆ ಎನ್ನುತ್ತಾರೆ. 'ತಾತ್ರಿಯ ಬ್ರಾಹ್ಮಣ' ಸಹ ಈ ಮಾತನ್ನೇ ಹೇಳುತ್ತದೆ. ವೇದಗಳಲ್ಲಿರುವ ಕೆಲ ಸೂಕ್ತಗಳು ಇದಕ್ಕೆ ಕಾರಣವೆನ್ನಲಾಗುತ್ತದೆ. ಉದಾಹರಣೆಗೆ ಋಗ್ವೇದ ಈ ರೀತಿ ಹೇಳುತ್ತದೆ. "ಶೂದ್ರನಿಗೆ ಉತ್ತಮ ಸಲಹೆಯನ್ನು ನೀಡಬಾರದು." (ಋಗ್ವೇದ 110/70/8) ಋಗ್ವೇದದ ಮತ್ತೊಂದು ಸೂಕ್ತ ಈ ರೀತಿ ನುಡಿಯುತ್ತದೆ. "ಯಾವನೇ ಶೂದ್ರ ವರ್ಗಕ್ಕೆ ಸೇರಿದ ವ್ಯಕ್ತಿ ವ್ಯಾಪಾರವನ್ನು ಆರಂಭಿಸಿದರೆ ಅಥವಾ ಉಚ್ಛ ವರ್ಗದ ಕೆಲಸಗಳನ್ನು ಮಾಡಲಾರಂಭಿಸಿದರೆ, ರಾಜನು ಅಂತಹ ವ್ಯಕ್ತಿಯ ಸ್ವತ್ತನ್ನು ಮುಟ್ಟುಗೋಲು ಮಾಡಿ ರಾಜ್ಯದಿಂದ ಹೊರಹಾಕಬೇಕು." ಈ ರೀತಿಯ ಸೂಕ್ತಗಳು ದೈವಿಕವಾಗಲು ಸಾಧ್ಯವಿಲ್ಲವೆಂದು ಹೇಳಲಾಗುತ್ತದೆ. (ಋಗ್ವೇದ 14/53/3) (ಡಬ್ಲೂ.ಜೆ. ವಿಲ್‌ಕಿನ್ಸ್‌ರವರ ಹಿಂದೂಸ್ ಮೈಥಾಲಜಿಯಿಂದ ಉದ್ಧೃತ).

• ಆರಂಭದಲ್ಲಿ ವೇದಗಳು ಲಿಖಿತ ರೂಪದಲ್ಲಿ ಇರದಿದ್ದ ಕಾರಣ ಮತ್ತು ದೀರ್ಘಕಾಲದ ನಂತರ ವೇದಗಳನ್ನು ಲಿಖಿತ ರೂಪದಲ್ಲಿ ತಂದ ಕಾರಣ, ದೈವಿಕ ವಾಣಿಯ ಜೊತೆಯ ಗ್ರಂಥ ರಚನೆಕಾರರ ವಿಚಾರಗಳೂ ಸೇರ್ಪಡೆಯಾಗಿರಬೇಕೆಂದು ಕೆಲ ವಿದ್ವಾಂಸರು ನುಡಿಯುತ್ತಾರೆ. ಮಾನವ ವಾಕ್ಯಗಳನ್ನು ವೇದಗಳಿಂದ ಹೊರತುಪಡಿಸಿದರೆ, ವೇದಗಳಲ್ಲಿರುವ ವಿಚಾರ ಇತರ ದೈವಿಕ ಗ್ರಂಥಗಳು ಉದಾಹರಣೆಗೆ ಬೈಬಲ್, ಕುರ್‌ಆನ್‌ನಲ್ಲಿರುವ ವಿಚಾರಗಳೊಂದಿಗೆ ಸಾಮ್ಯತೆ ಹೊಂದಿದೆ.

(ಗ್ರಿಫಿತ್ ತಮ್ಮ ಪುಸ್ತಕ ಊಥಿಟಟಿ ಂಜಿ ಋಿಗ ತಜಜಚಿ- ಭಾಗ 1ರಲ್ಲಿ)

• ಅಥವ್ಯ 'ಆದಿ ಗ್ರಂಥ' ಅಂದರೆ ಈ

ಮೊದಲು ಅಥವಾ ದೀರ್ಘಕಾಲದ ಮೊದಲು ಅವತೀರ್ಣಗೊಂಡಿರುವ ಗ್ರಂಥವೆಂಬುದಾಗಿದೆ.

● ಮ್ಯಾಕ್ಸ್ ಮುಲ್ಲರ್ ಸುಮಾರು 20 ವರ್ಷಗಳ ಪರಿಶ್ರಮದ ನಂತರ ಬಹಳಷ್ಟು ಸಂಪತ್ತನ್ನು ವಿನಿಯೋಗಿಸಿದ ಬಳಿಕ ಪವಿತ್ರ ವೇದಗಳ ಒಂದೇ ಒಂದು ಪರಿಪೂರ್ಣ ವ್ಯಾಖ್ಯಾನ ಗ್ರಂಥವನ್ನು ಸಂಗ್ರಹಿಸುವುದರಲ್ಲಿ ಸಫಲರಾದರು. ಈ ವ್ಯಾಖ್ಯಾನವನ್ನು ಆಚಾರ್ಯ ಸಯನ್‌ರವರು ರಚಿಸಿರುವರು. ಈ ಗ್ರಂಥದ ಆಧಾರದ ಮೇಲೆ ಇತರ ವ್ಯಾಖ್ಯಾನ– ಗ್ರಂಥಗಳ ಶೋಧನೆಯಲ್ಲಿ ಮ್ಯಾಕ್ಸ್ ಮುಲ್ಲರ್ ತೊಡಗಿದ್ದರು.

[ಉಲ್ಲೇಖ: ಭೂಮಿಕ ಯಜುರ್ವೇದ ಪುಟ 403, ತಂತ್ರ ಮಹಾ ವಿಜ್ಞಾನ್ (1:2) ಪಂಡಿತ ಶ್ರೀ ರಾಮ್ ಶ್ಯಾಮ್‌ಜಿ.]

ವೇದಗಳ ಭಾಷ್ಯವನ್ನು ಪ್ರಥಮ ಬಾರಿಗೆ ಯಸ್ಕ್‌ರವರು ರಚಿಸಿದ್ದರು. ಅವರ ಗ್ರಂಥದ ಶೀರ್ಷಿಕೆ 'ವರಕಟ್'ವೆಂದಾಗಿತ್ತು. ಪೂರ್ಣ ರೂಪದಲ್ಲಿ ಅದು ಲಭ್ಯವಿಲ್ಲ. ನವೀನ ಕಾಲದಲ್ಲಿ ವೇದಗಳ ಭಾಷ್ಯವನ್ನು ರಚಿಸಿದರವರಲ್ಲಿ ಸ್ವಾಮಿ ದಯಾನಂದ, ಅರವಿಂದ ಘೋಷ್, ಡಾ। ಆನಂದ ಕುಮಾರ್ ಸ್ವಾಮಿ ಮೊದಲಾದವರು ಇರುವರು.

**ವೇದಗಳಲ್ಲಿ ಜ್ಞಾನದ ಭಂಡಾರವೇ ಅಡಗಿದೆ. ಕೆಲವನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ.**

1. ಇದು ನನ್ನದು, ಇದು ನಿನ್ನದು ಎನ್ನುವ ಮಾತು ಕೇಳಮಟ್ಟದ ಜನರದ್ದಾಗಿದೆ. ವಿಶಾಲ ಮನೋಭಾವವನ್ನು ಹೊಂದಿರುವ ಜನರು, ಸಂಪೂರ್ಣ ಜಗತ್ತನ್ನು ಒಂದೇ ಕುಟುಂಬವೆಂದು ಪರಿಗಣಿಸುತ್ತಾರೆ. (उदार चरितानान्तु वसुधैव कुटुम्बकम)

2. ಸನ್ಮಾರ್ಗವು ಸರಳವಾಗಿರುವುದು.
(ಋಗ್ವೇದ 8/3/13)

3. ಜೂಜುಕೋರನ ಪ್ರತಿಯೊಂದು ಉಸಿರಾಟ ಆತನನ್ನು ಶಪಿಸುತ್ತಿರುತ್ತದೆ. ಜೂಜುಕೋರನ ಹೆಂಡತಿಯೂ ಜೂಜುಕೋರನನ್ನು ತ್ಯಜಿಸುತ್ತಾಳೆ. ಯಾರೂ ಜೂಜಕೋರನಿಗೆ ಧನ ಸಹಾಯವನ್ನು ನೀಡುವುದಿಲ್ಲ.
(ಋಗ್ವೇದ 10–34/3)

4. ಜೂಜುಕೋರರೇ, ಜೂಜನ್ನು ತೊರೆಯಿರಿ, ವ್ಯವಸಾಯದಲ್ಲಿ ತೊಡಗಿರಿ. ವ್ಯವಸಾಯದಲ್ಲಿ ಬರುವ ಸಂಪಾದನೆಯಲ್ಲಿ ಸಂತೃಪ್ತರಾಗಿರಿ.
(ಋಗ್ವೇದ 10/34/13)

5. ಮದ್ಯಪಾನ ಮಾಡುವವರು ತಮ್ಮ ಮೇಲಿನ ಹತೋಟಿಯನ್ನು ಕಳೆದುಕೊಂಡಿರುತ್ತಾರೆ. ನಿಮಗೆ ಕಿರಿಕಿರಿಯನ್ನುಂಟು ಮಾಡುತ್ತಾರೆ. ಓ ಈಶ್ವರನೇ!, ಇಂತಹ ಜನರಿಗೆ ನೀನೂ ಸಹಾಯ ಮಾಡಬೇಡ.

6. ಓ ದೇವರೇ! ಹೆಚ್ಚಿನ ಲಾಭ (ಬಡ್ಡಿ) ಪಡೆಯುವ ಆಸೆಯಿಂದ ಸಾಲವನ್ನು ನೀಡುವವರ ಸಮೃದ್ಧಿಯನ್ನು ಕೊನೆಗೊಳಿಸು.

7. (ಓ ಜನರೇ) ನಿಮ್ಮ ಹಿರಿಯರನ್ನು ಗೌರವಿಸಿರಿ. ಉತ್ತಮ ವಿಚಾರಗಳನ್ನು ಹೊಂದಿರಿ. ಪರಸ್ಪರ ಸ್ನೇಹದಿಂದಿದ್ದು ಒಗ್ಗಟ್ಟಾಗಿರಿ. ಛಿದ್ರರಾಗಬೇಡಿ. ಒಳಿತಿನ ಕಾರ್ಯಗಳ ಮೂಲಕ ನನ್ನ ಬಳಿಗೆ ಬನ್ನಿರಿ. ನಿಮ್ಮೊಳಗೆ ವಿವೇಚನೆ ಮತ್ತು ಒಮ್ಮತ ಮೂಡುವಂತೆ ಮಾಡುವೆನು.
(ಋಗ್ವೇದ: 10–191–3)

8. ಮಹಿಳೆಯರೇ, ನಿಮ್ಮ ದೃಷ್ಟಿಗಳನ್ನು ಕೆಳಗಿಳಿಸಿರಿ, ಕಾಲುಗಳನ್ನು ಒಂದೇ ಸಮವಾಗಿಸಿ ನಿಮ್ಮ ದೇಹವನ್ನು ಪ್ರಕಟಿಸುವಂತಹ ಉಡುಪನ್ನು ಧರಿಸಬೇಡಿರಿ.
(ಋಗ್ವೇದ: 8–33–19)

9. ಪುತ್ರನು ತಂದೆಗೆ ಅಧೀನವಾಗಿರಬೇಕು ಮತ್ತು ತಾಯಿಗೆ ವಿಧೇಯನಾಗಿರಬೇಕು.
(ಅಥರ್ವವೇದ: 3–30–2)

10. ಉದಾರವಾಗಿ ದಾನ ಮಾಡುವವರು ಅಮರರಾಗುತ್ತಾರೆ. ಭಯ ಮತ್ತು ದುಃಖ ಅವರನ್ನು ಭಾದಿಸದು. ವಿನಾಶದಿಂದ ಅವರು ಸಂರಕ್ಷಿತರಾಗಿರುತ್ತಾರೆ. ದಾನಶೀಲತೆಯುಳ್ಳವರು ಇಹಲೋಕದಲ್ಲೂ ಮತ್ತು ಪರಲೋಕದಲ್ಲೂ ಯಶಸ್ಸನ್ನು ಹೊಂದುವರು.

11. ಓ ಜನರೇ, ಸೃಷ್ಟಿಕರ್ತನಲ್ಲದೇ ಇತರ ಯಾರನ್ನೂ ನೀವು ಆರಾಧಿಸದಿದ್ದರೆ, ಶಿಕ್ಷೆಯಿಂದ ನೀವು ರಕ್ಷಿಸಲ್ಪಡುವಿರಿ.
(ಋಗ್ವೇದ: 10–117–6)

12. ಯಾರು ಶ್ರಮದಿಂದ ಮಾಡಿದ ಸಂಪಾದನೆಯನ್ನು (ಬಡ ಜನರೊಂದಿಗೆ) ಹಂಚಿಕೊಳ್ಳುವುದಿಲ್ಲವೋ, ಅವರು ನಿಷಿದ್ಧ ಸಂಪದನೆಯನ್ನು ಬಳಸಿದಂತೆ.
(ಋಗ್ವೇದ: 10–117–6)

13. ಓ ದೇವನೇ! ಸಚ್ಚಾರಿತ್ರ್ಯವುಳ್ಳ ವ್ಯಕ್ತಿಯನ್ನು ಅನುಗ್ರಹಿಸು. ಇದು ನಿನ್ನ ವೈಶಿಷ್ಟ್ಯವಾಗಿದೆ.

14. ಓ ದೇವನೇ! ನಿನ್ನ ಮಹಾನತೆಯ ಎದುರು ಈ ವಿಶ್ವವು ಕಂಪಿಸುತ್ತದೆ. ಕೆಡುಕಿನ ಕಾರ್ಯಗಳನ್ನು ಮಾಡಿದವರ ಮೇಲೆ ನಿನ್ನ ಯಾತನೆ ಎರಗುತ್ತದೆ ಮತ್ತು ಒಳಿತಿನ ಕಾರ್ಯಗಳನ್ನು ಮಾಡಿದವರ ಮೇಲೆ ನಿನ್ನ ಅನುಗ್ರಹವು ವರ್ಷಿಸುತ್ತದೆ.
(ಅಥರ್ವವೇದ: 01–80–11)

15. ಓ ಸತ್ಯವಿಶ್ವಾಸಿಗಳೇ! ಸೃಷ್ಟಿಕರ್ತನಲ್ಲದೇ ಇನ್ನಾರ ಆರಾಧನೆಯನ್ನು ಮಾಡಬೇಡಿರಿ. ಆತನು ಏಕೈಕನಾಗಿರುವನು. (ಋಗ್ವೇದ: 8/4/1)

16. ಸೃಷಿಕರ್ತನು ಏಕೈಕನಾಗಿರುವನು.
(ಅಥರ್ವವೇದ: 10/9–29)

17. ಎಲ್ಲಾ ಮಾನವರು 'ಮಗು'ವಿನ (ಆದಮ್) ಸಂತತಿಯಾಗಿರವರು (ಋಗ್ವೇದ: 01/45/01)

ವೇದಗಳಲ್ಲಿ ಹದಿನಾಲ್ಕು ಮನುಗಳಿರುವರು. ಆದಮ್ ಅವರಲ್ಲಿ ಓರ್ವರಾಗಿರುವರು. 'ಮಹಾ ಪ್ರವಾಹ'ದ ಸಮಯದಲ್ಲಿ ಹಡಗಿನ ಮೂಲಕ ಬದುಕಿನ ಉಳಿದ 'ಮನು' ವಿಳನೇಯು 'ಮನು'ವಾಗಿದ್ದರು. ಪವಿತ್ರ ವೇದಗಳಲ್ಲಿ ಪ್ರವಾದಿಗಳನ್ನು 'ಮನು'ವೆಂದು ಕರೆಯಲಾಗಿದೆ.

18. ಜನರು ವಿನಯಶೀಲರಾಗಿ ಒಳಿತಿನ ಪಥವನ್ನು ಅನುಕ್ರಮಿಸಬೇಕು.
(ಋಗ್ವೇದ: 10–31–02)

19. ಯತ್ನವಿಲ್ಲದೇ, ದೈವವೂ ದೇವನ ಅನುಗ್ರಹವನ್ನು ಪಡೆಯುವುದಿಲ್ಲ.
(ಯರ್ಜುವೇದಳ 01–45–01)

20. ಸೃಷ್ಟಿಕರ್ತನು ಮಾನವರಿಗೆ ಸೌಹಾರ್ದತೆಯ, ಸಹನೆಯ ಮತ್ತು ಪ್ರೀತಯ ಅಪ್ಪಣೆಯನ್ನು ನೀಡಿರುವನು. ಗೋವು ತನ್ನ ಕರುವನ್ನು ಪ್ರೀತಿಸಿದಂತೆ, ಪರಸ್ಪರರನ್ನು ಪ್ರೀತಿಸಿರಿ. (ಅಥರ್ವವೇದ: 03: 30:02)

### ಅಧ್ಯಾಯ: 2

# ಕುರ್‌ಆನಿನ ಅರ್ಥ ವರಿಯುವುದು ಹೇಗೆ?

## How to Understand Holy Quran?

● ಕುರ್‌ಆನ್ ತನ್ನ ಬಗ್ಗೆ ಈ ರೀತಿ ಪರಿಚಯಿಸಿಕೊಳ್ಳುತ್ತದೆ. "ನಿಸ್ಸಂದೇಹವಾಗಿ ಇದು (ದೈವಿಕ) ಗ್ರಂಥ; ಸಂದೇಹಾತೀತವಿದು. (ಭಯ ಭಕ್ತಿಯುಳ್ಳ) ವರಿಗೆ ಇದು ಮಾರ್ಗದರ್ಶಿ. ಪರೋಕ್ಷದ ಮೇಲೆ ವಿಶ್ವಾಸವಿರುವವರಿಗೆ, ನಮಾಝನ್ನು ಸಂಸ್ಥಾಪಿಸುವವರಿಗೆ, ನಾವು ನೀಡಿದ ಸಂಪತ್ತಾ ಕರ್ಯಗಳಿಂದ ವ್ಯಯಿಸುವವರಿಗೆ, ನಿಮಗೆ ಅವತೀರ್ಣಗೊಳಿಸಿದ ಗ್ರಂಥದ (ಕುರ್‌ಆನ್) ಮತ್ತು ನಿಮಗಿಂತ ಮೊದಲು ಅವತೀರ್ಣಗೊಳಿಸಿದ್ದ ಎಲ್ಲಾ ಗ್ರಂಥಗಳ ಮೇಲೆ ವಿಶ್ವಾಸವಿಡುವವರಿಗೆ ಮತ್ತು ಪರಲೋಕದ ಮೇಲೆ ದೃಢ ವಿಶ್ವಾಸ ವಿಡುವವರಿಗೆ (ಇದು ಮಾರ್ಗದರ್ಶಿ). ಅಂತಹವರು ತಮ್ಮ ಪ್ರಭುವಿನ ಸನ್ಮಾರ್ಗದಲ್ಲಿದ್ದಾರೆ ಮತ್ತು ಅವರೇ ಯಶಸ್ವಿಯಾಗುವವರು. (ಕುರ್‌ಆನ್: 2–1–4)

● ಪ್ರವಾದಿ ಮುಹಮ್ಮದ್(ಸ)ರ ಮೇಲೆ ಪ್ರಥಮ ದಿವ್ಯವಾಣಿ ಕ್ರಿ.ಶ. 611ರಲ್ಲಿ ಅವತೀರ್ಣಗೊಂಡಿತು. ಅಂತಿಮ ದಿವ್ಯವಾಣಿ ಕ್ರಿ.ಶ. 634ರಲ್ಲಿ ಅವತೀರ್ಣಗೊಂಡಿತು. ಹೀಗೆ 23 ವರ್ಷಗಳ ಅವಧಿಯಲ್ಲಿ ಸಂದರ್ಭಾನುಸಾರ ಭಾಗ ಭಾಗವಾಗಿ ಕುರ್‌ಆನ್ ಅವತೀರ್ಣಗೊಂಡಿತು.

● ಪವಿತ್ರ ಕುರ್‌ಆನ್ ಬೋಧಿಸಬೇಕಾದ ವಿಷಯದ ರೂಪ ರೇಖೆಯಾಗಿರುವುದು. ಅದು ಪಠ್ಯ ಪುಸ್ತಕವಲ್ಲ. ಸೃಷ್ಟಿಕರ್ತನು ವಿಷಯದ ಶೀರ್ಷಿಕೆಯನ್ನು ನೀಡಿದನು. ಪ್ರವಾದಿ ಮುಹಮ್ಮದ್(ಸ) ಜನರಿಗೆ ವಿಷಯವನ್ನು ನಿರೂಪಿಸಿದರು. ಇದನ್ನು ಒಂದು ಉದಾಹರಣೆಯಿಂದ ಸರಳವಾಗಿ ಅರ್ಥಮಾಡಿ ಕೊಳ್ಳಬಹುದು. ಸೃಷ್ಟಿಕರ್ತನು ಕುರ್‌ಆನ್‌ನಲ್ಲಿ ನಮಾಝ್‌ನ ಆಜ್ಞೆಯನ್ನು ನೀಡಿದ್ದಾನೆ. ಆದರೆ ಕುರ್‌ಆನ್ ನಮಾಝ್ ನಿರ್ವಹಿಸುವ ಕುರಿತು ವಿವರಣೆಗಳನ್ನು ನೀಡಿಲ್ಲ. ಪ್ರವಾದಿ ಮುಹಮ್ಮದ್(ಸ) ನಮಾಝ್ ನಿರ್ವಹಿಸುವ ವಿಧಿ–ವಿಧಾನಗಳನ್ನು ಜನರಿಗೆ ಕಲಿಸಿಕೊಟ್ಟರು. ಆದುದರಿಂದ ಕುರ್‌ಆನಿನ ಅಧ್ಯಯನ ಮಾಡುವಾಗ ಪಠ್ಯ ಪುಸ್ತಕದಂತೆ, ಧಾರ್ಮಿಕ ವಿಷಯದ ಬಗ್ಗೆ ಕ್ರಮ ಸಿದ್ಧವಾದ ವಿವರಣೆಯನ್ನು ನೀವು ಪ್ರತೀಕ್ಷಿಸ ಬೇಡಿ.

ಕುರ್‌ಆನ್ ಸರಿಯಾಗಿ ಅರ್ಥೈಸಿಕೊಳ್ಳಲು, ಈ ಕೆಳಗಿನ ಅಂಶಗಳನ್ನು ಗಮನದಲ್ಲಿಡ ಬೇಕು.

**1.** ಕುರ್‌ಆನ್ ಲಿಖಿತ ದೈವಾಜ್ಞೆ ರೂಪದಲ್ಲಿ ಅವತೀರ್ಣಗೊಂಡಿರುವುದಿಲ್ಲ. ಕುರ್‌ಆನ್ ಮಾತಿನ ರೂಪದಲ್ಲಿ ಅವತೀರ್ಣಗೊಂಡಿತು. ಸೃಷ್ಟಿಕರ್ತನು ದೇವಚರ ಹ. ಜಿಬ್ರೀಲ್(ಅ)ರ ಮೂಲಕ ದಿವ್ಯ ವಾಣಿಯನ್ನು ಹ. ಮುಹಮ್ಮದ್(ಸ)ರಿಗೆ ತಲುಪಿಸಿದನು. ಹಲವೊಮ್ಮೆ ದಿವ್ಯವಾಣಿ ನೇರವಾಗಿ ಹ. ಮುಹಮ್ಮದ್(ಸ)ರ ಹೃದಯಲ್ಲಿ ನೇರವಾಗಿ ಅವತೀರ್ಣಗೊಳ್ಳುತ್ತಿತ್ತು.

**2.** ಕುರ್‌ಆನ್‌ನಲ್ಲಿ ಮೂರು ವಿಧದ ಸೂಕ್ತಗಳಿವೆ. ಮೊದಲನೆಯ ವಿಧದಲ್ಲಿ ಇತರ ಧರ್ಮಗಳ ಇತಿಹಾಸ, ಇತರ ಧರ್ಮಗಳ ಪ್ರವಾದಿಗಳು, ಧರ್ಮ ಗ್ರಂಥಗಳು, ಜನರ ಜೀವನ ಕ್ರಮದ ಬಗ್ಗೆ ವಿವರಣೆಗಳಿವೆ.

ಎರಡನೆಯ ವಿಧದ ಸೂಕ್ತಗಳು ಧರ್ಮದ ನಿಯಮ ಕಟ್ಟು ಕಟ್ಟಲೆಗಳು, ಒಳಿತು–ಕೆಡಕುಗಳು, ಪಾಪ–ಪುಣ್ಯ, ಯಾವುದು ನಿಷಿದ್ಧ? ಯಾವುದು ಕಾನೂನು ಬದ್ಧ ಮೊದಲಾದವುಗಳ ಬಗ್ಗೆ ವಿವರಣೆಗಳನ್ನು

ನೀಡುತ್ತದೆ.

ಮೂರನೆಯ ವಿಧದ ಸೂಕ್ತಗಳು ಮಾನವ ಜನಾಂಗದ ಮಾರ್ಗದರ್ಶನಕ್ಕಾಗಿವೆ. ಇಹಪರಗಳಲ್ಲಿ ಯಶಸ್ಸು ಗೊಳಿಸಲು, ಶಾಂತಿ, ನೆಮ್ಮದಿಯಿಂದ ಜೀವನ ಸಾಗಿಸಲು ಅಗತ್ಯವಿರುವ ಸೂತ್ರಗಳನ್ನು ಇವು ನೀಡುತ್ತವೆ.

**3**. ಪ್ರತಿಯೊಂದು ಕುರ್‌ಆನ್ ಸೂಕ್ತವು ನಿರ್ದಿಷ್ಟ ಕಾರಣಕ್ಕಾಗಿ ಅವತೀರ್ಣಗೊಂಡಿರುತ್ತದೆ. ಆದುದರಿಂದ ಕುರ್‌ಆನಿನ ಯಾವುದೇ ಸೂಕ್ತದ ಅರ್ಥವರಿಯಲು ಆ ಸೂಕ್ತವು ಯಾವ ಸನ್ನಿವೇಶದಲ್ಲಿ ಅವತೀರ್ಣಗೊಂಡಿತ್ತು? ಎಂಬುದನ್ನು ಗಮನದಲ್ಲಿಡುವುದು ಅವಶ್ಯಕವಾಗಿರುತ್ತದೆ.

**4**. ಕುರ್‌ಆನ್ ಆಲೋಚಿಸಲು, ವಿವೇಚಿಸಲು ಮತ್ತು ಪರಿಷ್ಕರಿಸಿಕೊಳ್ಳಲು ಜನರಿಗೆ ಕರೆ ನೀಡುತ್ತದೆ. ಈ ಕಾರಣದಿಂದ, ಕುರ್‌ಆನಿನ ಸೂಕ್ತಗಳ ಬಗ್ಗೆ ತರ್ಕಿಸಿ, ಸೂಕ್ತಗಳ ಸಂದೇಶವನ್ನು, ಆದೇಶವನ್ನು ಸ್ವೀಕರಿಸಿ, ಅನುಸರಿಸುವುದು ಅಗತ್ಯವಾಗುತ್ತದೆ.

**5**. ಕುರ್‌ಆನ್ ಅರೇಬಿಯಾ ಪ್ರದೇಶದಲ್ಲಿ ಅವತೀರ್ಣಗೊಂಡಿತ್ತು. ಆದುದರಿಂದ ಅದರ ಪ್ರಥಮ ಅಭಿಸಂಭೋದಿತರು ಅರಬರಾಗಿದ್ದರು. ಕುರ್‌ಆನ್‌ನಲ್ಲಿ ಉಲ್ಲೇಖಿಸಲ್ಪಟ್ಟಿರುವ ಪುರಾತನ ನಾಗರಿಕತೆಗಳು (Old Civilizations) ಅರೇಬೀಯಾದ ಸುತ್ತ ಮತ್ತ ಅದ್ದವು, ಮತ್ತು ಅರಬರು ಈ ನಾಗರಿಕತೆಗಳ ಬಗ್ಗೆ ಅರಿವನ್ನು ಹೊಂದಿದ್ದರು. ಈ ಕಾರಣದಿಂದ, ಕುರ್‌ಆನ್‌ನಲ್ಲಿ ಉಲ್ಲೇಖಿಸಲ್ಪಟ್ಟಿರುವ ನಾಗರಿಕತೆಗಳ ಮೇಲೆ ಎರಗಿರುವ ಅಲ್ಲಾಹನ ಯಾತನೆಯ ಪ್ರಸ್ತಾಮ ಬಂದಗ, ಸ್ವಾಭಾವಿಕವಾಗಿ ಅರಬರು ಪ್ರಭಾವಿತಗೊಂಡಿದ್ದರು.

● ಪ್ರವಾದಿಗಳು ಸೃಷ್ಟಿಕರ್ತನ ಸಂದೇಶವನ್ನು ಜನರ ಮುಂದೆ ಇಟ್ಟಿದಾಗ, ಸಾಮಾನ್ಯವಾಗಿ ಜನರು ಪ್ರವಾದಿಗಳ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದರು. ಆದ ಕಾರಣ ಸೃಷ್ಟಿಕರ್ತನು ಹೆಚ್ಚಿನ ಪ್ರವಾದಿಗಳಿಗೆ ಪವಾಡಗಳನ್ನು ಮಾಡುವ ಸಾಮರ್ಥ್ಯವನ್ನು ನೀಡಿದ್ದನು. ಪ್ರವಾದಿ ಹ. ಮೂಸಾ(ಅ) ರವರ ಕಾಲದಲ್ಲಿ ಜನರಲ್ಲಿ ಮಾಯ ಮಾಟ ಮಾಡುವುದು ವ್ಯಾಪಕವಾಗಿತ್ತು. ಸೃಷ್ಟಿಕರ್ತನು ಪ್ರವಾದಿ ಹ. ಮೂಸಾ(ಅ)ರಿಗೆ ಮಾಟ ಮಾಡುವ ವಿಶೇಷತೆಯನ್ನು ನೀಡಿದ್ದನು. ಹ. ಮೂಸಾ(ಅ) ತಮ್ಮ ಊರುಗೋಲನ್ನು ಎಸೆದಾಗ, ಅದು ಹೆಬ್ಬಾವು ಆಗಿ ಮಾರ್ಪಡುತ್ತಿತ್ತು. ಈ ಪವಾಡವು ಇತರ ಮಾಂತ್ರಿಕರು ತೋರುತ್ತಿದ್ದ ಜಾದುಕ್ಕಿಂತ ಹೆಚ್ಚು ಪ್ರಬಲವಾಗಿತ್ತು.

ಪ್ರವಾದಿ ಯೇಸುಕ್ರಿಸ್ತರ ಕಾಲದಲ್ಲಿ ಗ್ರೀಕ್ ನಾಗರಿಕತೆ ಉತ್ತುಂಗತೆಯಲ್ಲಿತ್ತು. ಜನರು ಅಕ್ಷರಸ್ಥರಾಗಿದ್ದರು. ಸೃಷ್ಟಿಕರ್ತನು ಪ್ರವಾದಿ ಯೇಸುಕ್ರಿಸ್ತರಿಗೆ ಮರಣ ಹೊಂದಿದವರನ್ನು ಜೀವಂತರನ್ನಾಗಿಸುವ, ಕುರುಡರಿಗೆ ಕಣ್ಣು ಬರಿಸುವ ಪುಷ್ಪ ರೋಗಿಗಳನ್ನು ಗುಣ ಪಡಿಸುವ ಶಕ್ತಿಯನ್ನು ದಯಪಾಲಿಸಿದ್ದನು. ಈ ಸಾಮರ್ಥ್ಯವು ವಿಜ್ಞಾನ ಮತ್ತು ವೈದ್ಯಕೀಯ ತರ್ಕ ಮೀರಿದುದಾಗಿತ್ತು.

ಇದೇ ರೀತಿ ಪ್ರವಾದಿ ಮುಹಮ್ಮದ್(ಸ), ಅರಬಿ ಸಾಹಿತ್ಯ ಉತ್ತುಂಗತೆಯ ಕಾಲದಲ್ಲಿರುವಾಗ ಪ್ರವಾದಿಯಾಗಿ ನಿಯೋಗಿಸಲ್ಪಟ್ಟಿದ್ದರು. ಸೃಷ್ಟಿಕರ್ತನು ಪ್ರವಾದಿ ಮುಹಮ್ಮದ್ (ಸ)ರಿಗೆ ಪವಾಡದ ರೂಪದಲ್ಲಿ ದಿವ್ಯ ಕುರ್‌ಆನ್ ನೀಡಿದನ್ನು ಕುರ್‌ಆನ್ ಅರಬಿ ಬಾಷೆಯಲ್ಲಿದೆ. ಕುರ್‌ಆನಿನ ಭಾಷೆಯ ಶೈಲಿ ಅದು ವಿಷಯಗಳನ್ನು ಮಂಡಿಸಿರುವ ರೀತಿ, ಕುರ್‌ಆನಿನ ಸಾಹಿತ್ಯಿಕ ಮಟ್ಟ ದಿಗ್ಭಮೆ ಹುಟ್ಟಿಸುವಂತಿತ್ತು. ಆ ಕಾಲದ ಅರಬಿ ಭಾಷೆಯ ಶ್ರೇಷ್ಠ ಕವಿಗಳು ಕುರ್‌ಆನಿನ ಶ್ರೇಷ್ಠತೆಯ ಮುಂದೆ ಮಂಡಿಯೂರಬೇಕಾಯಿತು. "ಯಾವನೇ ಮನುಷ್ಯಾನಿಗೆ ಇಂತಹ ಉತ್ಕೃಷ್ಟ

ಮಟ್ಟದ ಗ್ರಂಥವನ್ನು ರಚಿಸಲು ಸಾಧ್ಯವಿಲ್ಲವೆಂದು" ಘೋಷಿಸಬೇಕಾಯಿತು. ಕುರ್‌ಆನ್ ಪಠಣವನ್ನು ಆಲಿಸಿ, ಅದರ ಮಾಧುರ್ಯದಿಂದ ಮನಸೋತು ಅನೇಕರು ಇಸ್ಲಾಮ್ ಸ್ವೀಕರಿಸಿದ್ದರು.

● ಹ. ಮುಹಮ್ಮದ್(ಸ)ರವರು ಪ್ರವಾದಿಯಾಗಿ ನೇಮಿಸಲ್ಪಡುವ ಮೊದಲೂ, ಜನರು ಸೃಷ್ಟಿಕರ್ತನು ಏಕೈಕನೆಂದೂ, ಆತನೇ ಇಡೀ ವಿಶ್ವವನ್ನು ಸೃಷ್ಟಿಸಿರುವನೆಂದು ಜನರು ನಂಬಿಕೆ ಹೊಂದಿದ್ದರು. ಜನರು ಹಜ್ಜ್ ವಿಧಿಯನ್ನು ನೆರವೇರಿಸುತ್ತಿದ್ದರು. ಆದರೆ ಸೃಷ್ಟಿಕರ್ತನನ್ನು ನೇರವಾಗಿ ಬೇಡಲು ಸಾಧ್ಯವಿಲ್ಲವೆಂದೂ, ಸೃಷ್ಟಿಕರ್ತನನ್ನು ಸಮೀಪಿಸಲು ಮಧ್ಯವರ್ತಿಗಳ ಅಗತ್ಯವಿದೆಯೆಂದು ನಂಬಿದ್ದರು. ಆದುದರಿಂದ 'ಲಾತ್' 'ಮನಾತ್' ಉಝ್ಝಾ, ಹುಬಲ್ ಮೊದಲಾದ ಅನೇಕ ಮೂರ್ತಿಗಳನ್ನು, ದೇವತೆಗಳನ್ನು ಪೂಜಿಸುತ್ತಿದ್ದರು. ಮೂರ್ತಿಗಳು, ದೇವತೆಗಳು ತಮ್ಮ ಸರವಾಗಿ ಸೃಷ್ಟಿಕರ್ತನ ಬಳಿ ಶಿಫಾರಸ್ಸು ಮಾಡುವವುವೆಂದು ನಂಬುತ್ತಿದ್ದರು. ಈ ದೇವಿ-ದೇವತೆಗಳು ತಮ್ಮನ್ನು ರಕ್ಷಿಸುವವೆರಂದೂ, ತಮ್ಮನ್ನು ಸಂಪನ್ನಕಾಗಿಸುವುರೆಂದೂ ಭಾವಿಸಿದ್ದರು.

● ಪ್ರವಾದಿ ಮುಹಮ್ಮದ್(ಸ) ಮದೀನಾ ಪಟ್ಟಣಕ್ಕೆ ಹಿಜ್ರತ್ (ವಲಸೆ) ಮಾಡಿದ ನಂತರ, ಆ ಪ್ರದೇಶದಲ್ಲಿ ವಾಸಿಸುತ್ತಿದ್ದ ಯಹೂದಿಗಳು, ಕ್ರೈಸ್ತರಿಗೂ ಇಸ್ಲಾಮಿನ ಸಂದೇಶವನ್ನು ನೀಡಿದರು. ಯಹೂದಿಗಳು ಮತ್ತು ಕ್ರೈಸ್ತರು ಏಕ ದೇವನಲ್ಲಿ ವಿಶ್ವಾಸವಿಡುತ್ತಿದ್ದರು. ಆದರೆ ಯೇಸುಕ್ರಿಸ್ತರನ್ನು ಉಝೈರ್‌ರನ್ನು ಸೃಷ್ಟಿಕರ್ತನ ಮಗನೆಂದು ಪರಿಗಣಿಸಿ ಅವರಿಗೂ ದೇವತ್ವದಲ್ಲಿ ಮೀಲುಗೊಳಿಸಿದ್ದರು.

● ಮಕ್ಕಾದಲ್ಲಿದ್ದಾಗ ಹ. ಮುಹಮ್ಮದ್(ಸ) ಅಲ್ಲಾಹನ ಸಂದೇಶವನ್ನು ಜನರಿಗೆ ತಲುಪಿಸುವ ಕಾರ್ಯವನ್ನು ಮಾಡುತ್ತಿದ್ದರು. ಆದರೆ ಮದೀನಾದಲ್ಲಿ ಹ. ಮುಹಮ್ಮದ್(ಸ) ಏಕ ಕಾಲದಲ್ಲಿ ಪ್ರವಾದಿಯೂ ಇಸ್ಲಾಮಿ ರಾಜ್ಯದ ನಾಯಕರೂ ಆಗಿದ್ದರು. ಮಕ್ಕಾ ಕಾಲದಲ್ಲಿ ಅವತೀರ್ಣಗೊಂಡ ಕುರ್‌ಆನ್ ಸೂಕ್ತಗಳು ಸಾಹಿತ್ಯಿಕವಾಗಿ ಮೇರು ಕೃತಿಯಾಗಿದ್ದವು. ಜನರನ್ನು ಅವರ ನೈಜ ಒಡೆಯ, ಏಕೈಕನಾದ ಅಲ್ಲಾಹನ ಕಡೆಗೆ ಅವು ಆಹ್ವಾನಿಸುತ್ತಿದ್ದವು. ಇಸ್ಲಾಮ್ ಧರ್ಮದ ಬುನಾದಿಯ ಪರಿಚಯವನ್ನು ನೀಡುತ್ತಿದ್ದವು.

● ಮದೀನಾದಲ್ಲಿ ಕುರ್‌ಆನಿನ ಸೂಕ್ತಗಳನ್ನು ಯಾಹೂದಿಗಳಿಗೆ, ಕ್ರೈಸ್ತರಿಗೆ, ಬಹು ದೇವಾರಾಧಕರಿಗೆ ಮತ್ತು ಕಪಟ ವಿಶ್ವಾಸಿಗಳಿಗೆ ಅಭಿಸಂಬೋಧಿತವಾಗಿದ್ದವು. ಏಕೈಕ ಒಡೆಯನ ಆರಾಧನೆಯ ಜೊತೆಗೆ ಕುರ್‌ಆನಿನ ಸೂಕ್ತಗಳು ಸಮಾಜಿಕ ಕರ್ತವ್ಯಗಳು, ಹೊಣೆಗಾರಿಕೆಗಳು, ರಾಜ್ಯ ಬಾರವನ್ನು ನಡೆಸುವ ಬಗ್ಗೆ ಮೊದಲಾದವುಗಳ ಬಗ್ಗೆಯೂ ನಿಯಮಗಳನ್ನು ನೀಡಿದವು. ಇಸ್ಲಾಮ್ ಶರಿಯತ್ (ಇಸ್ಲಾಮ್ ಧರ್ಮದ ಸರಿಹಿತೆ) ಬಗ್ಗೆ ವಿವರಣೆ ನೀಡುವ ಯುದ್ಧಕ್ಕೆ ಸಂಬಂಧಿಸಿದ ಸೂಕ್ತಗಳೂ ಸಹ ಅವತೀರ್ಣಗೊಂಡವು.

● ಈ ಮೊದಲು ತಿಳಿಸಿರುವಂತೆ ಕುರ್‌ಆನ್ ಏಕ ಕಾಲದಲ್ಲಿ ಗ್ರಂಥ ರೂಪದಲ್ಲಿ ಅವತೀರ್ಣಗೊಳ್ಳಲಿಲ್ಲ. ಸಂದರ್ಭನುಸಾರ, ಕಾಲ ಕಾಲಕ್ಕೆ ಕುರ್‌ಆನಿನ ಸೂಕ್ತಗಳು ಅವತೀರ್ಣಗೊಂಡವು. ಪ್ರವಾದಿ ಮುಹಮ್ಮದ್(ಸ) ಅಲ್ಲಾಹನ ಮಾರ್ಗದರ್ಶನ ಅನುಸಾರ ಸೂಕ್ತಗಳನ್ನು ವಿವಿಧ ಅಧ್ಯಾಯಗಳಲ್ಲಿ ಸೇರಿಸಲು ತಮ್ಮ ಅನುಚರರಿಗೆ ಸೂಚಿಸಿದರು.

● ಆದುದರಿಂದ ಕುರ್‌ಆನ್ ಪಠಿಸುವಾಗ ವಿಭಿನ್ನ ವಿಷಯಗಳು ಬರುತ್ತಿರುವುದನ್ನು ನಾವು ಗಮನಿಸಬಹುದು. ಕುರ್‌ಆನಿನ ಸಂಪೂರ್ಣ

ಅಧ್ಯಯನದ ನಂತರ ಕುರ್ಆನ್ ಯಥೋಚಿತವಾಗಿ ಕೋಢೀಕರಿಸಲ್ಪಟ್ಟಿರುವುದನ್ನು ಕಾಣಬಹುದು.

● ಸಂಕ್ಷಿಪ್ತವಾಗಿ, ಸೃಷ್ಟಿಕರ್ತನಾದ ಅಲ್ಲಾಹನು ಇಡೀ ಮಾನವ ಕುಲದ ಮಾರ್ಗದರ್ಶನಕ್ಕಾಗಿ ಪ್ರವಾದಿ ಮುಹಮ್ಮದ್(ಸ)ರ ಮೇಲೆ ಸಂದರ್ಭಾನೂಸಾರ 23 ವರ್ಷಗಳ ಅವಧಿಯಲ್ಲಿ ಕುರ್ಆನ್ ಅವತೀರ್ಣಗೊಳಿಸಿದನು. ಕುರ್ಆನ್ ಒಂದು ಪಠ್ಯ ಪುಸ್ತಕವಲ್ಲ. ಜನರ 'ಇಹ' ಮತ್ತು 'ಪರ'ದ ಯಶಸ್ಸಿಗಾಗಿ ಅಗತ್ಯವಿರುವ ರೂಪ–ರೇಶೆಗಳನ್ನು ಆದೇಶಗಳ್ನು ಕುರ್ಆನ್ ಒಳಗೊಂಡಿದೆ. ವಸ್ತು ನಿಷ್ಟ ಅಧ್ಯಯನ ನಡೆಸುವ ಪ್ರತಿಯೋರ್ವರಿಗೂ ಖಂಡಿತವಾಗಿ ಅದರಿಂದ ಮಾರ್ಗದರ್ಶನ ದೊರೆಯುತ್ತದೆ. ಕುರ್ಆನಿನ ಅಧ್ಯಯನ ಮಾಡುವಾಗ ನಿರ್ದಿಷ್ಟ ಸೂಕ್ತವು ಯಾವ ಸಂದರ್ಭದಲ್ಲಿ ಸನ್ನಿವೇಶದಲ್ಲಿ ಅವತೀರ್ಣಗೊಂಡಿದೆ ಎಂಬುದನ್ನು ಗಮನದಲ್ಲಿಡಬೇಕು. ಆದುದರಿಂದ ಕುರ್ಆನ್ ಓದುವಾಗ, ಕುರ್ಆನಿನ ವ್ಯಾಖ್ಯಾನವನ್ನು ಓದುವುದು ಹೆಚ್ಚು ಪ್ರಯೋಜನಾಕಾರಿಯಾಗುತ್ತದೆ.

**ಪವಿತ್ರ ಕುರ್ಆನಿನ ಬೋಧನೆಗಳು:**

● ಪವಿತ್ರ ಕುರ್ಆನ್ ಜ್ಞಾನದ ಭಂಡಾರವಾಗಿದೆ. ಅದರ ಕೆಲ ನುಡಿ ಮುತ್ತುಗಳನ್ನು ಕೆಳಗೆ ನೀಡಲಾಗಿದೆ.

**1.** "ನೀವು ಕೃತಜ್ಞ ದಾಸರಾಗಿದ್ದು ಸತ್ಯವಿಶ್ವಾಸ ಮಾರ್ಗದಲ್ಲಿ ನಡೆಯುತ್ತಿದ್ದರೆ ಅಲ್ಲಾಹ್ ನಿಮ್ಮನ್ನು ದಂಡಿಸುವನೇಕೆ? ಅಲ್ಲಾಹ್ ಮಹಾ ಗುಣ ಗ್ರಾಹಿಯೂ ಸರ್ವರ ಸ್ಥಿತಿಗತಿಗಳ ಬಗ್ಗೆ ಪೂರ್ಣ ಜ್ಞಾನಿಯೂ ಆಗಿರುತ್ತಾನೆ." (ಪವಿತ್ರ ಕುರ್ಆನ್ 4:147)

**2.** "ಒಬ್ಬ ಮಾನವನ ಕೊಲೆಯ ಬದಲಿಗೆ ಅಥವಾ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವ ಕಾರಣಕ್ಕಾಗಿ ಹೊರತು ಯಾರಾದರೂ ಒಬ್ಬ ಮನುಷ್ಯನನ್ನು ವಧಿಸಿದರೆ ಅವನು ಸಕಲ ಮಾನವ ಕೋಟಿಯನ್ನೇ ವಧಿಸಿದಂತೆ ಮತ್ತು ಒಬ್ಬನು ಇನ್ನೊಬ್ಬನಿಗೆ ಜೀವದಾನ ಮಾಡಿದರೆ ಅವನು ಸಕಲ ಮಾನವ ಕೋಟಿಗೆ ಜೀವದಾನ ಮಾಡಿದಂತೆ." (ಪವಿತ್ರ ಕುರ್ಆನ್: 5–32)

**3.** ಆ ಘೋರ ಪಾಪಗಳನ್ನು ನೀವು ವರ್ಜಿಸುತ್ತಲಿದ್ದರೆ, ನಿಮ್ಮ ಚಿಕ್ಕ ಪುಟ್ಟ ಅಪರಾಧಗಳನ್ನು ನಾವು ನಿಮ್ಮ ಲೆಕ್ಕ ಪತ್ರದಿಂದ ನೀಗಿಸಿ ಬಿಡುವೆವು? (ಪವಿತ್ರ ಕುರ್ಆನ್ 4:31)

**4.** "... ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡಲು ಪ್ರಯತ್ನಿಸಬೇಡ. ಅಲ್ಲಾಹ್ ಕ್ಷೋಭೆಯನ್ನುಂಟು ಮಾಡುವವರನ್ನು ಮೆಚ್ಚುವುದಿಲ್ಲ." (ಪವಿತ್ರ ಕುರ್ಆನ್: 28:77)

**5.** "ಅಲ್ಲಾಹ್ ಜನರಲ್ಲಿ ಕೆಲವರನ್ನು ಬೇರೆ ಕೆಲವರ ಮೂಲಕ ನೀಗಿಸದಿರುತ್ತಿದ್ದರೆ, ಅಲ್ಲಾಹನ ನಾಮವನ್ನು ಅತಿ ಹೆಚ್ಚಾಗಿ ಸ್ಮರಿಸಲಾಗುತ್ತಿರುವ ಆಶ್ರಮಗಳೂ, ಇಗರ್ಜಿಗಳೂ, ಯಹೂದಿಯರ ಆರಾಧನಾಲಯಗಳೂ, ಮಸೀದಿಗಳೂ ಧ್ವಂಸಗೊಳಿಸಲ್ಪಡುತ್ತಿದ್ದವು." (ಪವಿತ್ರ ಕುರ್ಆನ್: 22:40)

## Holy Quran (17:16) Missing

**7.** "ನೀವು ಕೇವಲ ಅವನೊಬ್ಬನ ಹೊರತು ಇನ್ನಾರ ದಾಸ್ಯಾರಾಧನೆಯನ್ನು ಮಾಡಬಾರದು. ಮಾತಾಪಿತರೊಡನೆ ಸೌಜನ್ಯದಿಂದ ವರ್ತಿಸಿರಿ." (ಪವಿತ್ರ ಕುರ್ಆನ್: 17:23)

**8.** "ಸಂಬಂಧಿತನಿಗೆ ಅವನ ಹಕ್ಕನ್ನು ದರಿದ್ರನಿಗೂ ಪ್ರಯಾಣಿಕನಿಗೂ ಅವರವರ ಹಕ್ಕನ್ನು ಕೊಡಿರಿ. ದುಂದು ವೆಚ್ಚ ಮಾಡಬೇಡಿರಿ." (ಪವಿತ್ರ ಕುರ್ಆನ್: 17:26)

**9**. **"ನಿಮ್ಮ ಮಕ್ಕಳನ್ನು ಬಡತನದ ಭೀತಿಯಿಂದ ಕೊಲ್ಲ ಬೇಡಿರಿ."** (ಪವಿತ್ರ ಕುರ್‌ಆನ್: 17:31)

**10**. **"ಅಳತೆ ಮಾಡಿ ಕೊಡುವಾಗ ಪೂರ್ಣ ತುಂಬಿಸಿ ಕೊಡಿರಿ. ತೂಗುವಾಗ ಸರಿಯಾದ ತಕ್ಕಡಿಯಲ್ಲಿ ತೂಗಿರಿ."** (ಪವಿತ್ರ ಕುರ್‌ಆನ್: 17:35)

**11**. **"ಭೂಮಿಯ ಮೇಲೆ ದರ್ಪದಿಂದ ನಡೆಯ ಬೇಡಿರಿ. ನೀವು ಪೃಥ್ವಿಯನ್ನು ಸೀಳಲಾರಿರಿ ಮತ್ತು ಪರ್ವತಗಳ ಶಿಖರಕ್ಕೂ ತಲುಪಲಾರಿರಿ."** (ಪವಿತ್ರ ಕುರ್‌ಆನ್: 17:37)

**12**. **"ಓ ಸತ್ಯವಿಶ್ವಾಸಿಗಳೇ, ಮದ್ಯ, ಜೂಜ್, ಬಲಿ ವೀಠಗಳು ಮತ್ತು ದಾಳ ಹಾಕುವುದು ಇವೆಲ್ಲ ಹೊಲಸು ಪೈಶಾಚಿಕ ಕೃತ್ಯಗಳಾಗಿವೆ."** (ಪವಿತ್ರ ಕುರ್‌ಆನ್: 5:91)

**13**. **"ವ್ಯಭಿಚಾರದ ಹತ್ತಿರವೂ ಸುಳಿಯ ಬೇಡಿರಿ. ಅದು ಅತಿ ಹೀನ ಕಾರ್ಯ ಮತ್ತು ಅತ್ಯಂತ ಕೆಟ್ಟ ಮಾರ್ಗ."** (ಪವಿತ್ರ ಕುರ್‌ಆನ್: 17:32)

**14**. **"ಪುರುಷರಲ್ಲೂ, ಸ್ತ್ರೀಯರಲ್ಲೂ ದಾನ ಧರ್ಮ ಮಾಡುವವರಿಗೆ ಮತ್ತು ಅಲ್ಲಾಹನಿಗೆ ಶ್ರೇಷ್ಠ ಸಾಲವನ್ನು ನೀಡಿದವರಿಗೆ ಖಂಡಿತವಾಗಿಯೂ ಎಷ್ಟೋ ಪಟ್ಟು ವರ್ಧಿಸಿ ಕೊಡಲಾಗುವುದು. ಅವರಿಗೆ ಅತ್ಯುತ್ತಮ ಪ್ರತಿಫಲವಿದೆ."** (ಪವಿತ್ರ ಕುರ್‌ಆನ್: 57:18)

**15**. **"ಪೈಗಂಬರರೇ, ಸತ್ಯ ವಿಶ್ವಾಸಿಗಳೊಡನೆ ತಮ್ಮ ದೃಷ್ಟಿಗಳನ್ನು ಕೆಳಗಿರಿಸಿಕೊಳ್ಳಲಿಕ್ಕೂ, ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳಲಿಕ್ಕೂ ಹೇಳಿರಿ. ಇದು ಅವರ ಪಾಲಿಗೆ ಹೆಚ್ಚು ಪರಿಶುದ್ಧವಾದ ಕ್ರಮವಾಗಿದೆ. ಅಲ್ಲಾಹನು ಅವರು ಮಾಡುವುದೆಲ್ಲವನ್ನು ಅರಿಯುವವನಾಗಿದ್ದಾನೆ.**

**ಪೈಗಂಬರರೇ, ಸತ್ಯವಿಶ್ವಾಸಿನಿಯಾರೊಡನೆ ಹೇಳಿರಿ– ಅವರು ತಮ್ಮ ದೃಷ್ಟಿಗಳ್ನು ಕೆಳಗಿರಿಸಿ ಕೊಳ್ಳಲಿ. ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳಿ ಮತ್ತು ತಮ್ಮ ಶೃಂಗಾರಗಳನ್ನು ತೋರಿಸದಿರಲಿ (ಆದರೆ) ಸ್ವಯಂ ಪ್ರಕಟವಾಗುವಂತಹವುಗಳನ್ನು ಹೊರತು ಮತ್ತು ತಮ್ಮ ಎದೆಯ ಮೇಲೆ ತಮ್ಮ ಮೇಲು ಹೊದಿಕೆಯ ಸೆರಗನ್ನು ಹಾಕಿಕೊಂಡಿರಲಿ."** (ಪವಿತ್ರ ಕುರ್‌ಆನ್: 24:30,31)

**16**. **"ಈ ಲೌಕಿಕ ಜೀವನವು ಒಂದು ಆಟ ಮತ್ತು ಮನೋರಂಜನೆಯಲ್ಲದೇ ಇನ್ನೇನೂ ಅಲ್ಲ. ನೈಜ ಜೀವನ ಗೃಹವು ಪರಲೋಕ ಗೃಹವೇ ಆಗಿದೆ."** (ಪವಿತ್ರ ಕುರ್‌ಆನ್: 29:64)

**ಅಂತಿಮ ಪ್ರವಾದಿ ಹ. ಮುಹಮ್ಮದ್(ಸ)ರ ಬೋಧನೆಗಳು:**

ಅಂತಿಮ ಪ್ರವಾದಿ ಹ. ಮುಹಮ್ಮದ್(ಸ) ನಮಗೆ ದಿವ್ಯ ಗ್ರಂಥ ಕುರ್‌ಆನ್ ತಲುಪಿಸಿದ್ದು, ಅವರ ಕೆಲ ಬೋಧನೆಗಳನ್ನು ಈ ರೀತಿ ಇವೆ:

1) ಸನ್ಮಾರ್ಗದಲ್ಲಿ ನಡೆಯುವುದು ಸರಳವಾಗಿದೆ. (ಬುಖಾರಿ)

2) ಪ್ರಾರ್ಥನೆ (ನಮಾಝ್) ಸ್ವರ್ಗದ ಕೀಲಿಕೈಯಾಗಿದೆ. (ಅಹ್ಮದ್)

3) ವಂಚಿಸುವವರು ಸತ್ಯವಿಶ್ವಾಸಿಗಳಲ್ಲ. (ಮುಸ್ಲಿಮ್)

4) ಮಾತನ್ನು ಆರಂಭಿಸುವ ಮೊದಲು ಸಲಾಮ್ ಹೇಳಿರಿ. (ಬುಖಾರಿ)

5) ಸದಾ ಸತ್ಯವನ್ನೇ ನುಡಿಯಿರಿ. (ಮುಸ್ಲಿಮ್)

6) ಸಂಕಲ್ಪಕ್ಕೆ ಅನುಗುಣವಾಗಿ ನಿಮ್ಮ ಕಾರ್ಯಕ್ಕೆ ಪ್ರತಿಫಲವನ್ನು ನೀಡಲಾಗುವುದು. (ಬುಖಾರಿ)

7) ಪರಿಶುದ್ಧತೆಯು ಅರ್ಧ ಸತ್ಯವಿಶ್ವಾಸವಾಗಿದೆ. (ಮುಸ್ಲಿಮ್)

8) ಸುಲಿಗೆಕೋರನು ಸತ್ಯ ವಿಶ್ವಾಸಿಯಲ್ಲ. (ತಿರ್ಮಿದಿ)

9) ತಾಯಿಯ ಪಾದದಡಿ ಸ್ವರ್ಗವಿದೆ.

(ಕನ್‌ಝುಲ್ ಉಮ್ಮಲ್)

10) ಅನಾವಶ್ಯಕ ಉದ್ದೇಶಗೊಳ್ಳಗಿರಿ. (ಕನ್‌ಝುಲ್ ಉಮ್ಮಲ್)

11) ಭೂಮಿಯ ಮೇಲೆ ಏಕೈಕ ವ್ಯಕ್ತಿ ಅಲ್ಲಾಹನ ಹೆಸರು ಹೇಳುವವನು ಇರುವವರೆಗೂ ಪ್ರಳಯ ವಾಗುವುದಿಲ್ಲ.

12) ನಮಾಝ್ (ಪ್ರಾರ್ಥನೆ) ಸತ್ಯವಿಶ್ವಾಸಿಯ ಆಯುಧ್ಧವಾಗಿದೆ. (ಜಾಮಿಯುಸ್ಸಗೀರ್)

13) ಲಂಚ ಕೊಡುವವನು ಮತ್ತು ಲಂಚ ಪಡೆಯುವವನು ಇಬ್ಬರನ್ನೂ ಅಲ್ಲಾಹನ ಪ್ರವಾದಿ ಶಪಿಸಿರುವರು. (ಅಬು ದಾವೂದ್)

14) ಹೆತ್ತವರನ್ನೂ ಸಂತುಷ್ಟಗೊಳಿಸುವ ಮೂಲಕ ಅಲ್ಲಾಹನನ್ನು ಸಂಕುಷ್ಟಗೊಳಿಸಬಹುದು. (ತಿರ್ಮಿದಿ)

15) ವಂಚಕರು, ಜಿಪುಣರು, ಮತ್ತು ದಾನ ನೀಡಿದ ನಂತರ ಅದನ್ನು ಪ್ರಕಟ ಪಡಿಸುವವರು ಸ್ವರ್ಗವನ್ನು ಪ್ರವೇಶಿಸಲಾರರು. (ಮುಸ್ಲಿಮ್)

16) ತಾನು ಇಚ್ಛಿಸುವುದನ್ನು ಇತರರಿಗೂ ಬಯಸದಿರುವ ತನಕ ಓರ್ವನು ಸತ್ಯ ವಿಶ್ವಾಸಿಯಲ್ಲ.

17) ನನ್ನನ್ನು ಸಂತುಷ್ಟಗೊಳಿಸಲು ಸಮಾಜದ ದುರ್ಬಲ ವರ್ಗದ ಜನರಿಗೆ ಸಹಾಯ ಮಾಡಿ. ಅಲ್ಲಾಹ್ ನಿಮಗೆ ನೆರವನ್ನೂ, ಸಮೃದ್ಧಿಯನ್ನು ನೀಡುವನು. (ಅಹ್ಮದ್, ದಾವೂದ್, ತಿರ್ಮಿದಿ)

18) ಕಾರ್ಮಿಕರ ಬೆವರು ಆರುವ ಮೊದಲು ಅವರ ಮಜೂರಿಯನ್ನು ನೀಡಿ. (ಇಬ್ನ್ ಮಾಜ್ಞ)

19) ಯಾರು ತಮ್ಮ ಪತ್ನಿಯೊಂದಿಗೆ ಅತ್ಯುತ್ತಮ ರೀತಿಯಲ್ಲಿ ವರ್ತಿಸುವರೋ, ಅವರೇ ನಿಮ್ಮಲ್ಲಿಯ ಶ್ರೇಷ್ಠರು. (ತಿರ್ಮಿದಿ)

20) ನಿಮ್ಮ ಪತ್ನಿಯರೊಂದಿಗೆ ಉಚಿತ ರೀತಿಯಲ್ಲಿ ವರ್ತಿಸಿರಿ. (ಬುಖಾರಿ)

21) ಒಮ್ಮೆ ಪ್ರವಾದಿವರ್ಯರು(ಸ), "ಅವನು ಅಪಮಾನಿತನಾಗಲಿ" ಎಂದು ಮೂರು ಬಾರಿ ಹೇಳಿದರು. ಜನರು ಯಾರು? ಎಂದು ವಿಚಾರಿಸಿದರು. ಆಗ ಪ್ರವಾದಿ(ಸ) ಹೇಳಿದರು, "ತನ್ನ ತಂದೆ ತಾಯಿಯವರನ್ನು ಅಥವಾ ಅವರ ಪೈಕಿ ಒಬ್ಬರನ್ನು ವೃದ್ಧಾಪ್ಯದ ಸ್ಥಿತಿಯಲ್ಲಿ ಕಂಡ ಬಳಿಕವೂ (ಅವರ ಸೇವೆ ಮಾಡುವ ಮೂಲಕ) ಸ್ವರ್ಗ ಪ್ರವೇಶಕ್ಕೆ ಅರ್ಹನಾಗದವನನ್ನು ನಾನು ಶಪಿಸುತ್ತಿದ್ದೇನೆ." (ಮುಸ್ಲಿಮ್)

22) ಸಮಾಲೋಚನೆಯಲ್ಲಿ ಸಮೃದ್ಧಿವಿದೆ.

23) ಪ್ರವಾದಿ ಮುಹಮ್ಮದ್(ಸ) ನುಡಿದಿರುವರು: ಅಲ್ಲಾಹ್ ಹೇಳುತ್ತಾನೆ "ನನ್ನ ಆರಾಧನೆಯಲ್ಲಿ ನಿರತರಾಗಿ. ನಾನು ನಿಮಗೆ ಗೌರವಾರ್ಹ ಜೀವನವನ್ನು ಮತ್ತು ಸಮೃದ್ಧಿಯನ್ನು ನೀಡುತ್ತೇನೆ. ಆದರೆ ನೀವು ನಿರ್ಲಕ್ಷಿಸಿದರೆ, ನಿಮ್ಮನ್ನು ಸದಾ ಬಿಡುವಿಲ್ಲದಂತವನ್ನಾಗಿ ಮಾಡಿ ನಿಮ್ಮ ದುರ್ದೆಸೆ, ಮತ್ತು ಅಪಮಾನವನ್ನು ಎಂದೂ ಕೊನೆಗೊಳಿಸುವುದಿಲ್ಲ. (ಇಬ್ನ್ ಮಾಜ್ಞ)

**ಒಪ್ಪದೆ:** ಬುಖಾರಿ, ಅಹ್ಮದ್, ಮುಸ್ಲಿಮ್, ತಿರ್ಮಿದಿ ಮೊದಲಾದವುಗಳು ಪ್ರಖ್ಯಾತ ಹದೀಸ್ ಸಂಕಲನಕಾರರ ಹೆಸರುಗಳು. ಪ್ರವಾದಿ ಮುಹಮ್ಮದ್(ಸ)ರ ನುಡಿ, ವಚನಗಳಿಗೆ ಹದೀಸ್ ಎನ್ನುತ್ತಾರೆ.

● ಡಾ। ಝುಹೂರ್ ಅಹ್ಮದ್ ಅಝುರ್, ಈ ಕೆಳಗೆ ಉಲ್ಲೇಖಿಸಿರುವ ಪ್ರವಾದಿ ವಚನಗಳನ್ನು "ಜವಾಮೆಅ್ ಕಲೀಮ್"ದಿಂದ ಆಯ್ದಿದ್ದಾರೆ.

* ಅಲ್ಲಾಹನಲ್ಲಿ ವಿಶ್ವಾ ಸವಿಟ್ಟ ನಂತರ ಎರಡನೆಯ ಶ್ರೇಷ್ಠ ಕಾರ್ಯ ಜನ ಸೇವೆಯಾಗಿದೆ.

* ಪ್ರಮುಖ ವಿಷಯಗಳಲ್ಲಿ ಸಮಾಲೋಚನೆ ಮಾಡುವವರು ಎಂದೂ ಹಾನಿಗೊಳಗಾಗುವುದಿಲ್ಲ.

* ಈ ಜಗತ್ತು ಸುಂದರಮಯವಾಗಿದೆ. ಈ ಜಗತ್ತನ್ನು ನಿಮ್ಮ ಅಧೀನಗೊಳಿಸಿ ಅಲ್ಲಾಹ್ ನಿಮ್ಮ ಕಾರ್ಯಗಳನ್ನು ವೀಕ್ಷಿಸುತ್ತಿದ್ದಾನೆ.

* ದಾರಿ ತಪ್ಪಿರುವ ಅಥವಾ ಸನ್ಮಾರ್ಗವನ್ನು ಮರೆತಿರುವ ವಿದ್ವಾಂಸರು ಅತ್ಯಂತ ಕೆಟ್ಟ ಜನರಾಗಿರುವರು.

* ಭೂಮಿಯ ಮೇಲೆ ಯಾವ ಜನರನ್ನು ಪ್ರೀತಿಸುತ್ತಿದ್ದನೋ, ಆ ಜನರೊಂದಿಗೆ ನಿರ್ಣಯಕ ದಿನದಂದು ವ್ಯಕ್ತಿಯನ್ನು ಜೀವಂತಗೊಳಿಸಲಾಗುವುದು.

* ಹೆಚ್ಚು ತಿಂದಷ್ಟು ಹೆಚ್ಚಿನ ರೋಗಕ್ಕೆ ತುತ್ತಾಗುವಿರಿ. ನೀವು ಕಡಿಮೆ ತಿಂದಷ್ಟೂ ಕಡಿಮೆ ಔಷದಿಗಳನ್ನು ಸೇವಿಸುವಿರಿ.

* ಪ್ರೀತಿಯಲ್ಲಿ ಸಂತುಲತೆಯನ್ನು ತೋರಿರಿ. ಏಕೆಂದರೆ ನಿಮ್ಮ ಇಂದಿನ ಸ್ನೇಹಿತ ನಾಳೆ ನಿಮ್ಮ ಶತ್ರುವಾಗಬಹುದು.


* ಒಂದು ಸಮುದಾಯದ ಗೌರವಾನ್ವಿತ ವ್ಯಕ್ತಿ ನಿಮ್ಮ ಒಳಗೆ ಬಂದರೆ ಅವನಿಗೆ ಗೌರವಾದರವನ್ನುತೋರಿರಿ.

* ಕೆಲ ಭಾಷಣಗಳು ಮಾಂತ್ರಿಕ ಪ್ರಭಾವವನ್ನು ಹೊಂದಿರುತ್ತದೆ.

* ಸಚ್ಚಾರಿತ್ರ್ಯ ವ್ಯಕ್ತಿ ತನ್ನ ತಪ್ಪುಗಳಿಗೆ ಪಚ್ಚಾತ್ತಾಪ ವ್ಯಕ್ತಪಡಿಸುತ್ತಾನೆ, ಮತ್ತು ಒಳಿತಿನ ಕಾರ್ಯಗಳಿಂದ ಸಂತುಷ್ಟನಾಗುತ್ತಾನೆ.

* ಅಲ್ಲಾಹನಿಂದ ಸಂಪತ್ತು ಮತ್ತು ಸಮೃದ್ಧಿಯನ್ನು ನಿರೀಕ್ಷಿಸುವುದೂ ಪ್ರಾರ್ಥನೆಯಾಗಿದೆ.

* ನೀವು ನಿಮ್ಮ ಉತ್ತಮ ಕಾರ್ಯಗಳಿಂದ ಜನರನ್ನು ಪ್ರಭಾವಿತಗೊಳಿಸಬಹುದಾಗಿದೆಯೇ ಹೊರತು ನಿಮ್ಮ ದಂಪತ್ತಿನಿಂದ ಅಲ್ಲ.



**मनु या हजरत नुह की नाव का चित्र**

**For more detail about the ship please visit Website :- http://www.itdarasgah.com**

ಅಧ್ಯಾಯ– 3

# ಪವಿತ್ರ ಕುರ್‌ಆನ್‌ನಲ್ಲಿ ವೇದಗಳ ವರ್ಣನೆ

## How the Holy Quran Decribes the Holy Vedas?

● ಪವಿತ್ರ ಕುರ್‌ಆನ್ ಈ ರೀತಿ ನುಡಿಯುತ್ತದೆ.

"ನಾವು ಪ್ರತಿಯೊಂದು ಸಮುದಾಯಕ್ಕೆ ಪ್ರವಾದಿಯನ್ನು ಕಳುಹಿಸಿದ್ದೇವೆ." (ಪವಿತ್ರ ಕುರ್‌ಆನ್: 10:47)

● ಭಾರತ ದೇಶವು ಬಹಳ ಪ್ರಾಚೀನವಾದ ದೇಶವಾಗಿದೆ. ಕುರ್‌ಆನ್ ತಿಳಿಸಿರುವಂತೆ ಭಾರತ ದೇಶದಲ್ಲೂ ಪ್ರವಾದಿಗಳು ಖಂಡಿತವಾಗಿ ಬಂದಿರಬೇಕು. ಈ ಭೂಮಿಗೆ ಬಂದ ಪ್ರಥಮ ಮಾನವ ಮತ್ತು ಪ್ರವಾದಿ ಹ. ಆದಮ್(ಅ) ಆಗಿದ್ದರು. ಸ್ವರ್ಗದಿಂದ ಅವರು ಭೂಮಿಗೆ ಬಂದಿಳಿದ ಸ್ಥಳ ಭಾರತವಾಗಿತ್ತು. ಆದುದರಿಂದ ಜಗತ್ತಿನಲ್ಲಿ ಇಸ್ಲಾಮಿನ ಆರಂಭ ಭಾರತದಿಂದವಾಯಿತು ಎಂದು ನಾವು ಖಚಿತವಾಗಿ ಹೇಳಬಹುದಾಗಿದೆ. ಹ. ಆದಮ್(ಅ)ರ ನಂತರ ಭಾರತಕ್ಕೆ ಬಂದ ಎರಡನೆಯ ಮಹಾನ್ ಪ್ರವಾದಿ ಹ. ನೂಹ್(ಅ) ಅಥವಾ ಮನು ಆಗಿದ್ದರು.

● ಕುರ್‌ಆನ್ ದಿವ್ಯ ಗ್ರಂಥವನ್ನು ಮತ್ತು ಹೊಸ ಕಾನೂನನ್ನು ತಂದಿರುವ ಕೇವಲ ಐದು ಪ್ರವಾದಿಗಳ ಹೆಸರನ್ನು ಪ್ರಸ್ತಾಪಿಸುತ್ತದೆ. ಹ. ಇಬ್ರಾಹೀಮ್(ಅ), ಹ. ಮೂಸಾ(ಅ), ಹ. ದಾವೂದ್(ಅ), ಹ. ಈಸಾ(ಅ) ಮತ್ತು ಹ. ಮುಹಮ್ಮದ್(ಸ) ಕುರ್‌ಆನ್ ಅವರು ತಂದಿದ್ದ ಪವಿತ್ರ ಗ್ರಂಥಗಳ ಹೆಸರನ್ನೂ ನೀಡಿದೆ. ಸುಹ್ರುಫಿ ಇಬ್ರಾಹೀಮ್, ತೌರಾತ್, ಝುಬೂರ್, ಬೈಬಲ್ ಮತ್ತು ಪವಿತ್ರ ಕುರ್‌ಆನ್. ಈ ಜಗತ್ತಿಗೆ ಸುಮಾರು 1,25,000 ಪ್ರವಾದಿಗಳು ಬಂದಿರುವರು ಎಂದು ವರದಿಯಾಗಿದೆ. ಅದಾಗ್ಯೂ ಕುರ್‌ಆನ್ ಅವರ ಪೈಕಿ ದಿವ್ಯ ಗ್ರಂಥವನ್ನು ಮತ್ತು ಹೊಸ ಕಾನೂನನ್ನು ತಂದಿರುವ ಕೇವಲ ಐದು ಪ್ರವಾದಿಗಳ ಹೆಸರನ್ನು ಹೆಸರಿಸಿದೆ.

● ಹ. ನೂಹ್(ಅ) ಓರ್ವ ಮಹಾನ್ ಪ್ರವಾದಿಯಾಗಿದ್ದರು. ಕುರ್‌ಆನ್‌ನಲ್ಲಿ ಶ್ರೇಷ್ಠ ಪ್ರವಾದಿಗಳ ಹೆಸರು ಪ್ರಸ್ತಾಪವಾಗಿರುವಲ್ಲೆಲ್ಲಾ ಹ. ನೂಹ್(ಅ)ರವರ ಹೆಸರು ಸಹ ನುಡಿದಿದೆ.

● "ಅವನು ನೂಹ್‌ರಿಗೆ ಆಜ್ಞಾಪಿಸಿದ್ದ ಧರ್ಮ ವಿಧಾನವೇ ನಿಮಗಾಗಿಯೂ ನಿಶ್ಚಯಿಸಿ ಕೊಟ್ಟಿದ್ದಾನೆ ಮತ್ತು (ಮುಹಮ್ಮದರೇ) ಈಗ ನಾವು ಅದನ್ನೇ ದಿವ್ಯವಾಣಿಯ ಮೂಲಕ ನಿಮ್ಮ ಕಡೆಗೆ ಕಳುಹಿಸಿರುತ್ತೇವೆ. ಇದನ್ನೇ ನಾವು ಇಬ್ರಾಹೀಮ್, ಮೂಸಾ ಮತ್ತು ಈಸಾರಿಗೂ ಬೋಧಿಸಿದ್ದೆವು. ಈ ಧರ್ಮವನ್ನು ಸಂಸ್ಥಾಪಿಸಿರಿ ಮತ್ತು ಇದರಲ್ಲಿ ವಿಭಿನ್ನರಾಗದಿರಿ ಎಂಬ ಆದೇಶದೊಂದಿಗೆ." (ಪವಿತ್ರ ಕುರ್‌ಆನ್: 42: 13) ಆದರೆ ಹ. ನೂಹ್(ಅ)ರಿಗೆ ನೀಡಲಾಗಿದ್ದ ಗ್ರಂಥದ ಹೆಸರನ್ನು ಸ್ಪಷ್ಟವಾಗಿ ಹೇಳಲಾಗಿಲ್ಲ. ಬಹುಶಃ ಕುರ್‌ಆನ್‌ನಲ್ಲಿ ಉಲ್ಲೇಖಿಸಲ್ಪಟ್ಟಿರುವ ಮೇಲಿನ ಐದು ದಿವ್ಯ ಗ್ರಂಥಗಳು ಲಿಖಿತ ರೂಪದಲ್ಲಿದ್ದು, ಹ. ನೂಹ್(ಅ)ರಿಗೆ ಕೇವಲ ಮೌಖಿಕ ಆದೇಶಗಳನ್ನು ನೀಡಲಾಗಿರುವುದು ಕಾರಣವಾಗಿರಬಹುದು.

● ವೇದಗಳನ್ನು 'ಶ್ರುತಿ' ಎಂದೂ ಕರೆಯುತ್ತಾರೆ. ಶ್ರುತಿಗಳೆಂದರೆ ಅವತೀರ್ಣಗೊಂಡಿರುವ, ಕೇಳಿಸಿಕೊಂಡಿರುವ, ಗ್ರಹಿಸಿರುವ ಮತ್ತು ಅರ್ಥೈಸಿರುವ ಎಂದು ಅರ್ಥ. ಪೂಜಾರಿ ವರ್ಗ ಇವುಗಳನ್ನು ಕಂಠಪಾಠ ಮಾಡುತ್ತಿದ್ದರು. 18ನೇ

ಶತಮಾನದಲ್ಲಿ ವೇದಗಳನ್ನು ಲಿಖಿತ ರೂಪದಲ್ಲಿ ತರಲಾಯಿತು.

● ವೇದಗಳು 414 ಋಷಿಗಳ ಹೆಸರನ್ನು ಒಳಗೊಂಡಿವೆ. ವೇದ ಗ್ರಂಥದ 'ಸೂಕ್ತ'(ಅಧ್ಯಾಯ)ಗಳ ಶೀರ್ಷಿಕೆ, ಆ ಸೂಕ್ತವನ್ನು ಸಂಕಲ್ಪಿಸಿರುವ ಋಷಿಯ ಹೆಸರನ್ನು ಸೂಚಿಸುತ್ತಿದೆ. ಅದಾಗ್ಯೂ ವೇದಗಳ ಮೂಲಗಳು ಹ. ಆದಮ್(ಅ), ಹ. ನೂಹ್(ಅ) (ಮನು)– ಬಗ್ಗೆ ವಿವರಣೆ ನೀಡುತ್ತವೆ ಮತ್ತು ಪ್ರವಾದಿ ಮುಹಮ್ಮದ್(ಸ)ರ ಆಗಮನದ ಬಗ್ಗೆ ಭವಿಷ್ಯ ನುಡಿದಿದೆ. ಹ. ನೂಹ್(ಅ)ರ (ಮನು) ನಂತರದ ಪ್ರವಾದಿಗಳ ಯಾವ ಉಲ್ಲೇಖವೂ ಇವುಗಳಿಲ್ಲ; ಈ ರೀತಿ ವೇದಗಳು ಹ. ನೂಹ್(ಅ)ರಿಗೆ ವೇದಗಳು ಅವತೀರ್ಣಗೊಂಡಿದ್ದವು ಎಂದು ನಂಬಲಾಗುತ್ತದೆ.

● ಯರ್ಜುವೇದದಲ್ಲಿ ಆದೇಶಗಳು ಗದ್ಯ ರೂಪದಲ್ಲಿವೆ. ಋಗ್ವೇದ ಮತ್ತು ಸಾಮವೇದಗಳಲ್ಲಿ ಆದೇಶಗಳನ್ನು ಉದಾಹರಣೆಗಳ ರೂಪದಲ್ಲಿ ಮತ್ತು ಪದ್ಯ ರೂಪದಲ್ಲಿ ನೀಡಲಾಗಿದೆ.

● ಮನುವಿನ ಅನುಯಾಯಿಗಳು (ಭಾರತೀಯರು) ತಮ್ಮ ದಿವ್ಯ ಗ್ರಂಥವನ್ನು 'ಆದಿ ಗ್ರಂಥ' ಮತ್ತು 'ದೇವ ವಾಣಿ' ಎಂದು ಕರೆಯುತ್ತಾರೆ. ಪವಿತ್ರ ಕುರ್‌ಆನ್ ಈ ಗ್ರಂಥವನ್ನು 'ಆದಿ ಗ್ರಂಥ' ಪದಕ್ಕೆ ಸರಿ ಸಮಾನವಾದ ಅರಬಿ ಪದ "ಸುಹ್ಫ಼ಿ ಊಲಾ" ಎಂದು ಉಲ್ಲೇಖಿಸುತ್ತದೆ. ಸುಹ್ಫ಼ಿ ಎಂದರೆ ಗ್ರಂಥ, "ಊಲಾ"ವೆಂದರೆ ಪ್ರಾಚೀನ ಎಂದರ್ಥ.

● ಈ ಮೊದಲು ತಿಳಿಸಿರುವಂತೆ ವೇದಗಳು ಆರಂಭದಲ್ಲಿ ಗ್ರಂಥ ರೂಪದಲ್ಲಿರಲಿಲ್ಲ. ಋಷಿಗಳು ಮತ್ತು ವೇದಗಳ ಅನುಯಾಯಿಗಳು ವಿವಿಧ ಸ್ಥಾನಗಳಲ್ಲಿ ವೇದಗಳ ಭಾಗಗಳನ್ನು ಸಂಗ್ರಹಿಸಿದ್ದರು. ಆದುದರಿಂದ ಪವಿತ್ರ ಕುರ್‌ಆನ್ ಸಹ, ವೇದಗಳನ್ನು "ಪ್ರಾಚೀನ ಚದುರಿದ ದಿವ್ಯ ಪುಟಗಳು", 'ಝುಬ್ರಲ್ ಅವ್ವಲೀನ್' ಎಂದು ಉಲ್ಲೇಖಿಸುತ್ತದೆ. 'ಝುಬ್ರಲ್ ಅವ್ವಲೀನ್'ನ ಮತ್ತೊಂದು ಅರ್ಥ "ಪ್ರಾಚೀನ ಜನರ ಗ್ರಂಥಗಳು".

● ಮೇಲಿನ ಪದಗಳನ್ನು ಉಲ್ಲೇಖಿಸುವ ಕುರ್‌ಆನ್ ಸೂಕ್ತಗಳು ಇಂತಿವೆ.

"ಈ ವ್ಯಕ್ತಿ ತನ್ನ ಪ್ರಭುವಿನ ಕಡೆಯಿಂದ ನಿದರ್ಶನ(ಪವಾಡ)ವನ್ನೇನೂ ತರುವುದಿಲ್ಲವೇಕೆ? ಎಂದು ಅವರು ಕೇಳುತ್ತಾರೆ. ಅವರ ಬಳಿಗೆ ಹಿಂದಿನ ಗ್ರಂಥಗಳು ಸಕಲ ಶಿಕ್ಷಣಗಳ ಸುಸ್ಪಷ್ಟ ವಿವರಣೆ ಬರಲಿಲ್ಲವೇ?" (ಪವಿತ್ರ ಕುರ್‌ಆನ್: 20: 133)

ಭಾರತೀಯರು ಮತ್ತು ಅರಬರು ಅನಾದಿ ಕಾಲದಿಂದಲೂ ವ್ಯಾಪಾರ ವಹಿವಾಟು ಸಂಬಂಧವನ್ನು ಹೊಂದಿದ್ದರು. ಅನೇಕ ಭಾರತೀಯರು ಯಮನ್, ಸೌದಿ ಅರೇಬಿಯಾ ಮತ್ತು ಬಹ್ರೈನ್‌ನಲ್ಲಿ ನೆಲೆಸಿದ್ದರು. ಇವರಲ್ಲಿ ಕೆಲವರು "ಪ್ರವಾದಿ ಮುಹಮ್ಮದ್(ಸ) ಏಕೆ ನಾವು ಪ್ರವಾದಿಯಾಗಿರುವ ಬಗ್ಗೆ ಅಲ್ಲಾಹನವತಿಯಿಂದ ಪ್ರಬಲ ಸಾಕ್ಷಿ ತರುವುದಿಲ್ಲ?" ಎಂದು ಪ್ರಶ್ನಿಸಿದಾಗ ಅಲ್ಲಾಹ್ ಮೇಲಿನ ಸೂಕ್ತವನ್ನು ಅವತೀರ್ಣಗೊಳಿಸಿದನು. ಅಲ್ಲಾಹ್ ನುಡಿದನು "ಸುಹ್ಫ಼ಿ ಊಲಾದಲ್ಲಿ (ಆದಿ ಗ್ರಂಥ ಅಥವಾ ಪವಿತ್ರ ವೇದಗಳು) ನಿಮಗಾಗಿ ಪ್ರಬಲ ಸಾಕ್ಷಿಗಳಿಲ್ಲವೇ? ವೇದಗಳಲ್ಲಿ ಪ್ರವಾದಿ ಮುಹಮ್ಮದ್(ಸ)ರ ಬಗ್ಗೆ ಸ್ಪಷ್ಟ ಭವಿಷ್ಯವಾಣಿಗಳಿವೆ. 31 ಕಡೆಗಳಲ್ಲಿ ಪ್ರವಾದಿ ಮುಹಮ್ಮದ್(ಸ)ರನ್ನು ವಿಭಿನ್ನ ಹೆಸರುಗಳಲ್ಲಿ, ಉದಾಹರಣೆಗೆ ನರಶನ್ಸ್, ಕಲ್ಕಿ ಅವತಾರ, ಮುಹಮ್ಮದ್, ಅಹ್ಮದ್, ಮಾಮ್ಹ ಋಷಿ ಅಥವಾ ಅಂತಿಮ ಋಷಿ ಮೊದಲಾದವುಗಳುಗಳಿಂದ ಕರೆಯಲಾಗಿದೆ. ವೇದಗಳಲ್ಲಿ ಪ್ರವಾದಿ ಮುಹಮ್ಮದ್(ಸ)ರ

ಆಗಮನದ ಬಗ್ಗೆ ಭವಿಷ್ಯವಾಣಿವಿರುವುದರಿಂದ ಇದಕ್ಕಿಂತ ಪ್ರಬಲ ಸಾಕ್ಷಿಯ ಅಗತ್ಯವಿದೆಯೇ?

ವೇದಗಳನ್ನು 'ಝುಬ್ರಲ್ ಅವ್ವಲೀನ್' ಎಂದು ಉಲ್ಲೇಖಿಸುವ ಕುರ್‌ಆನಿನ ಸೂಕ್ತ ಈ ರೀತಿ ಇದೆ.

"..... ಮತ್ತು ಗತ ಜನಾಂಗಗಳ ಗ್ರಂಥಗಳಲ್ಲೂ ಇದು ಇದೆ." (ಪವಿತ್ರ ಕುರ್‌ಆನ್: 25:196)

ಅಂದರೆ, ಪವಿತ್ರ ಕುರ್‌ಆನ್‌ನಲ್ಲಿ ಇರುವ ಬೋಧನೆಗಳು ಪ್ರಾಚೀನ ಕಾಲದ ಜನರಿಗೆ ನೀಡಲಾಗಿದ್ದ ದೈವಿಕ ಗ್ರಂಥಗಳು– 'ಆದಿ ಗ್ರಂಥಗಳಲ್ಲೂ ಇವೆ. (ಈ ಪುಸ್ತಕದಲ್ಲಿ ಅಂತಹ 80 ಸೂಕ್ತಗಳು ಉಲ್ಲೇಖಿಸಲ್ಪಟ್ಟಿವೆ.)

● ಆದಿ ಗ್ರಂಥಗಳನ್ನು ವಿವರಿಸುವ ಮತ್ತೊಂದು ಕುರ್‌ಆನಿನ ಸೂಕ್ತ ಹೀಗಿದೆ.

"ಓ ಪೈಗಂಬರರೇ, ನಾವು ನಿಮಗಿಂತ ಮುಂಚೆಯೂ ಸಂದೇಶವಾಹಕರನ್ನು ಕಳುಹಿಸಿದಾಗಲೆಲ್ಲಾ ಪುರುಷರನ್ನೇ ಕಳುಹಿಸಿದ್ದೇವೆ. ನಾವು ಅವರಿಗೆ ನಮ್ಮ ಸಂದೇಶಗಳನ್ನು 'ವಹ್ಯ್' ಹೂಡುತ್ತಿದ್ದೆವು. ನಿಮಗೆ ಗೊತ್ತಿಲ್ಲದಿದ್ದರೆ ವಿದ್ವಾಂಸರೊಡನೆ ವಿಚಾರಿಸಿರಿ. ಗತ ಸಂದೇಶ ವಾಹಕರಿಗೂ ನಾವು ಪ್ರತ್ಯಕ್ಷ ಪ್ರಮಾಣಗಳನ್ನೂ, ಗ್ರಂಥಗಳನ್ನೂ ಕೊಟ್ಟು ಕಳುಹಿಸಿದ್ದೆವು." (ಪವಿತ್ರ ಕುರ್‌ಆನ್: 16: 43,44)

● 'ಬಯ್ಯನಾತ್' ಮತ್ತು 'ಝುಬೂರ್' ಪದಗಳು ಪ್ರಾಚೀನ ಗ್ರಂಥಗಳನ್ನೂ ಪ್ರಸ್ತಾಪಿಸುತ್ತವೆ. ಈ ಪ್ರಾಚೀನ ಗ್ರಂಥಗಳು, ಲಿಖಿತ ರೂಪದಲ್ಲಿರಲಿಲ್ಲ. 'ಬಯ್ಯನಾತ್' ಮತ್ತು 'ಝುಬೂರ್' ಪದಗಳು ವೇದಗಳನ್ನು ಹೊರತುಪಡಿಸಿ ಯಾವುದೇ ತಿಳಿದು ಬಂದಿರುವ ಪ್ರಾಚೀನ ನಾಗರಿಕತೆಗಳ ದೈವಿಕ ಗ್ರಂಥಗಳನ್ನು ಅಥವಾ ಯಾವುದೇ ಪ್ರಾಚೀನ ದೈವಿಕ ಗ್ರಂಥಗಳನ್ನು ಹೊಂದಿಕೆಯಾಗುವುದಿಲ್ಲ. ಕುರ್‌ಆನ್ ವೇದಗಳನ್ನು 'ಸುಹ್ಯಫಿ ಊಲಾ', 'ಝುಬ್ರಲ್ ಅವ್ವಲೀನ್', 'ಬಯ್ಯನಾತ್' ಮತ್ತು 'ಝುಬೂರ್' ಹೆಸರುಗಳಿಂದ ಉದ್ಧರಿಸುತ್ತದೆ.

● ಹಿಂದೂ ಧರ್ಮದ ಮೂಲ ಹೆಸರು 'ಸನಾತನ ಧರ್ಮ' ಅಥವಾ 'ವೈದಿಕ ಧರ್ಮ'ವಾಗಿದೆ. ಪವಿತ್ರ ಕುರ್‌ಆನ್ ಸನಾತನ ಧರ್ಮದ ಅನುಯಾಯಿಗಳನ್ನು 'ಸಬಯನರು' ಎಂದು ಉದ್ಧರಿಸುತ್ತದೆ. ಈ ಪದವನ್ನು ಉದ್ಧರಿಸುವ ಕುರ್‌ಆನಿನ ಸೂಕ್ತ ಇಂತಿದೆ.

"ನಿಶ್ಚಯವಾಗಿಯೂ ಪೈಗಂಬರರನ್ನು ನಂಬುವವರಿರಲಿ, ಯಹೂದಿಯರಿರಲಿ, ಕ್ರೈಸ್ತರಿರಲಿ, ಸಬಯನರಿರಲಿ, ಯಾರೂ ಅಲ್ಲಾಹ್ ಮತ್ತು ನಿರ್ಣಾಯಕ (ಪುನರುತ್ಥಾನ) ದಿನದ ಮೇಲೆ ವಿಶ್ವಾಸವಿಟ್ಟು ಸತ್ಕರ್ಮಗಳನ್ನು ಮಾಡುವವರೋ, ಅವರಿಗೆ ಅದರ ಪ್ರತಿಫಲವು ಅವರ ಪ್ರಭುವಿನ ಬಳಿ ಇದ್ದೇ ಇದೆ." (ಪವಿತ್ರ ಕುರ್‌ಆನ್: 2: 62, 5:69)

● ಪವಿತ್ರ ಕುರ್‌ಆನ್ ಎಲ್ಲಾ ಜನರನ್ನು ಪ್ರೀತಿ, ಸೌಹಾರ್ದತೆಯಿಂದ ಬಾಳಲು ಎಲ್ಲಾ ದೈವಿಕ ಗ್ರಂಥಗಳಲ್ಲಿ ಸಮನಾಗಿರುವ ಬೋಧನೆಗಳನ್ನು ಅನುಸರಿಸಲು ಉಪದೇಶಿಸುತ್ತದೆ. ಎಲ್ಲಾ ದೈವಿಕ ಗ್ರಂಥಗಳಲ್ಲಿ ಸಮವಾಗಿರುವ ಬೋಧನೆಗಳನ್ನು ಆಧರಿಸಿ ಜನರನ್ನು ಒಗ್ಗೂಡಿಸಬೇಕಾಗಿದೆ.

ವೇದಗಳಲ್ಲಿ ಹಾಗೂ ಕುರ್‌ಆನ್‌ನಲ್ಲಿರುವ ಸಮಾನ ಬೊಧನೆಗಳನ್ನು ಈಗ ಪರಿಶೀಲಿಸಿ ಅದರ ಬುನಾದಿಯ ಮೇಲೆ ಸೌಹಾರ್ದಯುತ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸೋಣ.

▼▼▼▼▼▼▼

### ಅಧ್ಯಾಯ- 4

# ಪುರುಷ್ ಮೇಧ ಅಥವಾ ಬ್ರಕೀದ್

## 4. Purush Medha or Bakri Eid

● ಅಲ್ಲಾಹನಿಗೆ ಅನೇಕ ಹೆಸರುಗಳಿವೆ. ಹಲವು ಹೆಸರುಗಳು ಅಲ್ಲಾಹನ ಗುಣಗಳಿಗೆ ಅನುಗುಣವಾಗಿವೆ. ಉದಾಹರಣೆಗೆ ಕರುಣಾಮಯಿ (ರಹೀಮ್), ಕ್ಷಮಿಸುವವನು (ರವೂಫ್) ಮೊದಲಾದವುಗಳು. ಅಲ್ಲಾಹನ ಕೆಲ ದಾಸರಲ್ಲಿ ಈ ಗುಣಗಳನ್ನು ಹೋಲುವಂತಹ ಗುಣಗಳಿರುತ್ತವೆ. ಅಲ್ಲಾಹನು ಅನೇಕ ಪ್ರವಾದಿಗಳನ್ನು ತನ್ನ ಹೆಸರುಗಳನ್ನು ಹೋಲುವಂತಹ ಹೆಸರುಗಳಿಂದ ಅಭಿಸಂಬೋಧಿಸಿದ್ದಾನೆ. ಉದಾಹರಣೆಗೆ ಅಲ್ಲಾಹ್ ಪ್ರವಾದಿ ಮುಹಮ್ಮದ್(ಸ)ರನ್ನು ಅಬ್ದುಲ್ ರವೂಫ್ (ಕ್ಷಮಿಸುವವನ ದಾಸ) ಮತ್ತು ಅಬ್ದುಲ್ ರಹೀಮ್ (ಕರುಣಾಮಯಿಯ ದಾಸ) ಎಂದು ಅಭಿ ಸಂಭೋದಿಸಿರುವನು. (ಪವಿತ್ರ ಕುರ್‌ಆನ್: 10: 128)

● ಇದೇ ರೀತಿ ಪವಿತ್ರ ವೇದ ಹಾಗೂ ಪುರಾಣಗಳಲ್ಲಿ ಅನೇಕ ಪ್ರವಾದಿಗಳನ್ನು ಸೃಷ್ಟಿಕರ್ತನ ಗುಣಗಳನ್ನು ಹೋಲುವಂತಹ ಹೆಸರುಗಳಿಂದ ಅಭಿಸಂಭೋದಿಸಲಾಗಿದೆ. ಉದಾಹರಣೆಗೆ ಅಗ್ನಿ, ಬ್ರಹ್ಮ ಮೊದಲಾದವುಗಳು. 'ಬ್ರಹ್ಮ' ಪದದ ಅರ್ಥ ಪರಿಪಾಲಕ. 'ಬ್ರಹ್ಮ' ಪದದ ಮತ್ತೊಂದು ಅರ್ಥ ಕರುಣಾಮಯಿಯಾಗಿದೆ. ಕರುಣಾಮಯಿಯಾಗಿರುವವನು ಮಾತ್ರ ಇತರರ ಪರಿಪಾಲಕ ಅಥವಾ ಸಂರಕ್ಷಕನಾಗಲು ಸಾಧ್ಯ. ಕರುಣೆ ಮತ್ತು ಸಂರಕ್ಷಣೆಯ ಗುಣ ಅನೇಕ ಪ್ರವಾದಿಗಳಲ್ಲಿ ಕಂಡು ಬರುತ್ತದೆ. ಆದುದರಿಂದ ಅಲ್ಲಾಹ್ ಅನೇಕ ಪ್ರವಾದಿಗಳನ್ನು ಉದಾಹರಣೆಗೆ ಹ. ಆದಮ್(ಅ) ಮತ್ತು ಹ. ಇಬ್ರಾಹೀಮ್(ಅ)ರನ್ನು ತನ್ನ ಹೆಸರನ್ನು ಹೋಲುವಂತಹ ಹೆಸರು ಬ್ರಹ್ಮ ಅಭಿಸಂಭೋದಿಸಿರುವನು.

ಉದಾಹರಣೆಗೆ ಹರಿವಂಶ ಪುರಾಣದಲ್ಲಿ ಪ್ರಥಮ ಮಾನವ ಹ. ಆದಮ್(ಅ)ರನ್ನು ಬ್ರಹ್ಮ ಎಂದು ಕರೆಯಲಾಗಿದೆ. ಹರಿವಂಶ ಪುರಾಣದಲ್ಲಿ ಈ ರೀತಿ ಹೇಳಲಾಗಿದೆ.

"ಬ್ರಹ್ಮನು ಆದಮರ ದೇಹವನ್ನು ಎರಡು ಭಾಗಗಳನ್ನಾಗಿಸಿದನು. ಒಂದು ಭಾಗ ಪುರುಷವಾಯಿತು ಮತ್ತು ಇನ್ನೊಂದು ಭಾಗ 'ಸ್ತ್ರೀ'ಯಾಯಿತು. ಈ ವಿವರಣೆಯನ್ನು ಹೋಲುವಂತಹ ವಿವರಣೆ ಕುರ್‌ಆನ್ ಮತ್ತು ಬೈಬಲ್‌ಗಳಲ್ಲಿಯೂ ದೊರಕುತ್ತದೆ. ಹವ್ವಾರನ್ನು ಆದಮರ ಎಡ ಪಕ್ಕೆಲುಬಿನಿಂದ ಸೃಷ್ಟಿಸಲಾಯಿತೆಂದು ಈ ಗ್ರಂಥಗಳು ತಿಳಿಸುತ್ತವೆ.

ಇದೇ ರೀತಿ ಋಗ್ವೇದದಲ್ಲಿ ಸೃಷ್ಟಿಕರ್ತನು 'ಕಲ್ಕಿ ಅವತಾರ' ಅಥವಾ ನರಶಂನ್ಸನನ್ನು 'ಅಗ್ನಿ' ಎಂದು ಅಭಿಸಂಭೋದಿಸುತ್ತಾನೆ. ('ಅಗ್ನಿ'ಯು ಸೃಷ್ಟಿಕರ್ತನ ಒಂದು ಹೆಸರಾಗಿರುತ್ತದೆ._

ಋಗ್ವೇದ ಈ ರೀತಿ ಹೇಳುತ್ತದೆ.

"ಓ ಅಗ್ನಿ! ಮನು ನಿಮ್ಮ ಭವಿಷ್ಯವಾಣಿಯನ್ನು ದೃಢೀಕರಿಸುತ್ತಾನೆ." (ಋಗ್ವೇದ 1:13:4)

"ಓ ಅಗ್ನಿ! ನೀವು ಧಾರ್ಮಿಕ ನಾಯಕರೂ, ಪ್ರಚಾರಕರೂ, ಧಾರ್ಮಿಕ ಬೋಧನೆಗಳ ಪರಿಣಿತರೂ, ತಿಳುವಳಿಕೆವುಳ್ಳವರೂ ಆಗಿರುವ ಮನುವನ್ನು ಹೋಲುವವರಾಗಿರುವಿರಿ." (ಋಗ್ವೇದ 1:44:11)

ಈ ಸೂಕ್ತಗಳಲ್ಲಿ 'ಕಲ್ಕಿ ಅವತಾರ' ಅಥವಾ

ನರಶಂಸ್ಸರನ್ನು 'ಅಗ್ನಿ' ಎಂದು ಅಭಿಸಂಭೋದಿಸಲಾಗಿದೆ. ಅವರ ಜನನದ ಮೊದಲೇ ಅವರನ್ನು ಮಹಾನ್ ಪ್ರವಾದಿಯೆಂದು ಅಂಗೀಕರಿಸಲಾಗಿದೆ. ('ಅಗ್ನಿ'ರವರ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಕ್ಯೂ.ಎಸ್. ಖಾನ್‌ರವರು ಬರೆದಿರುವ ಪುಸ್ತಕ 'ಹೂ ಇಸ್ ಅಗ್ನಿ? ಎ ಪ್ರಾಫೆಟ್ ಆರ್ ಪರಮೇಶ್ವರ್?' ಓದಿರಿ ಅಥವಾ ಉಚಿತವಾಗಿ ಡೌನ್‌ಲೋಡ್ ಮಾಡಿರಿ.
ತಿತಿತಿ.ಜಿಡಿಜಜಜಜಣಥಿಚಿಣುಠಟಿ.ಛಿಠಿ.ಏಟಿ

● ಇದೇ ರೀತಿ ಅಥರ್ವ ವೇದವು ಮಾನವ ಬಲಿದಾನದ ವಿವರಣೆಯ ಸಂದರ್ಭದಲ್ಲಿ ಪ್ರವಾದಿ ಇಬ್ರಾಹೀಮ್(ಅ)ರನ್ನು 'ಬ್ರಹ್ಮ' ಎಂದು ಕರೆಯುತ್ತದೆ ಮತ್ತು ಭವಿಷ್ಯ ಪುರಾಣವು ಹ. ಇಬ್ರಾಹೀಮ್(ಅ)ರನ್ನು 'ಅಭಿರಾಮ'ವೆಂದು ಕರೆಯುತ್ತದೆ. (ಭವಿಷ್ಯ ಪುರಾಣ ಭಾಗ–1, ಅಧ್ಯಾಯ– 4)

● ಶ್ರೀ. ಎ.ಹೆಚ್. ವಿದ್ಯಾರ್ಥಿ, ತಮ್ಮ ಪುಸ್ತಕ 'ಮುಹಮ್ಮದ್ ಇನ್ ವರ್ಲ್ಡ್ ಸ್ಕ್ರಿಪ್‌ಚರ್ಸ್' ಪುಟ 136ರಲ್ಲಿ, ಅವರ ಸಂಶೋಧನೆಯ ಪ್ರಕಾರ, ಅಥರ್ವ ವೇದದಲ್ಲಿ ಹ. ಇಬ್ರಾಹೀಮ್(ಅ)ರನ್ನು ಬ್ರಹ್ಮವೆಂದು ಅವರ ಹಿರಿಯ ಪುತ್ರ ಹ. ಇಸ್ಮಾಯೀಲ್(ಅ)ರನ್ನು 'ಅರ್ಥವ' ಮತ್ತು ಕಿರಿಯ ಪುತ್ರ ಹ. ಇಸ್ಹಾಕ್(ಅ)ರನ್ನು 'ಅಂಜಿರ'ವೆಂದು ಕರೆಯಲಾಗಿದೆ ಎಂದಿರುವರು. 'ಪ್ರವಾದಿ ಹ. ಇಬ್ರಾಹೀಮ್(ಅ), ಯಹ್ಯಾದಿಯರು, ಕ್ರೈಸ್ತರು ಮತ್ತು ಮುಸ್ಲಿಮರಲ್ಲಿ ಬಹಳ ಪ್ರಖ್ಯಾತರಾಗಿರುವರು. ಆದರೆ ಅವರನ್ನು ಅಥರ್ವ ವೇದದಲ್ಲಿ ವಿಭಿನ್ನ ಹೆಸರಿನಿಂದ ಕರೆಯಲಾಗಿರುವ ಪ್ರಯುಕ್ತ ಅವರನ್ನು ಸುಲಭವಾಗಿ ಗುರುತಿಸಲಾಗಲಿಲ್ಲ. ರಾಮಾಯಣ ಮತ್ತು ಮಹಾಭಾರತ ಗ್ರಂಥಗಳಂತೆ ಪವಿತ್ರ ವೇದಗಳನ್ನು ಹೆಚ್ಚಾಗಿ ಓದಲಾಗುವುದಿಲ್ಲ. ಆದುದರಿಂದ ಹ. ಇಬ್ರಾಹೀಮ್(ಅ)ರವರು ಹಿಂದೂ ಧರ್ಮೀಯರಲ್ಲಿ ಪರಿಚಿತರಾಗಲಿಲ್ಲ. ಮಾನವ ಬಲಿ ಮತ್ತು ಪವಿತ್ರ ಕಅಬಾದ ನಿರ್ಮಾಣವನ್ನು ಹ. ಇಬ್ರಾಹೀಮ್(ಅ)ರೊಂದಿಗೆ ಸಂಬಂಧ ಕಲ್ಪಿಸಲಾಗಿದ್ದು, ಇದರಿಂದ ಜಗತ್ತಿನಾದ್ಯಂತ ಅವರು ಪ್ರಖ್ಯಾತರಾಗಿರುವರು. ಹ. ಇಬ್ರಾಹೀಮ್(ಅ)ರ ಬಗ್ಗೆ ಹೆಚ್ಚಿನ ವಿವರಗಲನ್ನು ತಿಳಿದುಕೊಳ್ಳೋಣ.

● ಪ್ರವಾದಿ ಹ. ಇಬ್ರಾಹೀಮ್(ಅ) ವಿಗ್ರಹಗಳ ಕೆತ್ತನೆಯ ಕೆಲಸ ಮಾಡುತ್ತಿದ್ದ ಮನೆಯಲ್ಲಿ ಜನಿಸಿದ್ದರು. ಬಾಲ್ಯದಿಮದಲೇ ತಮ್ಮ ತಂದೆ ವಿಗ್ರಹಗಳ ಕತ್ತನೆಯ ಕೆಲಸ ಮಾಡುತ್ತಿರುವುದನ್ನು ಅವರು ಗಮನಿಸುತ್ತಿದ್ದರು. ತಮ್ಮ ತಂದೆಯ ಕೈಗಳಿಂದ ಸೃಷ್ಟಿಯಾದ ವಿಗ್ರಹಗಳು ವಿಶ್ವದ ಸೃಷ್ಟಿಕರ್ತರಾಗಲು ಹೇಗೆ ಸಾಧ್ಯ? ಎಂದು ಯೋಚಿಸುತ್ತಿದ್ದರು. ತಮ್ಮ ವಿಚಾರಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತಿದ್ದರು. ಒಂದು ದಿನ ಹಬ್ಬದ ಸಂದರ್ಭದಲ್ಲಿ ಊರಿನ ಜನರೆಲ್ಲಾ ಊರಿನಿಂದ ಹೊರಗಿದ್ದ ಸಂದರ್ಭದಲ್ಲಿ ಹ. ಇಬ್ರಾಹೀಮ್(ಅ) ಕೆಲ ವಿಗ್ರಹಗಳನ್ನು ಹಾಳುಗೆಡವಿದರು.


● ರಾಜನು ಈ ವಿಷಯವನ್ನು ತಿಳಿದಾಗ ಕೋಪೋದ್ರಿಕ್ತನಾದನು. ಉರಿಯುತ್ತಿರುವ ಬೆಂಕಿಯಲ್ಲಿ ಹ. ಇಬ್ರಾಹೀಮ್(ಅ)ರನ್ನು ಎಸೆಯುವಂತೆ ಆಜ್ಞಾಪಿಸಿದನು. ರಾಜನ ಅಪ್ಪಣೆಯಂತೆ ಹ. ಇಬ್ರಾಹೀಮ್(ಅ)ರನ್ನು ಬೆಂಕಿಯಲ್ಲಿ ಎಸೆಯಲಾಯಿತು. ಆದರೆ ಅಲ್ಲಾಹನ ಆಜ್ಞೆಯ ಮೇರೆಗೆ ಬೆಂಕಿಯು ಹ. ಇಬ್ರಾಹೀಮ್(ಅ)ರಿಗೆ ಯಾವ ಹಾನಿಯನ್ನೂ ಮಾಡಲಿಲ್ಲ.

● ನಂತರ ಹ. ಇಬ್ರಾಹೀಮ್(ಅ) ಫೆಲೆಸ್ತೀನ್‌ಗೆ ವಲಸೆ ಹೋದರು. ವೃದ್ಧಾಪ್ಯ ತಲುಪುವವರೆಗೂ ಅವರಿಗೆ ಸಂತಾನವಿರಲಿಲ್ಲ. ಅವರು ತೊಂಭತ್ತು ವರ್ಷ ಪ್ರಾಯಕ್ಕೆ

ತಲುಪಿದಾಗ ಹ. ಇಸ್ಮಾಯೀಲ್(ಅ) (ಅಥರ್ವ) ಜನಿಸಿದರು. ಹ. ಇಸ್ಮಾಯೀಲ್ ಹಸುಗೂಸುವಿದ್ದಾಗ ಅಲ್ಲಾಹ್ ಅವರ ಪತ್ನಿ ಹ. ಹಾಜಿರಾ ಮತ್ತು ಹ. ಇಸ್ಮಾಯೀಲ್‌ರನ್ನು ನಿರ್ಜನ ಪ್ರದೇಶದಲ್ಲಿ (ಈಗಿನ ಮಕ್ಕಾ ಪ್ರದೇಶ) ಏಕಾಂತರಾಗಿ ಬಿಟ್ಟು ಹ. ಇಬ್ರಾಹೀಮರನ್ನು ಅಲ್ಲಿಂದ ಕೆರಳಲು ಆಜ್ಞಾಪಿಸಿದನು.


● ಈ ನಿರ್ಜನ ಪ್ರದೇಶದಲ್ಲಿ ಹ. ಹಾಜಿರಾರವರಿಗೆ ತಿನ್ನಲು ಯಾವುದೇ ಆಹಾರ, ಕುಡಿಯಲು ನೀರು ಲಭ್ಯವಿರಲಿಲ್ಲ. ಹಸಿವೆಯಿಂದ ಮತ್ತು ಬಾಯಾರಿಕೆಯಿಂದ ಪರಿತಪಿಸುತ್ತಿರುವಾಗ ಅಲ್ಲಾಹನ ಅನುಜ್ಞೆ ಮೇರೆಗೆ ಹಸುಗೂಸು ಹ. ಇಸ್ಮಾಯೀಲ್ ಕಾಲನ್ನು ಭೂಮಿಗೆ ಬಡಿದಾಗ ನೀರಿನ ಚಿಲುಮೆ ಉಕ್ಕಿ ಬಂದಿತು. ಈ ನೀರಿನ ಚಿಲುಮೆಗೆ 'ಝಮ್‌ಝಮ್' ಎನ್ನುತ್ತಾರೆ. ಇಂದಿಗೂ ಈ ಚಿಲುಮೆ ಹರಿಯುತ್ತಿದೆ. ಮರಳುಗಾಡಿನಲ್ಲಿ ನೀರಿನ ಚಿಲುಮೆ ಮೂಡಿದ್ದರಿಂದ, ಅನೇಕ ಬುಡಕಟ್ಟುಗಳು ಬಂದು ಚಿಲುಮೆಯ ಸುತ್ತಮುತ್ತ ನೆಲೆಸಿದವು.

● ಹ. ಇಸ್ಮಾಯೀಲ್(ಅ) ಯುವಕರಾದಾಗ, ಹ. ಇಬ್ರಾಹೀಮ್(ಅ)ರಿಗೆ ತಮಗೆ ಅತ್ಯಂತ ಪ್ರಿಯವಾಗಿರುವ ವಸ್ತುವನ್ನು ಅಲ್ಲಾಹನ




*Inside view of Kaaba*

ಮಾರ್ಗದಲ್ಲಿ ಬಲಿ ನೀಡುತ್ತಿರುವಂತೆ ಅನೇಕ ಬಾರಿ ಕನಸು ಕಂಡರು. ಪ್ರವಾದಿಗಳು ಕಾಣುವ ಕನಸು ಸೃಷ್ಟಿಕರ್ತನ ಆಜ್ಞೆಗಳಾಗಿರುತ್ತವೆ. ಹ. ಇಬ್ರಾಹೀಮ್(ಅ) ಅನೇಕ ವಸ್ತುಗಳನ್ನು ಅಲ್ಲಾಹನ ಮಾರ್ಗದಲ್ಲಿ ಬಲಿ ನೀಡಿದರು. ಆದರೆ ಕನಸು ಪುನರಾವರ್ತನೆಯಾಗುತ್ತಲೇ ಇತ್ತು. ಕೊನೆಗೆ ಪ್ರವಾದಿ ಇಬ್ರಾಹೀಮ್(ಅ)ರಿಗೆ ತೋಚಿತು. ಅವರಿಗೆ ಅತ್ಯಂತ ಪ್ರಿಯವಾಗಿದ್ದ




ವಸ್ತು ಅವರ ಪುತ್ರ ಹ. ಇಸ್ಮಾಯೀಲ್(ಅ) ಆಗಿದ್ದು, ಅವರನ್ನು ಅಲ್ಲಾಹನಿಗಾಗಿ ಬಲಿ ನೀಡಬೇಕಾಗಿತ್ತು.

● ಹ. ಇಸ್ಮಾಯೀಲ್(ಅ) ಪ್ರವಾದಿ ಪುತ್ರರಾಗಿದ್ದು, ಮುಂದೆ ಅವರು ಮಹಾನ್ ಪ್ರವಾದಿಯಾಗಲಿದ್ದರು. ಹ. ಇಬ್ರಾಹೀಮ್(ಅ), ಪುತ್ರ ಹ. ಇಸ್ಮಾಯೀಲ್(ಅ)ರಿಗೆ ತಮ್ಮ ಕನಸಿನ ವೃತ್ತಾಂತ ತಿಳಿಸಿದಾಗ, ಹ. ಇಸ್ಮಾಯೀಲ್(ಅ) ನುಡಿದರು.

● "ತಂದೆಯೇ ಅಲ್ಲಾಹ್ ನಿಮಗೆ ನೀಡಿರುವ ಆಜ್ಞೆಯನ್ನು ಪೂರ್ತಿಗೊಳಿಸಿರಿ. ಅಲ್ಲಾಹ್ ಬಯಸಿದರೆ ನನ್ನನ್ನು ದೃಢ ನಿಷ್ಠೆಯವನಾಗಿ ಕಂಡುಕೊಳ್ಳುವಿರಿ." (ಕುರ್‌ಆನ್: 37:102)

● ಹ. ಇಬ್ರಾಹೀಮ್(ಅ) ತಮ್ಮ ಪುತ್ರನನ್ನು ಮಕ್ಕಾ ಸನಿಹದಲ್ಲಿರುವ ಮಿನಾ ಕಣಿವೆಗೆ ಒಯ್ದರು. ಅಲ್ಲಿ ಹ. ಇಸ್ಮಾಯೀಲ್‌ರನ್ನು ಬಲಿಕೊಡಲು ಪ್ರಯತ್ನಿಸಿದರು. ಎಷ್ಟೇ ಯತ್ನಿಸಿದರೂ ಹ. ಇಸ್ಮಾಯೀಲ್‌ರನ್ನು

ಬಲಿಕೊಡಲು ಸಾಧ್ಯವಾಗಲಿಲ್ಲ. ಅಲ್ಲಾಹ್ ಹ. ಇಬ್ರಾಹೀಮ್(ಅ)ರ ನಿಷ್ಠೆಯನ್ನು ಪರಿಕ್ಷೀಸ ಬಯಸಿದ್ದನು. ಮಾನವ ಬಲಿ ಅಲ್ಲಾಹನಿಗೆ ಬೇಕಿರಲಿಲ್ಲ. ಅಲ್ಲಾಹನು ಹ. ಇಸ್ಮಾಯೀಲ್(ಅ)ರನ್ನು ರಕ್ಷಿಸಿದನು. ಹ. ಇಸ್ಮಾಯೀಲ್‌ರ ಬಲದು ಒಂದು ಕರಿಯನ್ನು ಬಲಿಕೊಡಲಾಯಿತು. (ನೋಡಿ ಪವಿತ್ರ ಕುರ್ಆನ್: 37: 107)

● ಬೈಬಲ್‌ನಲ್ಲಿಯೂ ಇದೇ ವಿವರಣೆಯನ್ನು ಕಾಣುತ್ತೇವೆ. ಇಂತಹದೇ ವಿವರಣೆ ಅಥರ್ವ ವೇದ(10–2–26)ದಲ್ಲಿ 'ಪುರುಷ್‌ಮೇಧ' (ಮಾನವ ಬಲಿ) ಎಂಬ ಈ ಶೀರ್ಷಿಕೆ ಅಡಿಯಲ್ಲಿದೆ.

● ಕುರ್ಆನ್‌ನಲ್ಲಿ ಈ ಘಟನೆಗೆ ಸಂಬಂಧಿಸಿದಂತೆ ಕೊನೆಯ ಸೂಕ್ತ ಈ ರೀತಿ ಇದೆ:

● "....... (ಒಂದು ದಿನ) ಇಬ್ರಾಹೀಮರು ಅವನೊಡನೆ. "ಮಗೂ ನಾನು (ಬಲಿಯರ್ಪಿಸಲಿಕ್ಕಾಗಿ) ನಿನ್ನ ಕೊರಳು ಕೊಯ್ಯುತ್ತಿರುವುದನ್ನು ಕನಸಿನಲ್ಲಿ ಕಂಡೆನು. ಈಗ ನಿನ್ನ ಅಭಿಪ್ರಾಯವೇನೆಂದು ಹೇಳು" ಎಂದರು. ಆಗ ಅವನು "ಅಪ್ಪಾ, ತಮಗೆ ಆಜ್ಞಾಪಿಸಲಗಿರುವುದನ್ನು ಮಾಡಿ ಬಿಡಿರಿ, ಅಲ್ಲಾಹನಿಚ್ಛೀಸಿದರೆ ತಾವು ನನ್ನನ್ನು ಸಹನೆಯುಳ್ಳವನಾಗಿ ಕಾಣುವಿರಿ" ಎಂದನು. (ಪವಿತ್ರ ಕುರ್ಆನ್ 37: 103–105)

● ಅಥರ್ವ ವೇದದಲ್ಲಿ ಈ ರೀತಿ ಹೇಳಲಾಗಿದೆ.

मूर्धानमस्य संसीव्याथर्वा हदयं च यत् ।
मस्तिश्कादूर्ध्वः पैरयत् पवमानोधि शीर्शतः ।।२६।।

"ಅಥರ್ವ ತನ್ನ ತಲೆ ಮತ್ತು ಹೃದಯವನ್ನು ಹೊಲಿದನು. ದೈವಭಕ್ತಿ ಆತನ ಹಣೆಯ ಮೇಲೆ ಚಲಿಸುತ್ತಿತ್ತು. ಬ್ರಹ್ಮನು ಅಥರ್ವನ ಒಪ್ಪಿಗೆಯನ್ನು ಕೇಳಿದಾಗ, ಅಥರ್ವನು "ತಂದೆಯೇ, ಈಶ್ವರನ ಆಜ್ಞಾಪಾಲನೆಯನ್ನು ಮಾಡಿರಿ. ನೀವು ನನ್ನನ್ನು ಸಹನೆಯುಳ್ಳವನಾಗಿ ಕಾಣುವಿರಿ" ಎಂದು ಉತ್ತರಿಸಿದನು. ತಂದೆಯ ಮಾತಿಗೆ ಅಥರ್ವ ಸಂತೋಷದಿಂದ ಒಪ್ಪಿಗೆ ಸೂಚಿಸಿದರು. ಈ ಕಾರಣದಿಂದ ಅಥರ್ವರು ತಮ್ಮ ತಲೆ ಮತ್ತು ಹೃದಯವನ್ನು ಹೊಲಿದು ತಮ್ಮ ತಲೆಯನ್ನು ಬಲಿ ನೀಡಲು ಸಿದ್ಧರಾದರು ಎಂದು ಅಥರ್ವ ವೇದದ ಈ ಸೂಕ್ತವು ತಿಳಿಸುತ್ತದೆ.


● ಹ. ಇಬ್ರಾಹೀಮ್(ಅ) ಬಲಿ ನೀಡಲು ಅಥರ್ವರನ್ನು ಪಟ್ಟಣದ ಹೊರಗೆ (ಮಿನಾ ಪ್ರದೇಶಕ್ಕೆ) ಕರೆದೊಯ್ಯುತ್ತಿರುವಾಗ ಶೈತಾನನು ಮೂರು ಬಾರಿ ಹ. ಇಬ್ರಾಹೀಮ್(ಅ)ರನ್ನು ದಾರಿತಪ್ಪಿಸಿ ಹ. ಇಸ್ಮಾಯೀಲ್‌ರ ಬಲಿಯನ್ನು ತಡೆಯಲು ಪ್ರಯತ್ನಿಸಿದು. ಆದರೆ ಪ್ರತಿಸಲವೂ ಹ. ಇಬ್ರಾಹೀಮ್(ಅ) ಶೈತಾನನ ಪ್ರಯತ್ನವನ್ನು ನಿಷ್ಫಲಗೊಳಿಸಿ ಆತನೆಡೆಗೆ ಕಲ್ಲನ್ನು ಎಸೆದರು. ಈ ಮೂರು ಸ್ಥಳಗಳಲ್ಲಿ ಕಲ್ಲಿನ ಕಂಬವನ್ನು ನೆಡಲಾಗಿದ್ದು ಹಜ್ಜ್ ನಿರ್ವಹಣೆಯ ವೇಳೆ ಪ್ರತಿಯೋರ್ವ ಹಾಜಿಗಳು ಈ ಮೂರು ಸ್ಥಳಗಳಲ್ಲಿ ಕಲ್ಲಿನ ಕಂಬಗಳಿಗೆ ಕಲ್ಲನ್ನು ಎಸೆಯುತ್ತಾರೆ. ಹಜ್ಜ್‌ನ ಇದು ಕಡ್ಡಾಯ ವಿಧಿಯಾಗಿದೆ. ಜೀವನದಲ್ಲಿ ಇದೇ ರೀತಿ ಶೈತಾನನು ದಾರಿ ತಪ್ಪಿಸಲು ಪ್ರಯುತ್ನಿಸಿದಾಗಲೆಲ್ಲಾ ಅವನೊಮದಿಗೆ ಹೋರಾಡುವ ಸಂಕೇತವಾಗಿದೆ.

● ಹ. ಆದಮ್(ಅ) ಈ ಜಗತ್ತಿಗೆ ಬಂದ ಪ್ರಥಮ ಮಾನವರಾಗಿದ್ದು ಮಾನವಕುಲದ ಪಿತಾಮಹರಾಗಿರುವರು. 'ಮಹಾ ಪ್ರವಾಹ'ದ ನಂತರ ಹ. ನೂಹ್(ಅ) (ಮನು) ಪುನಃ ಭೂಮಿಯ ಮೇಲೆ ಜನರು ಹರಡಲು ಕಾರಣರಾದರು. ಹ. ಇಬ್ರಾಹೀಮ್(ಅ) ಯಹೂದಿಯರ, ಕ್ರೈಸ್ತರ ಮತ್ತು ಮುಸ್ಲಿಮರ ಅನೇಕ ಪ್ರವಾದಿಗಳ ಪಿತಾಮಹರಾಗಿರುವರು.

ವೃದ್ಧಾಪ್ಯದಲ್ಲಿ ಜನಿಸಿದ ಪುತ್ರನ ಬಲಿಕೊಡಲು ಸಿದ್ಧರಾಗುವ ಮೂಲಕ ಸೃಷ್ಟಿಕರ್ತನ ಎಲ್ಲಾ ಆಜ್ಞೆಗಳನ್ನು ಪಾಲಿಸಲು ತಾವು ಸಿದ್ಧರಾಗಿರುವುದನ್ನು ಪುರಾವೆಯ ಮೂಲಕ ಜಗಜ್ಜಾಹೀರುಗೊಳಿಸಿದರು. ಹ. ಇಬ್ರಾಹೀಮ್(ಅ) ನಮಗೆ ಮಾದರಿಯಾಗಿದ್ದು, ಅವರ ಉದಾಹರಣೆಯನ್ನು ನಾವು ಅನುಸರಿಸಬೇಕಿದೆ.

- ಜಗತ್ತಿನಾದ್ಯಂತ ಹ. ಇಬ್ರಾಹೀಮ್(ಅ) ತಮ್ಮಪುತ್ರನನ್ನು ಬಲಿ ನೀಡಲು ಸಿದ್ಧರಾಗಿದ್ದ ದಿನವನ್ನು ಬಕ್ರೀದ್ ಹಬ್ಬ (ಪುರುಷಮೇಧ) ಅಥವಾ ಈದುಲ್ ಅಝ್‌ಹಾವಾಗಿ ಆಚರಿಸುತ್ತಾರೆ. ಹ. ಇಬ್ರಾಹೀಮ್(ಅ)ರ ತ್ಯಾಗ, ಬಲಿದಾನದ ಪ್ರತೀಕವಾಗಿ ಜಗತ್ತಿನಾದ್ಯಂತ ಪ್ರಾಣಿಯ ಬಲಿಯನ್ನು ನೀಡಲಾಗುತ್ತದೆ. ಬಲಿ ನೀಡಿದ ನಂತರ ಮಾಂಸವನ್ನು ಬಡ ಜನರಿಗೆ ಮತ್ತು ನೆಂಟರಿಷ್ಟರಿಗೆ ಹಂಚಲಾಗುತ್ತದೆ. ಈ ದಿನವೇ ಹಜ್ಜ್ ಅನ್ನು ನಿರ್ವಹಿಸಲಾಗುತ್ತದೆ.

▼▼▼▼▼▼▼



मक्का (धरती का केंद्र)

### ಅಧ್ಯಾಯ– 5

# ಮನು ಅಥವಾ ಹ. ನೂಹ್(ಅ)?

## 5. Manu or Hazrat Nooh

● ಭಾರತೀಯರು ಜಗತ್ತಿನಲ್ಲೇ ಅತ್ಯಂತ ಬುದ್ಧಿಶಾಲಿ ಮತ್ತು ಮೇಧಾವಿಗಳಾಗಿರುವರು. ನಾಸಾ(ಓಂಖಂ)ಗೆ 35% ವಿಜ್ಞಾನಿಗಳು ಭಾರತೀಯರೇ ಆಗಿರುವರು. ಭಾರತೀಯರು ಬಹಳ ಸಹನಾಶೀಲರೂ. ಅಹಿಂಸಾವಾದಿಗಳೂ, ಶ್ರಮಜೀವಿಗಳೂ ಮತ್ತು ಸುಸಂಸ್ಕೃತರೂ ಆಗಿರುವರು. ಆದುದರಿಂದಲೇ ಕೆನಡಾ, ನ್ಯೂಝಿಲ್ಯಾಂಡ್, ಆಸ್ಟ್ರೇಲಿಯಾ ಮೊದಲಾದ ದೇಶಗಳು ತಮ್ಮ ದೇಶದ ಹೊಸ ನಾಗರಿಕರಾಗಲು ಭಾರತೀಯರನ್ನೇ ಅಪೇಕ್ಷಿಸುತ್ತಾರೆ.

● ಆದರೆ ಧರ್ಮದ ವಿಷಯದಲ್ಲಿ ಈ ಮಹಾನ್ ದೇಶ ಇತರ ಜನರಿಗಿಂತ ಭಿನ್ನವಾಗಿರುವುದೇಕೆ? ಪ್ರತಿಯೊಂದು ಧರ್ಮೀಯರಿಗೆ ಪ್ರವಾದಿಗಳು ಮತ್ತು ದಿವ್ಯಗ್ರಂಥಗಳಿವೆ. ಆದರೆ ಭಾರತೀಯರಿಗೆ ಇದನ್ನು ನಿಖರತೆಯಿಂದ ಹೇಳಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣವೇನು?

● ವಾಸ್ತವಿಕತೆ ಇದಕ್ಕೆ ತದ್ವಿರುದ್ಧವಾಗಿದೆ. ಈ ಮಹಾನ್ ದೇಶಕ್ಕೆ ಅನೇಕ ಪ್ರವಾದಿಗಳು ಬಂದಿರುವರು. ಅನೇಕ ದಿವ್ಯಗ್ರಂಥಗಳು ಅವತೀರ್ಣಗೊಂಡಿವೆ. ಆದರೆ ದುರದೃಷ್ಟವಶಾತ್, ಜನಸಾಮಾನ್ಯರು ಮತ್ತು ಧಾರ್ಮಿಕ ಬೋಧನೆಗಳ ನಡುವೆ ದೊಡ್ಡ ಕಂದಕವೇರ್ಪಟ್ಟಿತ್ತು. ಕಾಲ ಉರುಳಿದಂತೆ ಜನಸಾಮಾನ್ಯರು ಧಾರ್ಮಿಕ ಬೋಧನೆಗಳೊಂದಿಗೆ ಸಂಪರ್ಕ ಕಡಿದುಕೊಂಡು ತಮ್ಮ ಅನನ್ಯತೆಯನ್ನೇ ಮರೆತರು.

● ಹದಿನೆಂಟನೇಯ ಶತಮಾನದ ವರೆಗೆ ವೇದಗಳು ಗ್ರಂಥ ರೂಪದಲ್ಲಿರಲಿಲ್ಲ. ಪುರೋಹಿತ ವರ್ಗ ವೇದಗಳನ್ನು ಕಂಠಪಾಠ ಮಾಡುತ್ತಿತ್ತು. ಪುರೋಹಿತ ವರ್ಗದ ಸ್ವಯಂ ರಚಿತ ಶಾಸನದಂತೆ ಕೇವಲ ಆ ವರ್ಗದವರಷ್ಟೇ ಧಾರ್ಮಿಕ ಬೋಧನೆಗಳನ್ನು ಕಲಿಯಬಹುದಿತ್ತು. ಇತರ ವರ್ಗದ ಜನರು ಅವರಿಂದ ಧಾರ್ಮಿಕ ಬೋಧನೆಗಳನ್ನು ಕಲಿಯುವಂತಿರಲಿಲ್ಲ. ವೇದಗಳು ಗ್ರಂಥ ರೂಪದಲ್ಲಿರದ ಕಾರಣ, ಜನರು ನೇರವಾಗಿ ವೇದಗಳನ್ನು ಅಧ್ಯಯನ ಮಾಡಲೂ ಅಸ್ಪದವಿರಲಿಲ್ಲ.

● ಪುರೋಹಿತ ವರ್ಗವು ಜನಸಂಖ್ಯೆಯ ಕೇವಲ 5% ರಷ್ಟಿದ್ದರೂ, 3000 ವರ್ಷಗಳವರೆಗೆ ಪ್ರತಿಯೊಂದು ಧಾರ್ಮಿಕ ವಿಷಯಗಳ ಮೇಲೆ ಹತೋಟಿಯನ್ನು ಸಾಧಿಸಿದ್ದರು.

● ಈ ಕಾರಣದಿಂದ ಪುರೋಹಿತ ವರ್ಗ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಬಹಳ ಪ್ರಬಲವಾಯಿತು. ಆದರೆ ಪುರೋಹಿತ ವರ್ಗದ ಮೇಲೆ ಧಾರ್ಮಿಕ ವಿಷಯಗಳ ಬಗ್ಗೆ ಅವಲಂಬಿತವಾಗಿದ್ದ 95% ಜನಸಾಮಾನ್ಯರು ತಮ್ಮ ಪ್ರವಾದಿಗಳ ಬಗ್ಗೆ ದೈವಿಕ ಗ್ರಂಥಗಳ ಬಗ್ಗೆ ಅಜ್ಞಾನಿಗಳಾದರು. ಈ ದೇಶಕ್ಕೆ ಇದೊಂದು ದೊಡ್ಡ ದುರಂತವಾಗಿ ಪರಿಣಮಿಸಿತು.

**ದೈವಿಕ ಗ್ರಂಥಗಳನ್ನು ಅಥವಾ ಅವತೀರ್ಣಗೊಂಡ ಗ್ರಂಥಗಳನ್ನು ಗುರುತಿಸುವುದು ಹೇಗೆ?**

● ಯಾವ ಗ್ರಂಥಗಳು ಮತ್ತು ಪಠ್ಯವು ಜಗತ್ತಿನ ಈಗಾಗಲೇ ಗುರುತಿಸಲ್ಪಟ್ಟಿರುವ ಮತ್ತು ಪ್ರಾಮಾಣಿಕರಿಸಲ್ಪಟ್ಟಿರುವ ಗ್ರಂಥ ಮತ್ತು

ಪಠ್ಯಗಳನ್ನು ಹೋಲುತ್ತದೆಯೋ, ಅವುಗಳನ್ನು ಅವತೀರ್ಣಗೊಂಡಿರುವ ಗ್ರಂಥಗಳು ಮತ್ತು ಪಠ್ಯಗಳೆಮದು ಪರಿಗಣಿಸಬಹುದು.

● ಋಗ್ವೇದದ ಬಹಳಷ್ಟು ಪಠ್ಯವು ಬೈಬಲ್ ಮತ್ತು ಕುರ್‌ಆನ್‌ನನ್ನು ಹೋಲುತ್ತವೆ. ವುುಂದುವರೆದು, ಭಾರತೀಂುುರು ವೇದಗಳನ್ನು ಅಪ್‌ರೂಶಿ, ಆದಿಜ್ಞಾನ ಮತ್ತು ಆದಿಗ್ರಂಥವೆಂದು ಪರಿಗಣಿಸುತ್ತಾರೆ. ಆದುದರಿಂದ, ಸಾಮಾನ್ಯವಾಗಿ ವೇದಗಳನ್ನು ಹಿಂದೂ ಧರ್ಮದ ದೈವಿಕ ಗ್ರಂಥಗಳೆಂದು ಮತ್ತು ವಿಶೇಷವಾಗಿ ಏಕದೇವ, ಸ್ವರ್ಗ, ನರಕ ಮತ್ತು ಮರಣೋತ್ತರ ಜೀವನವನ್ನೂ ವಿವರಿಸುವ ವೇದಗಳಲ್ಲಿರುವ ಪಠ್ಯಗಳನ್ನು ನೈಜ ಅವತೀರ್ಣಗೊಂಡಿರುವ ಪಠ್ಯಗಳೆಂದು ಪರಿಗಣಿಸಬಹುದು.

● ಇದಕ್ಕೆ ವ್ಯತಿರಿಕ್ತವಾಗಿ "ಶೂದ್ರರಿಗೆ ಉತ್ತಮ ಸಲಹೆಗಳನ್ನು ನೀಡಬಾರದು" ಎನ್ನುವಂತಹ ಮಾತುಗಳು ಇತರ ದೈವಿಕ ಗ್ರಂಥಗಳಿಗೆ ವ್ಯತಿರಿಕ್ತವಾಗಿರುವ ಪ್ರಯುಕ್ತ, ಈ ರೀತಿಯ ಸ್ೂಕ್ತ್ಗಳನ್ು ದ್ೈವಿಕವ್ೆಂದ್ು ಪರಿಗಣಿಸಬಾರದು.

● ಈ ಹಿನ್ನೆಲೆಯಲ್ಲಿ ಪವಿತ್ರ ಕುರ್‌ಆನ್ ಮುಸ್ಲಿಮರಿಗೆ ಅವತೀರ್ಣಗೊಂಡಿರುವ ದೈವಿಕ ಗ್ರಂಥವಾಗಿರುವಂತೆ, ಪವಿತ್ರ ತೌರಾತ್ ಯಹೂದಿಯರಿಗೆ ಅವತೀರ್ಣಗೊಂಡಿರುವ ಗ್ರಂಥವಾಗಿರುವಂತೆ, ಪವಿತ್ರ ಬೈಬಲ್ ಕ್ರೈಸ್ತರಿಗೆ ಅವತೀರ್ಣಗೊಂಡಿರುವ ಧ್ರ್ಮ ಗ್ರಂಥವಾಗಿರುವಂತೆ, ಪವಿತ್ರ ವೇದಗಳು ಹಿಂದ್ೂ ಧ್ರ್ಮೀಯ್ರಿಗ್ ಅವತೀರ್ಣಗೊಂಡಿರುವ ದೈವಿಕ ಗ್ರಂಥಗಳಾಗಿರುವುದೆಂದು ಪರಿಗಣಿಸಬೇಕು.

**ಸನಾತನ ಧರ್ಮದ ಪ್ರವಾದಿಗಳು**

● ಸಂಸ್ಕೃತ ಭಾಷೆಯಲ್ಲಿ ಪ್ರವಾದಿಗಳ ಹೆಸರು ಅರಬಿ ಮತ್ತು ಆಂಗ್ಲ ಭಾಷೆಗಳಿಗಿಂತ ಭಿನ್ನವಾಗಿರುವುದರಿಂದ, ಸಂಸ್ಕೃತದಲ್ಲಿ ಹೆಸರಿಸಲಾಗಿರುವ ಪ್ರವಾದಿಗಳನ್ನು ಗುರುತಿಸಲು, ಈ ಪ್ರವಾದಿಗಳೊಂದಿಗೆ ಸಂಬಂಧಿಸಿದಂತೆ ಜರುಗಿರುವ 'ಹೋಲುವ' ಘಟನಾವಳಿಗಳನ್ನು ಪರಿಶೀಲಿಸಬೇಕು.

● ಪುರಾಣಗಳು, ವಿಷ್ಣು ಆದಮ್ ಮತ್ತು ಹವ್ವಾರನ್ನು ಒದ್ದೆ ಜೇಡಿಮಣ್ಣಿನಿಂದ ಸೃಷ್ಟಿಸಿರುವನೆಂದು ಹೇಳುತ್ತವೆ.

● ಪರಮೇಶ್ವರನು ಸೃಷ್ಟಿಸಿದ 'ಪ್ರಧಾನ ನಗರ'(ಸ್ವರ್ಗ)ದ ಪೂರ್ವ ಭಾಗದಲ್ಲಿ 4 ಚದರ ಕೋಸು ಅರಣ್ಯವಿತ್ತು (ಕೋಸು ಕಿ.ಮೀ.ಕ್ಕಿಂತ ದೊಡ್ಡದು). ತನ್ನ ಪತ್ನಿಯನ್ನು ನೋಡುವ ಕೌತುಕದಿಂದ ಆದಮನು 'ಪಾಪ'ದ ಮರದ ಬಳಿ ಹೋದನು. ಕಾಳಿ(ಶೈತಾನ)ಯು ಹಾವಿನ ರೂಪದಲ್ಲಿ ಅವರ ಬಳಿಗೆ ಹೋಗಿ ಅವರನ್ನು ದಾರಿ ತಪ್ಪಿಸಿತು. ಪಾಪದ ಮರದ ಹಣ್ಣನ್ನು ತಿಂದು ಆದವುನು ಪರವೋಶ್ವರನ ಆಜ್ಞೋಲ್ಲಂಘನೆಯನ್ನು ವಾಡಿದನು. ಆದುದರಿಂದ ಅವರಿಬ್ಬರನ್ನು ಭೂಮಿಗೆ ಹೊರಹಾಕಲ್ಪಟ್ಟರು. ಇವರೀರ್ವರಿಗೆ ಬಹಳಷ್ಟು ಸಂತಾನವಾಯಿತು. ಆದಮರು 930 ವರ್ಷಗಳ ಕಾಲ ಜೀವಿಸಿದ್ದರು.

● ಪುರಾಣದಲ್ಲಿ ನೀಡಲಾದ ಮೇಲಿನ ವಿವರಣೆಯು ಕುರ್‌ಆನ್ ಮತ್ತು ಬೈಬಲ್‌ನಲ್ಲಿ ನೀಡಿರುವ ನಿರ್ವಣೆಯೊಂದಿಗೆ 100% ಹೋಲುತ್ತದೆ. ಯಹೂದಿಯರು, ಕ್ರೈಸ್ತರು ಮತ್ತು ಮುಸ್ಲಿಮರು ಹ. ಆದಮ್(ಅ)ರನ್ನು ಪ್ರವಾದಿಯೆಂದು ಪರಿಗಣಿಸುತ್ತಾರೆ. ಪುರಾಣಗಳಲ್ಲಿ ಹ. ಆದವ್(ಅ)ರ ವಿವರಣೆಯನ್ನು ಗಮನಿಸಿದರೆ, ಸನಾತನ ಧ್ರ್ಮೀಯ್ರಿಗ್ೂ ಅವ್ರ್ು ಪ್ರವಾದಿಯಾಗಿರಲು ಸಾಧ್ಯತೆವಿದೆ.

● ಈಗ ಭ್ವಿಷ್ಯ ಪುರಾಣವನ್ನು ಪರಿಶೀಲಿಸೋಣ. (ಪ್ರತಿಸಾಗ ಪರೋ ಪ್ರಥಮ

ಕಾಂಡ, 4ನೇ ಅಧ್ಯಾಯ). ಭವಿಷ್ಯ ಪುರಾಣ ಹ. ನೂಹ್(ಅ) (ಮನು) 500 ವರ್ಷ ಜೀವಿಸಿದ್ದರು ಎಂದು ತಿಳಿಸುತ್ತದೆ. ಅವರಿಗೆ ಸಿಮ್, ಸಾಮ್ ಮತ್ತು ಯಾಕೂತ್ ಎಂಬ ಮೂರು ಪುತ್ರರಿದ್ದರು.

● ನೂಹ್ ವಿಷ್ಣುವಿನ ಆರಾಧನೆ ಮಾಡುತ್ತಿದ್ದರು. ಒಮ್ಮೆ ವಿಷ್ಣು ಕನಸಿನಲ್ಲಿ "ಓ ನೂಹ್! ಏಳನೇಯ ದಿನ ಪ್ರಳಯ ಸಂಭವಿಸಲಿದೆ. ಆ ಸಮಯಲ್ಲಿ ನೀನು ಹಡಗಿನಲ್ಲಿ ಆಶ್ರಯವನ್ನು ಪಡೆ. ಓ ಇಂದ್ರವನ್ನು ಆರಾಧಿಸುವವನೇ, ನಿನ್ನನ್ನು ರಕ್ಷಿಸಿಕೊಳ್ಳು. ನೀನು ಸಂಪನ್ನನಾಗುವೆ."

● ವಿಷ್ಣುವಿನ ಆಜ್ಞಾನುಸಾರ ನೂಹ್ ಒಂದು ಹಡಗನ್ನು ನಿರ್ಮಿಸಿದರು. ಈ ಹಡಗು 300 'ಕೈ' ಉದ್ದ, 50 'ಕೈ' ಅಗಲ ಮತ್ತು 300 'ಕೈ ಆಳವಿತ್ತು. (ಒಂದು 'ಕೈ' 18 ಅಂಗುಲಕ್ಕಿಂತ ಸ್ವಲ್ಪ ದೊಡ್ಡದಾಗಿರುತ್ತದೆ.) ನೂಹ್ ಪ್ರತಿಯೊಂದು ಪ್ರಾಣಿ ವರ್ಗದ ಒಂದೊಂದು ಜೊತೆಯನ್ನು, ಏಳು ಋಷಿಗಳನ್ನು ಮತ್ತು ತನ್ನ ಕುಟುಂಬದ ಸದಸ್ಯರನ್ನು ಹಡಗಿನಲ್ಲಿ ಏರಿಸಿಕೊಂಡರು. 40 ದಿನಗಳ ವರೆಗೆ ಭಾರೀ ಮಳೆ ಬಂತು. ಭರತ ವರ್ಷವು ನೀರಿನಲ್ಲಿ ಮುಳುಗಿತು. ನಾಲ್ಕೂ ಸಾಗರಗಳು ಸೇರ್ಪಡೆಗೊಂಡವು.

● ಪ್ರವಾಹದ ನಂತರ ಮುನಿ ಸ್ವರೂಪಿ ನೂಹ್ ತಮ್ಮ ಕುಟುಂಬದವರೊಡನೆ ಅಲ್ಲಿಯೇ ನೆಲೆಸಿದ್ದರು.

ಭವಿಷ್ಯ ಪುರಾಣದಲ್ಲಿ 'ಮಹಾ ಪ್ರವಾಹ'ಕ್ಕೆ ಸಂಬಂಧಿಸಿದಂತೆ ನೀಡಲ್ಪಟ್ಟಿರುವ ವಿವರಣೆಯು ಬೈಬಲ್ ಮತ್ತು ಕುರ್‌ಆನ್‌ನಲ್ಲಿ ನೀಡಲ್ಪಟ್ಟಿರುವ ವಿವರಣೆಯೊಂದಿಗೆ 100% ಹೋಲುತ್ತದೆ. ಬೈಬಲ್ ಮತ್ತು ಕುರ್‌ಆನ್ ಹ. ನೂಹ್(ಅ)ರನ್ನು ಪ್ರವಾದಿ ಎಂದು ಪರಿಗಣಿಸುತ್ತವೆ. ಆದುದರಿಂದ 'ಮಹಾ ನೂಹ್' ಅಥವಾ 'ಮನು' ಎಂದು ಕರೆಯಲ್ಪಡುವ ನೂಹ್ ಸನಾತನ ಧರ್ಮದ ಸಹ ಪ್ರವಾದಿಯೆಂದು ಪರಿಗಣಿಸಲ್ಪಡಬಹುದು.

● ಹ. ನೂಹ್(ಅ)ರ ಪ್ರಸ್ತಾಪ ವೇದಗಳಲ್ಲಿ 75 ಸಲ ಬಂದಿದೆ. ಋಗ್ವೇದದಲ್ಲಿ 51 ಸಲ, ಯಜುರ್ವೇದದಲ್ಲಿ 2 ಸಲ, ಅಥರ್ವವೇದದಲ್ಲಿ 14 ಸಲ ಮತ್ತು ಸಾಮವೇದದಲ್ಲಿ 8 ಸಲ.

● ಮೇದಗಳಲ್ಲಿ ಹ. ನೂಹ್(ಅ)ರ ಉಲ್ಲೇಖವಿರುವ ಕೆಲ ಸೂಕ್ತಗಳು ಹೀಗಿವೆ.

● ಓ ಅಗ್ನಿ! ಮನು ನಿಮ್ಮ ಭವಿಷ್ಯವಾಣಿಯನ್ನು ದೃಢೀಕರಿಸುತ್ತಾನೆ. (ಋಗ್ವೇದ 1:13:4)

● ಓ ಅಗ್ನಿ! ನೀವು ಧಾರ್ಮಿಕ ನಾಯಕರೂ, ಪ್ರಚಾರಕರೂ, ಧಾರ್ಮಿಕ ಬೋಧನೆಗಳ ಪರಿಣಿತರೂ, ತಿಳುವಳಿಕೆವುಳ್ಳವರೂ ಆಗಿರುವ ಮನುವನ್ನು ಹೋಲುವವರಾಗಿರುವಿರಿ. (ಋಗ್ವೇದ 1:44:11)

ಮೇಲಿನ ಸೂಕ್ತಗಳಲ್ಲಿ ಕಲ್ಕಿ ಅವತಾರ ಅಥವಾ ನರಶನ್ಸರನ್ನು 'ಅಗ್ನಿ' ಎಂದು ಅಭಿಸಂಬೋಧಿಸಲಾಗಿದೆ. ಇದು ಸೃಷ್ಟಿಕರ್ತನ ಗುಣಗಳಲ್ಲಿ ಒಂದಾಗಿರುತ್ತದೆ. ಅವರನ್ನು ಅವರ ಜನ್ಮದ ಮೊದಲೇ ಮಹಾ ಪ್ರವಾದಿಯೆಂದು ಅಂಗೀಕರಿಸಲಾಗಿದೆ.

● ಮನು, ಸನಾತನ ಧರ್ಮದ ಧಾರ್ಮಿಕ ನಿಯಮಗಳ ಗ್ರಂಥ 'ಮನುಸ್ಮೃತಿ"ಯ ಗ್ರಂಥಕರ್ತರಾಗಿರುವರು.

● ಕ್ರೈಸ್ತರು ತಮ್ಮ ಕ್ಯಾಲೆಂಡರಿನ 'ಶಕೆ'ಯಹನ್ನು ಪ್ರವಾದಿ ಯೇಸು ಕ್ರಿಸ್ತರ ಜನ್ಮದ ವರ್ಷದಿಂದ ಪರಿಗಣಿಸುತ್ತಾರೆ. ಮುಸ್ಲಿಮರು, ಪ್ರವಾದಿ ಮುಹಮ್ಮದ್(ಸ) ಮದೀನಾಕ್ಕೆ ಹಿಜ್ರತ್ (ವಲಸೆ) ಮಾಡಿದ ವರ್ಷದಿಂದ 'ಶಕೆ'ಯನ್ನು ಪರಿಗಣಿಸುತ್ತಾರೆ. ಹಿಜ್ರತ್

ಇಸ್ಲಾಮಿ ಇತಿಹಾಸದಲ್ಲಿ ಒಂದು ಪ್ರಮುಖ ಘಟನೆಯಾಗಿದೆ. ಹಿಂದೂ ಧರ್ಮಿಯರು "ಮಹಾ ಪ್ರಳಯ"ದ ಘಟನೆಯನ್ನು ತಮ್ಮ 'ಶಕೆ'ಯನ್ನಾಗಿರಿಸಿರುವರು.

● ಏ.ಜೆ.ಎ. ದುಬೋಸ್ (ಂ.ಎ.ಂ. ಆಣಭಘು) ತಮ್ಮ ಪುಸ್ತಕ "ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಆಂಡ್ ಸೆರೆಮೋನೀಸ್"ನಲ್ಲಿ, ಹಿಂದೂ ಧರ್ಮದಲ್ಲಿ ಎಲ್ಲಾ ಪ್ರಮುಖ ಘಟನಾವಳಿಗಳನ್ನು 'ಮಹಾ ಪ್ರಳಯ'ದ ನಂತರವೇ ಎಣಿಕೆಗೆ ತೆಗೆದುಕೊಳ್ಳುತ್ತಾರೆ ಎಂದಿರುವರು. ಈ "ಮಹಾ ಪ್ರಳಯ"ವನ್ನು ಜಲ್ ಪರ್ತಿಯವನ್ ಎಂದೂ ಕರೆಯುತ್ತಾರೆ. ಕಲಿಯುಗವು ಮಹಾ ಪ್ರಳಯದ ನಂತರ ಆರಂಭವಾಗುತ್ತದೆ ಎನ್ನುತ್ತಾರೆ.

● ಮೇಲಿನ ಅಂಕಿ ಅಂಶಗಳ ಆಧಾರದ ಮೇಲೆ ದುಬೋಸ್ ಮೊದಲಾದ ವಿದ್ವಾಂಸರು, ವೇದಗಳು ಸನಾತನ ಧರ್ಮದ ಅವತೀರ್ಣಗೊಂಡಿರುವ ದೈವಿಕ ಗ್ರಂಥಗಳಾಗಿರುವನೆಂದು, ಕ್ರೈಸ್ತರು ಪ್ರವಾದಿ ಯೇಸು ಕ್ರಿಸ್ತರ ಅನುಯಾಯಿಗಳಾಗಿರುವಂತೆ, ಮುಸ್ಲಿಮರು ಪ್ರವಾದಿ ಮುಹಮ್ಮದ್(ಸ)ರ ಅನುಯಾಯಿಗಳಾಗಿರುವಂತೆ, ಸನಾತನ ಧರ್ಮಿಯರು 'ಮನು'ವಿನ ಅನುಯಾಯಿಗಳಾಗಿರುವರು ಎನ್ನುತ್ತಾರೆ.

● "ಮಹಾ ಪ್ರವಾಹದ" ಕಥೆಯು ಜಗತ್ತಿನಾದ್ಯಂತ ಪ್ರಖ್ಯಾತವಾಗಿರುವುದು ಈ ವಾಸ್ತವಿಕತೆಯು, ಮಹಾ ಪ್ರವಾಹದ ನಂತರ ಮನು ಮತ್ತು ಅವರ ಸಂತತಿಯಿಂದ ಜಗತ್ತು ಪುನಃ ಜನಭರಿತವಾಯಿತು ಎಂಬುದನ್ನು ಸಾಬೀತುಗೊಳಿಸುತ್ತದೆ.

● ಮಹಾ ಪ್ರವಾಹದ ಘಟನೆಗೆ ಸಂಬಂಧಿಸಿದಂತೆ ಪ್ರಮುಖ ಅಂಶಗಳು ಹೀಗಿವೆ:

1. ಮಹಾ ಪ್ರವಾಹದ ಮೊದಲು ಜಗತ್ತು ಕೆಡಕುಗಳಿಂದ ತುಂಬಿತ್ತು.

2. ಮಹಾ ಪ್ರವಾಹವು ಸೃಷ್ಟಿಕರ್ತನ ವತಿಯಿಂದ ಘೋರ ಶಿಕ್ಷೆಯಾಗಿದ್ದಿತು. ಸೃಷ್ಟಿಕರ್ತನನ್ನು ನಿರಾಕರಿಸುವವರಿಗೆ ಇದು ಎಚ್ಚರಿಕೆಯಾಗಿತ್ತು.

3. ಮಹಾ ಪ್ರವಾಹದಲ್ಲಿ ಕೇವಲ ಮನು ಮತ್ತು ಆತನ ಕುಟುಂಬದವರು ರಕ್ಷಿಸಲ್ಪಟ್ಟರು.

4. ಪ್ರಾಣಿ ವರ್ಗದ ಒಂದೊಂದು ಜೊತೆಗಲನ್ನು ಹಡಗಿನಲ್ಲಿ ಇರಿಸಲಾಗಿತ್ತು.

5. ಗಿಡಮರಗಳ ಬೀದಿಗಳನ್ನೂ ಸಂರಕ್ಷಿಸಲಾಗಿತ್ತು.

6. ಮನುವಿನ ಹಡಗು ಬೆಟ್ಟದ ಮೇಲೆ ನಿಲ್ಲಿಸಲಾಗಿತ್ತು.

7. ಮಹಾ ಪ್ರವಾಹದ ನಂತರ ಜಗತ್ತು ಮನು ಮತ್ತು ಅವರ ಸಂತತಿಯಿಂದ ಪುನಃ ಜನಭರಿತವಾಯಿತು.

8. ಮಹಾ ಪ್ರವಾಹದ ದಂತ ಕತೆ ಇರಾಕ್, ಇರಾನ್, ಸಿರಿಯಾ, ಗ್ರೀಸ್, ಈಜಿಪ್ಟ್, ಇಟಲಿ, ಅಥುವೇನಿಯಾ, ರಷ್ಯಾ, ಚೈನಾ, ಭಾರತ, ಕೆನಡಾ (ಕ್ರೀ ಬುಡಕಟ್ಟು), ಅಮೇರಿಕಾ (ಚೆರೋಕಿ ಬುಡಕಟ್ಟು), ಮೆಕ್ಸಿಕೋ (ಪಾಪಗೋ ಮತ್ತು ಅಝ್ಟೆಕ್ ಬುಡಕಟ್ಟುಗಳು), ಪಶು, ಲೀವರ್ಡ್ ದ್ವೀಪಗಳು, ಫಿಜಿ ದ್ವೀಪಗಳು, ಹವಾಯಿ, ಇತರೆ ಐವತ್ತಕ್ಕಿಂತಲೂ ಹೆಚ್ಚಿನ ದೇಶಗಳಲ್ಲಿ ಜನನಿತವಾಗಿದೆ.

● ಪವಿತ್ರ ಕುರ್‌ಆನ್‌ನಲ್ಲಿ ಮಹಾ ಪ್ರವಾಹದ ವಿವರಣೆ:

"ನೂಹ್‌ರಿಗೆ (ದೀಗೆ) ವಹ್ಯ್ ಮಾಡಲಾಯಿತು. 'ನಿಮ್ಮ ಜನಾಂಗದಲ್ಲಿ ವಿಶ್ವಾಸ ಸ್ವೀಕರಿಸುವವರೆಲ್ಲ ಸ್ವೀಕರಿಸಿಯಾಯಿತು. ಇನ್ನಾರೂ ಸ್ವೀಕರಿಸುವವರಿಲ್ಲ.

..... ನಮ್ಮ ಮೇಲ್ನೋಟದಲ್ಲಿ ನ್ನಮ ಮಾರ್ಗದರ್ಶನದ ಪ್ರಕಾರ ಒಂದು ನಾವೆಯನ್ನು ಕಟ್ಟಲಾರಂಭಿಸಿರಿ... ಕೊನೆಗೊಮ್ಮೆ ನ್ನಮ ಆಜ್ಞೆ ಬಂದಿತು ಮತ್ತು ಆ ಭಟ್ಟಿಯು ಉಕ್ಕೇರಿತು. ಆಗ ನಾವು (ಹೀಗೆ) ಹೇಳಿದೆವು: 'ಪ್ರತಿ ಒಂದು ಜಾತಿಯ ಪ್ರಾಣಿಗಳು ಒಂದೊಂದು ಜೋಡಿಯನ್ನು ನಾವೆಯಲ್ಲಿಟ್ಟುಕೊಳ್ಳಿರಿ. ಮೊದಲೇ ಗುರುತಿಸಲ್ಪಟ್ಟಿರುವವರ ಹೊರತು ನಿಮ್ಮ ಕುಟುಂಬದವರನ್ನೂ ಹತ್ತಿಸಿಕೊಳ್ಳಿರಿ, ವಿಶ್ವಾಸವಿರಿಸಿಕೊಂಡವರನ್ನೂ ಕುಳ್ಳಿರಿಸಿಕೊಳ್ಳಿರಿ. ನೂಹರ ಮೇಲೆ ವಿಶ್ವಾಸವಿಟ್ಟಿದ್ದವರು ಕೆಲವೇ ಮಂದಿ ಇದ್ದರು...' (ಪವಿತ್ರ ಕುರ್‌ಆನ್: 11:36–41)

● ಬೈಬಲ್ ಹಾಗೂ ಕುರ್‌ಆನ್‌ನಲ್ಲಿ ವಿವರಿಸಿರುವಂತೆ, ಹ. ನೂಹ್(ಅ) ಬಹುದೀರ್ಘ ಕಾಲದ ವರೆಗೆ ಜನರಿಗೆ ಜೀವ ಸಂದೇಶವನ್ನು ನೀಡಿದರು. ಜನರಿಗೆ ವಿವಿಧ ರೀತಿಯಲ್ಲಿ ಮನವರಿಕೆ ಮಾಡಲು ಯತ್ನಿಸಿದರೂ ಜನರು ಸೃಷ್ಟಿಕರ್ತನನ್ನು ನಿರಾಕರಿಸುತ್ತಲೇ ಇರುವುದನ್ನು ನೋಡಿ, ಇನ್ನು ಏನೇ ಪ್ರಯತ್ನಿಸಿದರೂ ಜನರು ಸೃಷ್ಟಿಕರ್ತನ ಆಜ್ಞಾಪಾಲನೆ ಮಾಡುವುದಿಲ್ಲವೆಂಬುದನ್ನು ಮನಗೊಂಡು ಅಲ್ಲಾಹನಲ್ಲಿ ಈ ರೀತಿ ಪ್ರಾರ್ಥಿಸಿದರು.

● "ನಾನು ಸೋತೆ. ಇನ್ನು ನೀನು ಇವರ ಮೇಲೆ ಪ್ರತೀಕಾರ ತೀರಿಸು." (ಪವಿತ್ರ ಕುರ್‌ಆನ್, 54:10)

● ದೈವಿಕ ಶಿಕ್ಷೆಯು ಮಹಾ ಪ್ರವಾಹದ ರೂಪದಲ್ಲಿ ಬಂತು. ಪ್ರವಾಹವು ಭೂಮಿಯ ಮೇಲಿರುವ ಪ್ರತಿಯೊಂದು ವಸ್ತುವನ್ನು ಮುಳುಗಿಸಿತು. ಧಾರಾಕಾರ ಮಳೆಯು ನಿರಂತರ ಸುಮಾರು 150 ದಿನಗಳ ವರೆಗೆ ಸುರಿಯಿತು. ಹಡಗು ಒಂದು ಬೆಟ್ಟದ ಮೇಲೆ ನಿಲ್ಲಿಸಲ್ಪಟ್ಟಿತ್ತು. ಈ ಬೆಟ್ಟವನ್ನು ಜುದಿ (ಅರಾರತ್) ಎನ್ನುತ್ತಾರೆ. ಪ್ರವಾಹದ ನೀರು ಇಳಿದ ನಂತರ, ನೂಹ್ ಮತ್ತು ಆತನ ಕುಟುಂಬದವರು ಹಡಗಿನಿಂದ ಕೆಳಗಿಳಿದರು. ನೂಹ್ ಮತ್ತು ಅವರ ಮೂವರ ಪುತ್ರರಿಂದ ಭೂಮಿ ಪುನಃ ಜನಭರಿತವಾಯಿತು. ಬೈಬಲ್(ಜೆನೆಸಿಸ್ 6–8)ಗಳಲ್ಲಿಯೂ ಇಂತಹದೇ ಇವರಣೆಯು ದೊರಕುತ್ತದೆ.

● ಹ. ನೂಹ್(ಅ) (ಮನು)ರ ಹಡಗಿನ ಗುರುತು ಇಂದಿಗೂ ಇದೆ. ಅರಾರತ್ ಬೆಟ್ಟದ ಮೇಲೆ ಹಡಗಿನ ಗುರುತು ಕಾಣಸಿಗುತ್ತದೆ. ತುರ್ಕಿಸ್ತಾನ ಮತ್ತು ಇರಾನ್ ದೇಶಗಳ ಸರಹದ್ದಿನಲ್ಲಿ ಈ ಪ್ರವೇಶವಿದೆ. ಹಡಗಿನ ಗುರುತನ್ನು "ಯೂಟ್ಯೂಬ್"ನಲ್ಲಿಯೂ ನೋಡಬಹುದು. 'ಆರ್ಕ್ ಆಫ್ ನೋಹ' ಮತ್ತು 'ಈಟಠಠಜ ಠಜಿ ಐಜಠಜಟಜ' ನೋಡಿದಾಗ ನೂಹ್(ಅ)ರವರ ಹಡಗಿನ ಮತ್ತು 'ಮಹಾ ಪ್ರವಾಹ'ದ ವಿವರಗಳು ದೊರಕುತ್ತವೆ.

● ಜಗತ್ತಿನ ಹೆಚ್ಚಿನ ಧರ್ಮಗಳು 'ಮಹಾ ಪ್ರವಾಹ'ದ ಘಟನೆಯನ್ನು ದೃಢೀಕರಿಸುತ್ತವೆ. ಈ ಪ್ರವಾಹದಲ್ಲಿ ಹ. ನೂಹ್(ಅ) (ಮನು) ಮತ್ತು ಅವರ ಕುಟುಂಬದ ಸದಸ್ಯರು ಮಾತ್ರ ಬದುಕುಳಿದರೆಂದೂ, ಅವರ ಸಂತತಿಯಿಂದಲೇ ಈ ಜಗತ್ತು ಪುನಃ ಜನಭರಿತವಾಯಿತೆಂದೂ ತಿಳಿಸುತ್ತವೆ. ಈ ಪ್ರವಾಹವು ಸುಮಾರು 5000 ವರ್ಷಗಳ ಹಿಂದೆ ಬಂದಿರಬಹುದು. 5000 ವರ್ಷಗಳ ಹಿಂದೆ ನಮ್ಮ ಪಿತಾಮಹಾ ಹ. ನೂಹ್(ಅ) ಅಥವಾ ಮನು ಆಗಿದ್ದರು. ಆದುದರಿಂದ ನಾವೆಲ್ಲರೂ ಒಂದೇ ಕುಟುಂಬದ ಸದಸ್ಯರೂ, ಏಕೋದರ ಸಹೋದರರೂ ಆಗಿರುವೆವು. ಈ ಕಾರಣದಿಂದ ನಾವೆಲ್ಲರೂ ಪ್ರೀತಿ, ವಿಶ್ವಾಸದಿಂದ ಪರಸ್ಪರೊಂದಿಗೆ ನಡೆದುಕೊಳ್ಳಬೇಕಿದೆ. ಅಥರ್ವ ವೇದವು ಈ ರೀತಿ ಹೇಳುತ್ತದೆ.

"ಓ ಮನುಷ್ಯನೇ! ಸಹೋದರ ಮತ್ತು

ಸಹೋದರಿಯರ ನಡುವೆ ದ್ವೇಷವಿರಬಾರದು. ನಿಮ್ಮ ನುಡಿಗಳು ರಚನಾತ್ಮಕವಾಗಿರಬೇಕು ಮತ್ತು ನಿಮ್ಮ ಆಲೋಚನೆಗಳು ಸೌಹಾರ್ದಯುತವಾಗಿರಬೇಕು." (ಅಥರ್ವವೇದ 3: 30:3)

- ಟಿಪ್ಪಣಿ: ಸಂಕ್ಷಿಪ್ತವಾಗಿ, ಪವಿತ್ರ ವೇದಗಳಲ್ಲಿ ಪ್ರವಾದಿಗಳನ್ನು "ಮನು" ಹೆಸರಿನಿಂದ ಅಭಿಸಂಬೋಧಿಸಲಾಗಿದೆ. ವೇದಗಳಲ್ಲಿ 14 ವ್ಯಕ್ತಿಗಳನ್ನು "ಮನು"ವೆಂದು ಕರೆಯಲಾಗಿದೆ. ಮಹಾ ಪ್ರಳಯದಲ್ಲಿ ಸಂರಕ್ಷಿಸಲ್ಪಟ್ಟ 'ಮನು' ಏಳನೇಯ ಮನುಯಾಗಿರುವರು. ಹ. ಆದಮ್(ಅ)ರನ್ನೂ ಸಹ ಋಗ್ವೇದದಲ್ಲಿ "ಮನು" ಎಂದು ಅಭಿಸಂಬೋಧಿಸಲಾಗಿದೆ.

ಅಧ್ಯಾಯ– 6

# ಮಕ್ಕಃ ಅಥವಾ ಮಕ್ತೇಶ್ವರ

## 6. Makkah or Makteshwar

ಆದಿಯಲ್ಲಿ ಪವಿತ್ರ ಕಅಬಾವನ್ನು ದೇವಚರರು ನಿರ್ಮಿಸಿದ್ದರು. ಮಹಾ ಪ್ರವಾಹದಲ್ಲಿ (ನೂಹ್‌ರವರ ಕಾಲದಲ್ಲಿ) ಪವಿತ್ರ ಕಅಬಾ ಶಿಥಿಲಗೊಂಡು ಕುಸಿದಿತು. ಮಕ್ಕಾ ಪಟ್ಟಣವೂ ಜನರಿಂದ ಬರಿದಾಯಿತು. ಹ. ಇಬ್ರಾಹೀಮ್(ಅ) (ಬ್ರಹ್ಮ) ಮತ್ತು ಹ. ಇಸ್ಮಾಯೀಲ್(ಅ) (ಅಥರ್ವ) ಪವಿತ್ರ ಕಅಬಾವನ್ನು ಅದರ ಮೂಲ ಬುನಾದಿಯ ಮೇಲೆ ಮರು ನಿರ್ಮಿಸಿದರು. ಅಥರ್ವವೇದದಲ್ಲಿ ಪವಿತ್ರ ಕಅಬಾವನ್ನು ವರ್ಣಿಸುವ ಮತ್ತು ಪ್ರಶಂಸಿಸುವ ಅನೇಕ ಶ್ಲೋಕಗಳಿವೆ. ಉದಾಹರಣೆಗೆ


ऊर्ध्वो नु सृष्टा ३ स्तिर्यंङः नु सृष्टा ३ः सर्वादिशः पुरूष आ वभूवाँ३।

पूरं यो ब्रह्मराो वेद यस्याः पुरूष उच्यते ।।२८।।

"ಅದನ್ನು ಎತ್ತರವಾಗಿ ಕಟ್ಟಿರಲಿ, ಅದರ ಗೋಡೆಗಳು ನೇರವಾಗಿ ಇರಲಿ ಅಥವಾ ಇಲ್ಲದಿರಲಿ, ಅದರ ಪ್ರತಿಯೊಂದು ಮೂಲೆಯಲ್ಲೂ ಸೃಷ್ಟಿಕರ್ತನು ಕಂಡು ಬರುವನು. ಸೃಷ್ಟಿಕರ್ತನ ಭವನವನ್ನು ತಿಳಿದವನು ಇದನ್ನು ಬಲ್ಲನು. (ಸೃಷ್ಟಿಕರ್ತನ ಭವನವನ್ನು ಸಮೀಪಿಸುತ್ತಲೇ) ಸೃಷ್ಟಿಕರ್ತನ ನೆನಪು ಬರುತ್ತದೆ. (ಅಥರ್ವವೇದ: 10–228)

ಟಿಪ್ಪಣಿ: ಪವಿತ್ರ ಕಅಬಾದ ಕಟ್ಟಡವು ಸಣ್ಣ ಕೋಣೆಯ ಆಕಾರದಲ್ಲಿದೆ. ಆದರೆ ಈ ಕಟ್ಟಡವನ್ನು ಯಥೋಚಿತ ಅಳತೆಗಳ ಅನುಸಾರ ನಿರ್ಮಿಸಲಾಗಿರುವುದಿಲ್ಲ. ಎಲ್ಲಾ

**Cross-section of holy Kaaba.**
Copied from: http://www.al-qiyamah.org



ಅಳತೆಗಳು ವಿಭಿನ್ನವಾಗಿವೆ. ಕೆಳಗೆ ನೀಡಿರುವ ಕಅಬಾದ ಚಿತ್ರದಲ್ಲಿ ಇದನ್ನು ಗಮನಿಸಬಹುದಾಗಿದೆ. ಆಗಾಗ್ಯೂ ಅದರ ಆಧ್ಯಾತ್ಮಿಕ ಆತ ಕೋಣೆಯಿಂದ ಜಗತ್ತಿನಾದ್ಯಂತ ಪ್ರತಿನಿತ್ಯ ಲಕ್ಷೋಪಲಕ್ಷ ಜನರು ಮಕ್ಕಾ ಪಟ್ಟಣಕ್ಕೆ ಧಾವಿಸುತ್ತಾರೆ.

- यो वै तां ब्रह्मराणो वेदामृतेनावृतां पुरम।
  तस्मै ब्रह्म च ब्राह्माश्च चक्षुः प्रारा प्रजां ददुः ।।२६।।

"ಈ ಪವಿತ್ರ ಸೃಷ್ಟಿಕರ್ತನ ಭವನವು ಚೈತನ್ಯದಿಂದ ತುಂಬಿದ್ದು, ಸೃಷ್ಟಿಕರ್ತನು ಮತ್ತು ಬ್ರಹ್ಮ (ಸೃಷ್ಟಿಕರ್ತನ ಪ್ರವಾದಿ) ಅಂತರ್ ದೃಷ್ಟಿಯನ್ನು ಚೇತನವನ್ನು ಮತ್ತು ಸಂತಾನವನ್ನು ನೀಡುತ್ತಾನೆಂಬುದನ್ನು ತಿಳಿದಿರಬೇಕು. (ಅಥರ್ವವೇದ: 10–2–29)

ಟಿಪ್ಪಣಿ: ಯಾರು ಪವಿತ್ರ ಕಅಬಾದ ಸಂದರ್ಶನವನ್ನು ಮಾಡುತ್ತಾನೋ, ಆತನಿಗೆ ಅಂತರ್‌ದೃಷ್ಟಿ, ಚೇತವನ್ನು, ಸಮೃದ್ಧಿಯನ್ನು ಸಂತಾನದ ಭಾಗ್ಯವನ್ನು ನೀಡಲಾಗುತ್ತದೆ.

- अष्टाचक्रा नवद्वारा देवानां पूरयोध्या।
  तस्यां हिररायः कोशः स्वर्गो ज्योतिषवृतः ।।३१।।

"ದೇವಚರರ ಈ ಬೀಡಿನಲ್ಲಿ ಎಂಟು ವೃತ್ತಗಳು ಮತ್ತು ಒಂಭತ್ತು ದ್ವಾರಗಳಿವೆ. ಈ ದೇವಭವನವನ್ನು ಯಾರಿಗೂ ಹತ್ತಿಕ್ಕಲು ಸಾಧ್ಯವಿಲ್ಲ. ಈ ಭವನವು ಶಾಶ್ವತವಾಗಿ ಚೈತನ್ಯದಿಂದ ತುಂಬಿದೆ. ಭವನವು ದೈವಿಕ ಬೆಳಕಿನಿಂದ ಕಂಗೊಳಿಸುತ್ತಿದೆ. (ಅಥರ್ವವೇದ: 10–2–31)


ಟಿಪ್ಪಣಿ: ಪವಿತ್ರ ಕಅಬಾದ ಕಟ್ಟಡದ ಸುತ್ತವಿರುವ ಸಂಕೀರ್ಣದಲ್ಲಿ 9 ದ್ವಾರಗಳಿವೆ. 1. ಬಾಬ್–ಯೆ–ಇಬ್ರಾಹೀಮ್ 2. ಬಾಬ್ ಅಲ್‌ವೀದಾ 3. ಬಾಬ್–ಯೆ–ಸಫಾ 4. ಬಾಬ್–ಯೆ–ಅಲಿ 5. ಬಾಬ್–ಯೆ–ಅಬ್ಬಾಸ್ 6. ಬಾಬ್–ಯೆ–ನಬಿ 7. ಬಾಬ್ ಯೆ ಸಲಾಮ್ 8. ಬಾಬ್ ಯೆ ಝಿಯಾದ್ 9. ಬಾಬ್ ಯೆ ಹರಮ್. (ಅರಬಿ ಭಾಷೆಯಲ್ಲಿ ಬಾಬ್‌ನ ಅರ್ಥ ದ್ವಾರವಾಗಿದೆ)

ಕಅಬಾ ಕಟ್ಟಡವು ಸುತ್ತಲೂ 8 ಬೆಟ್ಟಗಳಿಂದ ರಕ್ಷಿಸಲ್ಪಟ್ಟಿದೆ. ಸ್ಲೋಕಗಳಲ್ಲಿ ಈ ಬೆಟ್ಟಗಳನ್ನು "ವೃತ್ತ"ಗಳೆಂದು ಕರೆಯಲಾಗಿದೆ. ಈ ಎಂಟು ಬೆಟ್ಟಗಳು ಈ ರೀತಿ ಇವೆ.

1. ಜಬಲ್ ಯೆ ಖಲೀಜ್ 2. ಜಬಲ್ ಯೆ ಖೀಖಾನ್ 3) ಜಬಲ್ ಯೆ ಹಿಂದಿ 4) ಜಬಲ್ ಯೆ ಲಾಲ 5) ಜಬಲ್ ಯೆ ಕದಾ 6) ಜಬಲ್ ಯೆ ಅಬು ಹದೀದ 7) ಜಬಲ್ ಯೆ ಅಬಿ ಖಬೀಸ್ 8. ಜಬಲ್ ಯೆ ಉಮರ್.

- तस्मिन हिररायये कोशे त्र यरे त्रिप्रतिष्ठते।
  तस्मिन यद यक्षमात्मन्वत तद वै ब्रह्मविदो विदुः।।३२।।

ಪ್ರಶಂಸೆಗೆ ಅರ್ಹವಾಗಿರುವ ಸರ್ವೋಚ್ಛ ಚೇತನವು ಭವನದಲ್ಲಿ ಇರುತ್ತದೆ. ಈ ಭವನವನ್ನು ಮೂರು ಕಂಭಗಳು ಮತ್ತು ಮೂರು ಮರದ ತೊಲೆಗಳ ಮೇಲೆ ನಿರ್ಮಿಸಲಾಗಿದೆ ಮತ್ತು ಇದು ಶಾಶ್ವತ ಜೀವನದ ಕೇಂದ್ರವಾಗಿರುವುದು. ಸೃಷ್ಟಿಕರ್ತನ ದಾಸರು ಇದನ್ನು ಚೆನ್ನಾಗಿ ಅರಿತಿರುವರು. (ಅಥರ್ವವೇದ 10–2–32)


*Cross-section of Kaaba*

**ಟಿಪ್ಪಣಿ:** ಮೇಲಿನ ಚಿತ್ರವು ಪವಿತ್ರ ಕಅಬಾದ ಒಳಭಾಗವನ್ನು ತೋರಿಸುತ್ತದೆ. ಈ ಚಿತ್ರದಲ್ಲಿ ಕಅಬಾದ ಮೂರು ಕಂಭಗಳನ್ನು ಮೂರು ಮರದ ತೊಲೆಗಳನ್ನೂ ಕಾಣಬಹುದು. ಕಅಬಾದ ಹೊರ ಮತ್ತು ಒಳಭಾಗದ

ಚಿತ್ರಗಳನ್ನು ಇಂಟರ್‌ನೆಟ್ ಮತ್ತು ಯುಟ್ಯೂಬ್‌ನಲ್ಲಿಯೂ ಕಾಣಬಹುದು.

- प्रभ्राजमानां हरिरीं यशसा संपरीवृताम।
  पुरं हिररायर्यी ब्रह्मा विवेशापराजिताम ।।३३।।

"ಬ್ರಹ್ಮ (ಇಬ್ರಾಹೀಮ್) ಈ ಭವನದಲ್ಲಿ ತಂಗಿದ್ದರು. ಈ ಭವನವು ದಿವ್ಯ ಬೆಳಕಿನಿಂದ ಪ್ರಕಾಶಿಸುತ್ತಿದೆ ಮತ್ತು ದೈವಿಕ ಅನುಗ್ರಹಗಳಿಂದ ಹೊದಿಸಲ್ಪಟ್ಟಿದೆ. ಈ ಸ್ಥಳವು ಜನರಿಗೆ (ಆಧ್ಯಾತ್ಮಿಕ) ಚೈತನ್ಯ ನೀಡುತ್ತದೆ ಮತ್ತು ಈ ಸ್ಥಳವನ್ನು ಯಾರಿಗೂ ಹತ್ತಿಕ್ಕಲು ಸಾಧ್ಯವಿಲ್ಲ. (ಅಥರ್ವವೇದ 10–2–33)

"ಓ ಪ್ರಾರ್ಥಿಸುವವನೇ! ದೂರ ದೇಶದಲ್ಲಿ ಸಮುದ್ರ ತೀರದ ಸನಿಹದಲ್ಲಿ ದರೋಕ ಬನವಿದೆ. ಇದನ್ನು ಮನುಷ್ಯರಾರೂ ನಿರ್ಮಿಸಿರುವುದಿಲ್ಲ. ಇದರಲ್ಲಿ ಪ್ರಾರ್ಥಿಸುವುದರಿಂದ ಸೃಷ್ಟಿಕರ್ತನ ಅನುಗ್ರಹದಿಂದ ಸ್ವರ್ಗವನ್ನು ಪ್ರವೇಶಿಸುವರು." (ಋಗ್ವೇದ 10–155–3)

ಟಿಪ್ಪಣಿ: ಮಕ್ಕಾ ಪಟ್ಟಣವು ಭಾರತದಿಂದ ದೂರದಲ್ಲಿ ಸಮುದ್ರ ತೀರದಲ್ಲಿದೆ.

**ಸನಾತನ ಧರ್ಮ ಗ್ರಂಥಗಳಲ್ಲಿ ಪವಿತ್ರ ಕಅಬಾದ ಉಲ್ಲೇಖ**

ಸನಾತನ ಧರ್ಮ ಗ್ರಂಥಗಳಲ್ಲಿ ಪವಿತ್ರ ಕಅಬಾವನ್ನು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ.

**ಇಲೈಯಾಸ್ಪದ್:** ಇಲ್, ಇಲಾ, ಇಲಿಯ, ಇಲ್ಲಯು, ಅಲ್ಲಾಹ್ ಮೊದಲಾದ ಹೆಸರುಗಳಿಂದ ಸೃಷ್ಟಿಕರ್ತನನ್ನು ವಿವಿಧ ಧರ್ಮಗಳಲ್ಲಿ ಕರೆಯಲಾಗಿದೆ. 'ಪದ್'ನ ಅರ್ಥ ಸ್ಥಳ. 'ಇಲ್ಲೆಯಾಸ್ಪದ್' ಪದದ ಅರ್ಥ ಸೃಷ್ಟಿಕರ್ತನ ಸ್ಥಳವೆಂಬುದಾಗಿದೆ.

**ಮಕ್ಕೇಶ್ವರ:** 'ಮಕ್'ನ ಅರ್ಥ ಮಕ್ಕಾ ಪಟ್ಟಣ. ಈಶ್ವರವೆಂದರೆ ಸೃಷ್ಟಿಕರ್ತ. ಮಕ್ಕೇಶ್ವರ ಶಬ್ದದ ಅರ್ಥ ಸೃಷ್ಟಿಕರ್ತನ ಸ್ಥಳವಿರುವ ಪಟ್ಟಣ ಅಥವಾ 'ಸೃಷ್ಟಿಕರ್ತನ ಮಕ್ಕಾ'. ಸರ್.ಎಮ್. ಮೊನಿಯರ್ ವಿಲಿಯಮ್‌ರವರ ಸಂಸ್ಕೃತ–ಇಂಗ್ಲೀಷ್ ನಿಘಂಟಿನ ಪ್ರಕಾರ, 'ಮಕ್'ವೆಂದರೆ ಮಕ್ಕಾ ಪಟ್ಟಣ ಅಥವಾ ಯಜ್ಞದ ಸ್ಥಳ.

**ನಭಿ ಕಮಲ್:** ಪ್ರವಾದಿ(ಸ)ರ ವಚನದ ಪ್ರಕಾರ ಆರಂಭದಲ್ಲಿ ಇಡಿಯ ಭೂಮಿಯು ನೀರಿನಿಂದ ಆವೃತ್ತವಾಗಿತ್ತು. ಪವಿತ್ರ ಕಅಬಾ ಇರುವ ಸ್ಥಳವು ಸಮುದ್ರದಿಂದ ಉದ್ಭವಿಸಿದ ಪ್ರಥಮ ಸ್ಥಳವಾಗಿತ್ತು. ನಂತರ ಎಲ್ಲಾ ದಿಕ್ಕುಗಳಲ್ಲಿಯೂ ಭೂಮಿಯು ಉದ್ಭವಿಸಲಾರಂಭಿಸಿತು.

ಪದ್ಮ ಪುರಾಣದಲ್ಲಿಯೂ ಆರಂಭದಲ್ಲಿ ಸಂಪೂರ್ಣ ಭೂಮಿಯು ನೀರಿನಿಂದ ಆವೃತ್ತವಾಗಿತ್ತೆಂದು ತಿಳಿಸಲಾಗಿದೆ. ಸಾಗರದಿಂದ ಮೊಟ್ಟ ಮಊದಲು ಕಮಲದ ಹೂವು ಉದ್ಭವಿಸಿತೆಂದು ಈ ಕಮಲದ ಹೂವು ಬೆಳೆದಂತೆ ಅದರ ಎಲೆಗಳು ಮತ್ತು ಹೂವಿನ ದಳಗಳು ಭೂಮಿಯ ವಿವಿಧ ಗಿಡ–ಮರಗಳ ರೂಪವನ್ನು ಪಡೆದವು. ಈ ಹೂವಿನ ಕೇಂದ್ರ ಸ್ಥಳವನ್ನು 'ನಭಿ ಕಮಲ್'ವೆನ್ನುತ್ತಾರೆ. ಇದುವೇ ಪವಿತ್ರ ಕಅಬಾದ ಸ್ಥಳ. ಈ ಸ್ಥಳವನ್ನು ಜಂಬೂ ದ್ವೀಪವೆಂದೂ ಹೇಳುತ್ತಾರೆ.

**ಆದಿ ಪುಷ್ಕರ್ ತೀರ್ಥ:** ಪದ್ಮ ಪುರಾಣವು ಅತ್ಯಂತ ಪ್ರಾಚೀನ ಹಾಗೂ ಅತ್ಯಂತ ಪವಿತ್ರ ಆರಾಧನಾಲಯ ಸ್ಥಳವು ಆದಿ ಪುಷ್ಕರ್ ತೀರ್ಥವಾಗಿದೆ ಎನ್ನುತ್ತದೆ. ಪದ್ಮ ಪುರಾಣವು ಆದಿಪುಷ್ಕರ್ ತೀರ್ಥದ ಪ್ರಾಮುಖ್ಯತೆಯನ್ನು ಹೀಗೆ ವರ್ಣಿಸುತ್ತದೆ.

**1**. ಯಾರು ಆದಿ ಪುಷ್ಕರ್‌ನಲ್ಲಿ ಸೇವೆ ಸಲ್ಲಿಸುತ್ತಾರೋ ಅವರ ಪಾಪಗಳೆಲ್ಲವೂ ತೊಳೆಯಲ್ಪಡುವವು.

**2**. ಯಾರು ಆದಿ ಪುಷ್ಕರ್ ಅನ್ನು ಸಂದರ್ಶಿಸುತ್ತಾನೋ, ಆತನು ಅಗಣಿತ ಅನುಗ್ರಹಗಳಿಂದ ಅನುಗ್ರಹೀತನಾಗುವನು.

**3**. ಆದಿ ಪುಷ್ಕರ್ ಅತ್ಯಂತ ಪ್ರಾಚೀನವಾದುದು. ಯಾರು ಇಲ್ಲಿ ಸ್ನಾನ ಮಾಡುವನೋ, ಆತನು ಮುಕ್ತಿ ಪಡೆಯುವನು. ಪವಿತ್ರ ಕಅಬಾದ ಬಳಿಯಲ್ಲಿಯೇ 'ಝಮ್ ಝಮ್' ನೀರಿನ ಝರಿ ಇರುವುದನ್ನು ನೆನಪಿಡಬೇಕು.

**ನಭ ಪ್ರಿಥಿವಿಯ:**

**इलायास्त्वा पदे वयं नाभा प्रथिव्या अधि।**


(ऋग्वेद ३.२९.४)

"ಸೃಷ್ಟಿಕರ್ತನ ಭವನವು ಭೂಮಿಯ ಕೇಂದ್ರದಲ್ಲಿದೆ." (ಋಗ್ವೇದ 3–29–4)

ಮೊಟ್ಟ ಮೊದಲು ಭೂಮಿಯ ಕೇಂದ್ರವು ಎಲ್ಲಿರುವುದೆಂಬುದನ್ನು ಪರಿಶೀಲಿಸೋಣ. ಭೂ ಮಧ್ಯ ರೇಖೆಯು ಭೂಮಿಯ ಕೇಂದ್ರದಿಂದ ಹಾದು ಹೋಗುತ್ತದೆ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಜನಸಂಖ್ಯೆಯು ಭೂ ಮಧ್ಯರೇಖೆಯ ಎರಡೂ ಕಡೆಗಳಲ್ಲಿ ಸಮವಾಗಿ ಇರದಿರುವುದನ್ನು ಕಾಣುತ್ತೇವೆ. ಜನಸಂಖ್ಯೆಯು ಉತ್ತರ ಭಾಗದಲ್ಲಿ 80ಡಿಗ್ರಿ ಅಕ್ಷಾಂಶ ರೇಖೆಯವರೆಗೆ ಕಡಿಮೆ ಇದೆ. ಆದರಿಂದ, ಜನಸಂಖ್ಯೆಯನ್ನು ಪರಿಗಣಿಸಿ ಭೂಮಿಯ ಮಧ್ಯ ಭಾಗವನ್ನು ಕಂಡು ಹಿಡಿಯಲು ಯತ್ನಿಸಿದಾಗ ಅದು ಭೂ ಮಧ್ಯರೇಖೆಯ ಉತ್ತರ ಭಾಗದಲ್ಲಿ 20 ಡಿಗ್ರಿ ಅಕ್ಷಾಂಶ ರೇಖೆಯಲ್ಲಿರುವುದು ಕಂಡು ಬರುತ್ತದೆ.

ಇದೇ ರೀತಿ 0 ಡಿಗ್ರಿ ರೇಖಾಂಶವು ಗ್ರೀನ್‌ವಿಚ್‌ನಿಂದ ಹಾದು ಹೋಗುತ್ತದೆ. ಆದರೆ 0 ಡಿಗ್ರಿ ರೇಖಾಂಶದ ಪೂರ್ವ ಭಾಗದಲ್ಲಿ ಪಶ್ಚಿಮ ಭಾಗಕ್ಕಿಂತ ಹೆಚ್ಚಿನ ಜನಸಂಖ್ಯೆವಿದೆ. ಆದುದರಿಂದ ಭೂಮಿಯ ಮಧ್ಯ ಭಾಗವನ್ನು ನಿರ್ಧರಿಸಲು ಪೂರ್ವಭಾಗವನ್ನು 40ಡಿಗ್ರಿ ರಷ್ಟು ಸ್ಥಳಾಂತರಿಸಬೇಕಿರುತ್ತದೆ.

ಮಕ್ಕಾ ಪಟ್ಟಣವು 21.5 ಡಿಗ್ರಿ ಭೂ ಮಧ್ಯ ರೇಖೆಯ ಉತ್ತರದಲ್ಲಿ 0 ಡಿಗ್ರಿ ರೇಖಾಂಶದ 39 ಡಿಗ್ರಿ ಪೂರ್ವದಲ್ಲಿ ಮತ್ತು ಭೂಮಿಯ ಜನಸಂಖ್ಯೆಯ ಮಧ್ಯ ಭಾಗದಲ್ಲಿ ಸರಿ ಸುಮಾರಾಗಿದೆ. ಈ ಕೆಳಗೆ ನೀಡಿರುವ ಚಿತ್ರದಲ್ಲಿ ಇದನ್ನು ಕಾಣಬಹುದು. ಈ ಕಾರಣದಿಂದಲೇ ಮಕ್ಕಾ ಪಟ್ಟಣವನ್ನು ಭೂಮಿಯ ಮಧ್ಯ ಒಂದು ಅಥವಾ 'ನಭ–ಪ್ರಿಥಿವಿಯ' ಎಂದು




ಕರೆಯುತ್ತಾರೆ.

**ಮಕ್ಕಾ ಪಟ್ಟಣಕ್ಕೆ ಸಂಬಂಧಿಸಿದಂತೆ ಬೈಬಲ್‌ನಲ್ಲಿ ಉಲ್ಲೇಖಿಸಲ್ಪಟ್ಟಿರುವ ಶ್ಲೋಕಗಳು:**

ಪವಿತ್ರ ಬೈಬಲ್‌ನ ಪ್ರಕಾರ, ಪ್ರವಾದಿ ಡೇವಿಡ್, ಫೆಲೆಸ್ತೀನ್ ವಿರುದ್ಧದ ಯುದ್ಧದಲ್ಲಿ ಯಶಸ್ಸು, ಜೆರೋಸಲೆಂ ಪ್ರದೇಶವನ್ನು ಸ್ವಾಧೀನ ಪಡಿಸಲು ಮತ್ತು ಸತ್ಯ ನಿಷೇಧಿಗಳನ್ನು ಅಲ್ಲಿಂದ ಹೊರ ಹಾಕುವಲ್ಲಿ ಯಶಸ್ಸನ್ನು ನೀಡುವಂತೆ ಸೃಷ್ಟಿಕರ್ತನನ್ನು ಪ್ರಾರ್ಥಿಸಿದರು. (ಕೀರ್ತನೆಗಳು: 83–84)

ಅವರ ಪ್ರಾರ್ಥನೆಯ ಕೆಲ ಸೂಕ್ತಗಳು ಈ ರೀತಿ ಇವೆ:

ಯೆಹೋವನ ಆಲಯದ ಅಂಗಳಗಳಲಿ

ಸೇರಬೇಕೆಂದು ನನ್ನ ಆತ್ಮವು ಹಂಬಲಿಸುತ್ತಾ ಕುಂದಿ ಹೋಗಿತ್ತು.

(ಆದರೆ ಈಗ) ಚೈತನ್ಯ ಸ್ವರೂಪನಾದ ದೇವರಿಗೆ

ನನ್ನ ತನುಮನಗಳಿಂದ ಹರ್ಷಧ್ವನಿ ಮಾಡುತ್ತೇನೆ.

ಆಹಾ, ಸೇನಾಧ್ವೀಶ್ವರನಾದ ಯೆಹೋವ ದೇವರೇ, ನನ್ನ ಅರಸನೇ,

ನಿನ್ನ ವೇದಿಗಳ ಸಮೀಪದಲ್ಲಿಯೇ

ಗುಬ್ಬಿಗೆ ಮನೆಯೂ, ಪಾರಿವಾಳಕ್ಕೆ ಮರಿ ಮಾಡುವ

ಗೂಡೂ ದೊರಕಿತಲ್ಲಾ!

ನಿನ್ನ ಮಂದಿರದಲ್ಲಿ ವಾಸಿಸುವವರು ಧನ್ಯರು

ಅವರು ನಿತ್ಯವೂ ನಿನ್ನನ್ನು ಕೀರ್ತಿಸುತ್ತಾ ಇರುತ್ತಾರೆ

ನಿನ್ನಲ್ಲಿ ಬಲವನ್ನು ಹೊಂದುವ ಮನುಷ್ಯರು ಧನ್ಯರು

ಅವರು ಯಾತ್ರಾಪರರಾಗಿ

ಕಣ್ಣೀರಿನ ತಗ್ಗನ್ನು ದಾಟುವಾಗ

ಅಲ್ಲಿ ಒರತೆಗಳನ್ನು ತೋಡಿ ನೀರಿನ ಸ್ಥಳವಾಗ

ಮಾಡುತ್ತಾರೆ.

ಮುಂಗಾರು ಮಳೆಯೂ ಅದನ್ನು ಸಮೃದ್ಧಿಗೊಳಿಸುತ್ತದೆ

ನಿನ್ನ ಆಲಯದ ಅಂಗಳಗಳಲ್ಲಿ ಕಳೆದ ಒಂದು ದಿನವು

ಬೇರೆ ಸಹಸ್ರ ದಿನಗಳಿಗಿಂತ ಉತ್ತಮವಾಗಿದೆ.

ವಿದ್ವಾಂಸರು, ಮೇಲಿನ ಸೂಕ್ತಗಳಲ್ಲಿ ಉಲ್ಲೇಖಿಸಿರುವ "ನಿನ್ನ ಮನೆ"ವೆಂದರೆ 'ಕಅಬಾ', ತೀರ್ಥಯಾತ್ರೆವೆಂದರೆ 'ಹಜ್ಜ್', ........ವೆಂದರೆ ಮಕ್ಕಾ ಪಟ್ಟಣ ಮತ್ತು 'ಚಿಲುಮೆ'ವೆಂದರೆ 'ರ್ಝುಮ್ ಝುಮ್'ವೆನ್ನುತ್ತಾರೆ.

**ಟಿಪ್ಪಣಿ:** ಪವಿತ್ರ ಕುರ್‌ಆನ್‌ನಲ್ಲಿ ಮಕ್ಕಾ ಪಟ್ಟಣವು ಐದು ಬಾರಿ ಉಲ್ಲೇಖಿಸಲ್ಪಟ್ಟಿದೆ.

"ನಿಶ್ಚಯವಾಗಿಯೂ ಮಾನವರಿಗಾಗಿ ನಿರ್ಮಿಸಲ್ಪಟ್ಟ ಪ್ರಥಮ ಆರಾಧನಾಲಯವು ಮಕ್ಕಃದಲ್ಲಿರುವುದೇ ಆಗಿರುತ್ತದೆ. ಅದಕ್ಕೆ ಶುಭ ಸಮೃದ್ಧಿಗಳನ್ನು ನೀಡಲಾಗಿತ್ತು ಮತ್ತು ಅದು ಸಮಗ್ರ ಲೋಕದವರಿಗೆ ಸನ್ಮಾರ್ಗ ದರ್ಶನದ ಕೇಂದ್ರವನ್ನಾಗಿ ಮಾಡಲ್ಪಟ್ಟಿತ್ತು." (ಪವಿತ್ರ ಕುರ್‌ಆನ್, 3:96)

**ಮಕ್ಕಾ ಪಟ್ಟಣದಲ್ಲಿ ಮುಸ್ಲಿಮೇತರರಿಗೆ ಪ್ರವೇಶ ನಿಷೇಧಕ್ಕೆ ಕಾರಣ:**

ಪ್ರಾಚೀನ ಕಾಲದಿಂದಲೂ, ಮಕ್ಕಾ ಪಟ್ಟಣದ ನಿವಾಸಿಗಳು ಸೃಷ್ಟಿಕರ್ತನಲ್ಲಿ ವಿಶ್ವಾಸವನ್ನಿಡುತ್ತಿದ್ದರು. ಇದಕ್ಕೆ ಕಾರಣವೇನೆಂದರೆ ಅವರು ಪ್ರವಾದಿ ಇಬ್ರಾಹೀಮ್(ಅ) ಮತ್ತು ಪ್ರವಾದಿ ಇಸ್ಮಾಯೀಲ್(ಅ)ರ ಅನುಯಾಯಿಗಳಾಗಿದ್ದರು (ಅಥರ್ವ). ಇವರು ಹಜ್ಜ್ ಕರ್ಮವನ್ನು ಸಹ ನೆರವೇರಿಸುತ್ತಿದ್ದರು. ಆದರೆ ಕಾಲ ಕಳೆದಂತೆ ಜನರು ಪ್ರವಾದಿಗಳ ಬೋಧನೆಯನ್ನು ಮರೆತರು. ಸೃಷ್ಟಿಕರ್ತನೊಂದಿಗೆ ಅನೇಕ ದೇವತೆಗಳನ್ನು ವಿಗ್ರಹಗಳನ್ನು ಪೂಜಿಸ ತೊಡಗಿದರು. ಉದಾಹರಣೆ: ಲೂತ್, ಮನಾತ್, ಉಝ್ಝು, ಹುಬಲ್ ಮೊದಲಾದ ವಿಗ್ರಹಗಳು ಪವಿತ್ರ ಕಅಬಾ ಭವನದೊಳಗೆ ಅನೇಕ ಮೂತಿಗಳನ್ನು ಇಡಲಾಗಿತ್ತು. ಈ ಮೂರ್ತಿಗಳು ತಮ್ಮ ಪರವಾಗಿ ಸೃಷ್ಟಿಕರ್ತನ ಬಳಿ ಶಿಫಾರಸ್ಸು ಮಾಡುವವುವೆಂದು ತಮ್ಮನ್ನು ಸಂಪನ್ನರನ್ನಾಗಿಸುವವೆಂದು, ರೋಗರುಜಿನಗಳಿಂದ, ಕಷ್ಟಗಳಿಂದ ಸಂರಕ್ಷಣೆ ನೀಡುವವೆಂದು ನಂಬಿದ್ದರು.

- ಜನರ ವರ್ತನೆ ಪ್ರವಾದಿ ಹ. ನೂಹ್(ಅ) (ಮನು), ಹ. ಇಬ್ರಾಹೀಮ್(ಅ), ಹ. ಮೂಸಾ(ಅ), ಹ. ಈಸಾ(ಅ)(ಯೇಸು ಕ್ರಿಸ್ತ)ರ ಬೋಧನೆಗಳಿಗೆ ವಿರುದ್ಧವಾಗಿತ್ತು. ಈ ಕಾರಣದಿಮದ ಸೃಷ್ಟಿಕರ್ತನು ಕುರ್‌ಆನಿನ ಸೂಕ್ತ,

"ಓ ಸತ್ಯವಿಶ್ವಾಸಿಗಳೇ, ಮುಶ್ರಿಕರು

ಅಶುದ್ಧರಾಗಿರುತ್ತಾರೆ. ಆದುದರಿಂದ ಈ ವರ್ಷದ ಬಳಿಕ ಅವರು ಮಸ್ಜಿದುಲ್ ಹರಾಮಿನ ಬಳಿ ಸುಳಿಯಬಾರದು." (ಪವಿತ್ರ ಕುರ್‌ಆನ್: 9:28)

ಅವತೀರ್ಣಗೊಳಿಸಿ ಮಕ್ಕಾ ಪಟ್ಟಣದಲ್ಲಿ ಸತ್ಯನಿಷೇಧಿಗಳ ಪ್ರವೇಶ ನಿಷೇಧಿಸಿದನು. ಸೃಷ್ಟಿಕರ್ತನಲ್ಲಿ ನಂಬಿಕೆವಿಟ್ಟಿದ್ದ, ಹಜ್ಜ್ ವಿಧೀಗಳನ್ನು ನೆರವೇರಿಸುತ್ತಿದ್ದ ಆದರೆ ಬಹುದೇವ ಆರಾಧಕರಾಗಿದ್ದ ಮಕ್ಕಾ ಪಟ್ಟಣದ ಮೂಲ ನಿವಾಸಿಗಳಿಗೂ ಈ ನಿಷೇಧವು ಅನ್ವಯಿಸುತ್ತಿತ್ತು. ಈ ಸೂಕ್ತದ ಅವತೀರ್ಣದ ನಂತರ ಬಹುದೇವ ಆರಾಧನೆ ಮಾಡುವ ಯಾವುದೇ ಧರ್ಮದ ವ್ಯಕ್ತಿಗೆ ಮಕ್ಕಾ ಪಟ್ಟಣದ ಪ್ರವೇಶವನ್ನು ನಿರ್ಬಂಧಿಸಲಾಯಿತು.

**ಪವಿತ್ರ ಕಅಬಾದ ಒಳಭಾಗದಲ್ಲೇನಿದೆ?**

ಮಸೀದಿಯಂತೆ ಪವಿತ್ರ ಕಅಬಾವನ್ನು ಮೂಲತಃ ಆರಾಧನೆ ನಿರ್ವಹಿಸಲು ನಿಮಿಸಲಾಗಿತ್ತು. ಕಅಬಾದ ಒಳಭಾಗವು ಬರಿದಾಗಿರುವುದು. 1950ರ ತನಕ ಆರಾಧನೆಗಾಗಿ ಜನ ಸಾಮಾನ್ಯರಿಗೂ ಕಅಬಾದ ಒಳಭಾಗದಲ್ಲಿ ಪರವೇಶ ಮುಕ್ತವಾಗಿತ್ತು. ಆದರೆ ಕಿಡಿಗೇಡಿಗಳು ವಿಧ್ವಂಸಕ ಕೃತ್ಯವನ್ನು ನಡೆಸಬಹುದೆಂಬ ಕಾರಣದ ಮೇರೆಗೆ ಅತ್ಯಂತ ಪ್ರಮುಖ ವ್ಯಕ್ತಿಗಳನ್ನು ಹೊರತುಪಡಿಸಿ ಇತರರ ಪ್ರವೇಶಕ್ಕೆ ತಡಂಗೊಡ್ಡಲಾಯಿತು. ಯೂಟ್ಯೂಬ್‌ನಲ್ಲಿ ಕಅಬಾದ ಒಳಭಾಗವನ್ನು ನೋಡಬಹುದು.

ಕಅಬಾದ ಕುರಿತು ಕೆಲ ವಾಸ್ತವಾಂಶಗಳು: ಕಅಬಾ ಭವನವು ಕೇವಲ ಆರಾಧನೆ ನಿರ್ವಹಿಸಲಿಕ್ಕಾಗಿ ನಿರ್ಮಾಣಗೊಂಡಿರುತ್ತದೆ. ಆರಂಭದಲ್ಲಿ ಮುಸ್ಲಿಮರು ಜೆರೋಸಲೇಮ್‌ನಲ್ಲಿರುವ ಅಲ್ ಅಕ್ಸಾ ಮಸೀದಿಯ ದಿಕ್ಕಿನತ್ತ ಮುಖ ಮಾಡಿ ನಮಾಝ್ ನಿರ್ವಹಿಸುತ್ತಿದ್ದರು. ನಂತರ ಮುಸ್ಲಿಮರಿಗೆ ಕಅಬಾದ ಕಡೆಗೆ ಮುಖ ಮಾಡಿ ನಮಾಝ್ ನಿರ್ವಹಿಸುವಂತೆ ಸೃಷ್ಟಿಕರ್ತನು ಆದೇಶಿಸಿದನು.

- "ಓ ಪೈಗಂಬರರೇ, ನಿಮ್ಮ ಮುಖ ಆಗಾಗ ಆಕಾಶದತ್ತ ತಿರುಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದೋ ನಾವು ನಿಮ್ಮನ್ನು ನೀವಿಷ್ಟಪಡುವ ಕಿಬ್ಲಾದ ಕಡೆಗೇ ತಿರುಗಿಸಿ ಬಿಡುತ್ತೇವೆ. 'ಮಸ್ಜಿದುಲ್ ಹರಾಮ್'ನ ದಿಕ್ಕಿಗೆ ಮುಖ ಮಾಡಿರಿ. ನೀವೆಲ್ಲಿದ್ದರೂ ಅದರ ಕಡೆಗೇ ಮುಖ ಮಾಡಿ ನಮಾಝ್ ಮಾಡುತ್ತಲಿರಿ" (ಪವಿತ್ರ ಕುರ್‌ಆನ್: 2: 144) ಎಂದು ಕಅಬಾ ಭವನವನ್ನು ಆರಾಧಿಸಲಾಗಿರುವುದಿಲ್ಲ. ಭೂಮಿಯ ಮೇಲೆ ಸೃಷ್ಟಿಕರ್ತನ ಆರಾಧನೆಗಾಗಿ ನಿರ್ಮಿಸಲಾಗಿರುವ ಅತ್ಯಂತ ಪವಿತ್ರ ಸ್ಥಳ ಕಅಬಾವಾಗಿರುವುದು.

ಅಧ್ಯಾಯ:7

# ಆವಗಮನ ಮತ್ತು ಮರಣೋತ್ತರ ಜೀವನ

## 7. Aawagawan & life after death.

● ಮರಣದ ನಂತರ ಓರ್ವ ವ್ಯಕ್ತಿಯು ಜನ್ಮ ಪಡೆಯುತ್ತಲೇ ಇದ್ದರೆ ಇದಕ್ಕೆ ಆವಗಮನ ವೆನ್ನುತ್ತಾರೆ. ಇದಕ್ಕೆ 'ಸಂಸಾರ' 'ಮರು ಜನ್ಮ' ಅಥವಾ ದೇಹಾಂತರ ಪ್ರಾಪ್ತಿ ಎಂದೂ ಹೇಳುತ್ತಾರೆ. ಮನುಷ್ಯ ಮಾಡಿರುವ ಕರ್ಮಗಳ ಅನುಸಾರ ಮರು ಜನ್ಮದಲ್ಲಿ ಅತನ ಸ್ಥಾನ–ಮಾನ ನಿರ್ಧರಿತವಾಗುತ್ತದೆ. ಜನ್ಮಗಳ ಚಕ್ರದಿಂದ ಹೊರ ಬರಲು ಅಥವಾ ಮುಕ್ತಿ, ಮೋಕ್ಷವನ್ನು ತಡೆಯಲು, ಮನುಷ್ಯನು ಜೀವನದಲ್ಲಿ ಧರ್ಮವನ್ನು ಪಾಲಿಸುತ್ತಾ, ಸತ್ಕರ್ಮಗಳನ್ನು ಮಾಡುವುದು ಅವಶ್ಯವಾಗಿರುತ್ತದೆ.

● ಮರಣೋತ್ತರ ಜೀವನಃ ಹುಟ್ಟಿದ ಪ್ರತಿಯೋರ್ವ ವ್ಯಕ್ತಿಗೆ ಸಾವು ಕಟ್ಟಿಟ್ಟಿರುವ ಬುತ್ತಿ. ಮರಣದ ನಂತರ ಆತನನ್ನು ಪುನಃ ಜೀವಂತ ಗೊಳಿಸಲಾಗುವುದು. (ಪರಲೋಕ ಅಥವಾ ಪಿತ್ರ ಲೋಕ) ಪರಲೋಕದಲ್ಲಿ ವ್ಯಕ್ತಿಗೆ ಭೌತಿಕ ಶರೀರವಿರುವುದಿಲ್ಲ. ಆತನ ಶರೀರವು ಆತ್ಮದಂತೆಯೇ ವಿರುತ್ತದೆ. ಪರಲೋಕದಲ್ಲಿ ಭೂಮಿಯ ಮೇಲೆ ವ್ಯಕ್ತಿಯು ಮಾಡಿರುವ ಕೃತ್ಯಗಳ ಸಂಕ್ಷಿಪ್ತ ಅವಲೋಕನ ಮಾಡಲಾಗುವುದು. ವ್ಯಕ್ತಿಯು ಒಳಿತಿನ ಕೆಲಸಗಳನ್ನು ಮಾಡಿದ್ದರೆ, ಪರಲೋಕದಲ್ಲಿ ಆತನು ಸ್ವರ್ಗದಲ್ಲಿ ಇರುವಂತೆಯೇ ಸುಖ–ಸಂತೋಷದಿಂದ ವಿರುವನು. ವಿಚಾರಣೆಯ ದಿನ ಆತನ ಕರ್ಮಗಳ ಸೂಕ್ಷ್ಮ ಪರಿಶೀಲನೆ ನಡೆಸಲಾಗುವುದು. ಇದಾದ ನಂತರ ಆತನಿಗೆ ಸ್ವರ್ಗದಲ್ಲಿ ಪ್ರವೇಶವನ್ನು ನೀಡಲಾಗುವುದು.

● ಇದಕ್ಕೆ ವ್ಯತಿರಿಕ್ತವಾಗಿ ವ್ಯಕ್ತಿಯು ಇಹಲೋಕದ ಜೀವನದಲ್ಲಿ ಕೆಡುಕಿನ ಜೀವನವನ್ನು ನಡೆಸಿದ್ದರೆ, ಮರಣದ ನಂತರ ಆತನ ಜೀವನದ ಸಂಕ್ಷಿಪ್ತ ವಿಚಾರಣೆಯ ನಂತರ, ಗೋರಿಯಲ್ಲಿಯೇ ನರಕ ಸದೃಶ ಶಿಕ್ಷೆಯನ್ನು ನೀಡಲಾಗುವುದು. ವಿಚಾರಣೆಯ ದಿನದಂದು, ಇಹಲೋಕದ ಕರ್ಮಗಳ ವಿವರಾತ್ಮಕ ವಿಚಾರಣೆಯ ನಂತರ, ಆತನನ್ನು ನರಕಕ್ಕೆ ತಳ್ಳಲಾಗುವುದು. ಸ್ವರ್ಗ ಅಥವಾ ನರಕದ ಜೀವನವು ಶಾಶ್ವತ ಸ್ವರೂಪದ್ದಾಗಿರುವುದು. ಪರಲೋಕದಲ್ಲಿ ವ್ಯಕ್ತಿಗೆ ತನ್ನ ತಪ್ಪನ್ನು ತಿದ್ದಿಕೊಳ್ಳಲು ಅಥವಾ ಸತ್ಕರ್ಮ ಮಾಡುವ ಅವಕಾಶ ನೀಡಲಾಗುವುದಿಲ್ಲ. ಮುಸ್ಲಿಮರು, ಯಹೂದಿಯರು ಮತ್ತು ಕ್ರೈಸ್ತರು ಮರಣೋತ್ತರ ಜೀವನದಲ್ಲಿ ವಿಶ್ವಾಸವನ್ನಿಡುತ್ತಾರೆ. ಸನಾತನ ಧರ್ಮ ಅಥವಾ ಹಿಂದೂ ಧರ್ಮದಲ್ಲಿ ಎರಡು ವಿಚಾರಧಾರೆಗಳಿವೆ. ಹೆಚ್ಚಿನ ಜನರು ಆವಗಮನದಲ್ಲಿ ನಂಬಿಕೆ ವಿಡುತ್ತಾರೆ ಮತ್ತು ಬೆರಳೆಣಿಕೆಯಷ್ಟು ಜನರು ಮಾತ್ರ ಮರಣೋತ್ತರ ಜೀವನದಲ್ಲಿ ವಿಸ್ವಾಸವಿಡುತ್ತಾರೆ. 'ಆವಗಮನ' ನಂಬಿಕೆಯು ವೇದಗಳ ಅವತೀರ್ಣದ ಕಾಲದಲ್ಲಿಯೋ ಚಾಲ್ತಿಯಲ್ಲಿತ್ತು. 'ಚಂದೋಗ್ಯಯ' ಈ ವಿಚಾರ ಧಾರೆಯನ್ನು ಪ್ರಬಲವಾಗಿ ಮಂಡಿಸಿ ಪ್ರಚಲಿತಗೊಳಿಸಿದರು. ಅವರ ಮರಣನಂತರ, ಅನೇಕ ಋಷಿ–ಮುನಿಗಳು ಇದನ್ನು ಜನಪ್ರಿಯ ಗೊಳಿಸಿದರು. ಹೀಗೆ ಕಾಲಾನು ಕಾಲದಲ್ಲಿ ಸಮಾಜವು ಈ ವಿಚಾರಧಾರೆಯನ್ನು ಸ್ವೀಕರಿಸಿತು.

● ಆವಗಮನ ವಿಚಾರಧಾರೆಯು ಜನಪ್ರಿಯವಾಗಲು ಸಮಾಜದಲ್ಲಿ ಬೇರೂರಿದ್ದ ಜಾತಿ ಪದ್ಧತಿಯೇ ಕಾರಣವೆಂದು ಕೆಲ ವಿದ್ವಾಂಸರು ವದಿಸುತ್ತಾರೆ. ಕೆಳಸ್ತರ ಜಾತಿಗೆ

ಸೇರಿದ ವ್ಯಕ್ತಿ ಅಸ್ಪಶ್ಯತೆ ಆಚರಣೆಯನ್ನು ಪ್ರಶ್ನಿಸಿದಾಗಲೆಲ್ಲಾ, ಬ್ರಾಹ್ಮಣರು ಆವಗಮನ ಸಿದ್ಧಾಂತವನ್ನು ಉಲ್ಲೇಖಿಸಿ ಸಮರ್ಥಿಸುತ್ತಿದ್ದರು.

● ವೇದಗಳು ಜಾತಿ ಪದ್ಧತಿಯನ್ನು ಮತ್ತು ಆವಗಮನ ಸಿದ್ಧಾಂತವನ್ನು ನಿರಾಕರಿಸುತ್ತವೆ. (ಋಗ್ವೇದ 1:92:10) ಯಾವ ವ್ಯಕ್ತಿಯೂ ಜನ್ಮದಿಂದ ಕೀಳು ಜಾತಿಗೆ ಸೇರುವುದಿಲ್ಲವೆಂದು ವೇದಗಳು ಹೇಳುತ್ತವೆ. ವ್ಯಕ್ತಿ ತನ್ನ ಕಸುಬಿನಿಂದ ಶೂದ್ರನಾಗುತ್ತಾನೆ. ಯಾವನೇ ವ್ಯಕ್ತಿಯು ತನ್ನ ಸಾಮರ್ಥ್ಯ ಅನುಸಾರ ವೃತ್ತಿಯನ್ನು ಬದಲಿಸಿ, ಅದರಂತೆ ಜಾತಿಯನ್ನು ಬದಲಿಸಬಹುದು. (ಋಗ್ವೇದ 10:90:12, ಅಥರ್ವ ವೇದ 19:6:6)

● ವೇದಗಳು ಎಂದೂ ಆವಗಮನವನ್ನು ಕಲಿಸಿರುವುದಿಲ್ಲ. ವೇದಗಳು 'ಪುರ್ನಜನ್ಮ' ಅಥವಾ 'ಪ್ರತಿಯ ಭಾವ' ಅನ್ನು ವಿವರಿಸಿವೆ. ಪ್ರತಿಮ ಭಾವದ ಅರ್ಥ ಮುಂದಿನ ಜನ್ಮ ಅಥವಾಪರಲೋಕದಲ್ಲಿ ಮರಣಾನಂತರದ ಜೀವನವಾಗಿರುವುದು. ಈ ಎರಡೂ ಪಾರಿಭಾಷಿಕಗಳಲ್ಲಿ ಪುರ್ನಜನ್ಮ ಕೇವಲ ಒಂದು ಬಾರಿ ಮಾತ್ರ ಸಂಭವಿಸಲಿದ್ದು ಅದು ಬಾರಿ ಬಾರಿಗೆ ಜರುಗುವ ಕ್ರಿಯೆಯಲ್ಲ. ಇಹಲೋಕದಲ್ಲಿ ಮರಣದ ನಂತರ ವ್ಯಕ್ತಿಯನ್ನು ಜೀವಂತಗೊಳಿಸಿದ ನಂತರ, ಆತನ ಕರ್ಮಾನುಸಾರ ಆತನನ್ನು ಸ್ವರ್ಗಕ್ಕೆ ಅಥವಾ ನರಕಕ್ಕೆ ಕಳುಹಿಸಲಾಗುವುದು.

● ಶ್ರೀ. ಸತ್ಯ ಪ್ರಕಾಶ ವಿದ್ಯಾಂಕರ, ಪಂಡಿತ ದುರ್ಗ ಶಂಕರ ಸತ್ಯಾರ್ಥಿ, ಡಾ। ಫರೀದಾ ಜೌಹಾನ್ ಮೊದಲಾದ ವಿದ್ವಾಂಸರು ಮರಣೋತ್ತರ ಜೀವನಕ್ಕೆ ಸಂಬಂಧಿಸಿದಂತೆ ಗ್ರಂಥಗಳಲ್ಲಿ ವಿವರಿಸಿರುವರು.

**ಮರಣೋತ್ತರ ಜೀವನಕ್ಕೆ ಸಂಬಂಧಿಸಿದಂತೆ ವೇದಗಳಲ್ಲಿರುವ ಶ್ಲೋಕಗಳು:**

"ಅತನು (ದೃಷ್ಟಿಕರ್ತನು) ಮಿಂಚಿನ ಹೊಡೆತದಿಂದ ಶಿಕ್ಷಿಸುವವನಾಗಿದ್ದು ಕೆಡುಕಿನ ಶಕ್ತಿಯನ್ನು ಕೊನೆಗಾಣಿಸುತ್ತಾನೆ ಮತ್ತು ಸಹಸ್ತಾರು ಮಾರಣಾಂತ್ತಿಕ ಮತ್ತು ಕ್ರೂರಿ (ಮಾನವರಿಗೆ) ವಿವೇಚನೆ ಮೂಡುವಂತೆ ಮಾಡುತ್ತಾನೆ. ಆತನು ನೂರಾರು (ಮನುಷ್ಯರಿಗೆ) ಕರುಣಾಮಯಿ ಶ್ರೇಷ್ಠ ಧಾವಣೆಯ (ಆಕಾಶ) ಒಡೆಯ. ಮರಣ ಹೊಂದಿರುವ ವ್ಯಕ್ತಿಗೆ ಐದು ಪುರ್ನಜನ್ಮ ನೀಡುವುದಿಲ್ಲ. ಓ (ಸನಾತನ ಧರ್ಮದ) ಅನುಯಾಯಿಗಳೇ, 'ಮಿಂಚಿ'ನ ಒಡೆಯನ ಅಜ್ಞಾನುವರ್ತಿಗಳಾಗಿರಿ." (ಋಗ್ವೇದ 1–100–12)

● "ಶೈತಾನಿನ ತರಹ ಪುರ್ನಜನ್ಮದ ವಿಷಯವನ್ನು ಪ್ರಾಚೀನ (ಜನರು) ಉಲ್ಲೇಖಿಸುತ್ತಾರೆ. ಪಾಷಿಷ್ಟರನ್ನು ನಿಗ್ರಹಿಸುವಂತೆ ಈ ವಿಚಾರ ಧಾರೆಯನ್ನು ಹರಡುವವರನ್ನು ನಿಗ್ರಹಿಸಿ. ಮರಣದ ದೇವತೆಯು ವಯಸ್ಸನ್ನು ನುಡುತ್ತಿರುವಳು." (ಮನುಷ್ಯನ ಕಾಲಾವಧಿಯು ದಿನದಿಂದ ದಿನಕ್ಕೆ ಮೊಟಕು ಗೊಳ್ಳುತ್ತಿದೆ.) (ಋಗ್ವೇದ 1–92–10)

● "ಮರಣೋತ್ತರ ಜೀವನವನ್ನು ನಿರಾಕರಿಸುವ ಮೂಲಕ ಮತ್ತು (ಧರ್ಮ ಗ್ರಂಥಗಳ) ಜ್ಞಾನ ಮತ್ತು ವಿವೇಕವನ್ನು ಅಸಂಬದ್ಧ ಮಾತುಗಳೆಂದು ತಿರಸ್ಕರಿಸುವ ಮೂಲಕ ಅವರು ನಮ್ಮ ಸೀಮಾ ರೇಖೆಯನ್ನು (ಸೃಷ್ಟಿಕರ್ತನ ವಿಧೇಯತೆ) ಉಲ್ಲಂಘಿಸುತ್ತಿರುವರು. (ಋಗ್ವೇದ 3–4–1)

● "ಸೃಷ್ಟಿಕರ್ತನ ಕೀರ್ತನೆ ಮಾಡುವವರಿಗೆ ಶಾಶ್ವತ ಜೀವನವನ್ನು ನೀಡಲಾಗುವ ಸುವಾರ್ತೆ ನೀಡಿರಿ." (ಋಗ್ವೇದ 1–44–6) ಟಿಪ್ಪಣಿ: ಮೇಲೆ ಉಲ್ಲೇಖಿಸಿರುವ ಎಲ್ಲಾ ಅನುವಾದಗಳು ಪಂಡಿತ ದುರ್ಗ ಶಂಕರ ಸತ್ಯಾರ್ಥರವರದಾಗಿದ್ದು 'ಶಾಂತಿ' ಪತ್ರಿಕೆಯಲ್ಲಿ ಜೂಲೈ 1969ರಂದು ಪ್ರಕಟಗೊಂಡಿವೆ.

● "ಓ ಅಗ್ನಿ! ಈ ಮೃತ ವ್ಯಕ್ತಿ (ಪರಲೋಕದಲ್ಲಿ) ಹೊಸ ಜೀವನವನ್ನು ಪಡೆಯುತ್ತಾನೆ." (ಋಗ್ವೇದ 10–16–5)

● ದೇವರಲ್ಲಿ ನಂಬಿಕೆ ಇರುವವರು ಸದಾ ಮರಣೋತ್ತರ ಜೀವನವನ್ನು ಸ್ಮರಿಸುತ್ತಾರೆ. ಜೊತೆಯಲ್ಲಿ ಅವರು ಒಳಿತಿನ ಕಾರ್ಯಗಳನ್ನು ನಿರಂತರ ಮಾಡುತ್ತಾರೆ. (ಅಥರ್ವ ವೇದ 122–3)

● ಮೇಲಿನ ಶ್ಲೋಕಗಳಿಂದ, ಮರಣದ ನಂತರ ಪರಲೋಕದಲ್ಲಿ ಜನರು ಶಾಶ್ವತ ಜೀವನವನ್ನು ಪಡೆಯಲಿರುವರು ಎಂಬುದು ವ್ಯಕ್ತವಾಗುತ್ತದೆ. ಮೋಕ್ಷ ಪಡೆಯುವವರೆಗೆ ಅವರು ಜೀವನ ಮತ್ತು ಮರಣಗಳ ಚಕ್ರದಲ್ಲಿ ಸಿಲುಕುವುದಿಲ್ಲ. ಮರಣದ ನಂತರ ಶಾಶ್ವತವಾಗಿ ಕರ್ಮಗಳ ಅನುಸಾರ ಮನುಷ್ಯನನ್ನು ಸ್ವರ್ಗದಲ್ಲಿ ಪ್ರವೇಶ ನೀಡುವ ಮೂಲಕ ಪುರಸ್ಕರಿಸಲಾಗುವುದು ಅಥವಾ ನರಕದಲ್ಲಿ ಹಾಕುವ ಮೂಲಕ ಶಿಕ್ಷಿಸಲಾಗುವುದು.

**ನರಕವನ್ನು ವಿವರಿಸುವ ಕ್ಷೋಕಗಳು:**

● "ಅವರ ದೇಹಗಳನ್ನು ಉರಿಯುತ್ತಿರುವ ಹಲಗೆಗಳಿಂದ ಸುಡಲಾಗುವುದು. ಅವರ ದೇಹದ ಮಾಂಸವನ್ನೇ ಅವರಿಗೆ ತಿನ್ನಿಡಲಾಗುವುದು. ದೇಹದ ಮಾಂಸವನ್ನು ಅವರೇ ಕತ್ತರಿಸುತ್ತಾರೆ ಅಥವಾ ಇತರರು ಕತ್ತರಿಸುತ್ತಾರೆ." (ಶ್ರೀಮದ್ ಭಗವತ್ ಪುರಾಣ 3–30–25)

● "ಅವರು ಎಚ್ಚರದಿಂದಿರುವ ಸ್ಥಿತಿಯಲ್ಲಿ ಮರಣ ಹೊಂದಿರುವ ಜಗತ್ತಿನ ನಾಯಿ ಮತ್ತು ರಣ ಹದ್ದುಗಳು ಅವರ ಕರುಳುಗಳನ್ನು ಎಳೆದು ಹಾಕುವವು ಹಾವುಗಳು ಮತ್ತು ಚೇಳುಗಳು ಅವರಿಗೆ ಚಿತ್ರ ಹಿಂದೆ ನೀಡುವವು." (ಶ್ರೀಮದ್ ಭಗವತ್ ಪುರಾಣ 3–30–26)

● "ಅವರ ದೇಹಗಳನ್ನು ತುಂಡರಿಸಲಾಗುವುದು. ಆನೆಗಳಿಗೆ ಆಹಾರವಾಗಿ ನೀಡಲಾಗುವುದು. ಅವರನ್ನು ಬೆಟ್ಟದ ಕಣಿವೆಗಳಲ್ಲಿ ಎಸೆಯಲಾಗುವುದು ಅಥವಾ ನೀರಿನಲ್ಲಿ ಕೂಡಿ ಹಾಕಲಾಗುವುದು ಅಥವಾ ಶಂದಶದಲ್ಲಿ ಹಾಕಲಾಗುವುದು ಇಹಲೋಕದಲ್ಲಿ ಕೆಡುಕನ್ನು ಮಾಡಿರುವವರಿಗೆ 'ಅಂಧತಮಿಸ್' ಮತ್ತು 'ಶುದ್ರ' ಹೆಸರಿನ ಶಿಕ್ಷೆಯನ್ನು ನೀಡಲಾಗುವುದು." (ಶ್ರೀಮದ್ ಭಗವತ್ ಪುರಾಣ 3–30–27/28)

● "ಪಾಸಿಗಳಿಗೆ ಆಳವಾದ ಶಂದಶವನ್ನು ಸಿದ್ಧ ಪಡಿಸಲಾಗಿದೆ." ಆಚಾರ್ಯ ಸಯಾನ್‌ರವರು ಆಳವಾದ ಕಂಡಕವೆಂದರೆ ನರಕ ವೆಂದಿರುವರು. (ಋಗ್ವೇದ 4–5–5)

● "ಯಾರು ತಮ್ಮ ಜೀವಿತಾವಧಿಯಲ್ಲಿ ಆತ್ಮಕ್ಕೆ ಹಾನಿಯುನ್ನುಂಟು ಮಾಡುತ್ತಾರೋ, (ಪಾಪಗಳನ್ನು ಮಾಡುವ ಮೂಲಕ) ಮರಣಾನಂತರ ಪಿಶಾಚಿಗಳ ಕತ್ತಲೆ ಲೋಕಕ್ಕೆ ತೆರಳುವರು. (ಯರ್ಜ ವೇಧ 40–3)

**ಸ್ವರ್ಗದ ವಿವರಣೆ ನೀಡುವ ಕ್ಯೋಶಗಳು:**

● "ನಿನ್ನ ಅನುಯಾಯಿಗಳು ದಾನಶೀಲತೆ ತೋರುವ ಮೂಲಕ ಭಗವಂತನ ಸೇವೆ ಗೈಯ್ಯುತ್ತಾರೆ. ಅವರಿಗೆ ಸ್ವರ್ಗವನ್ನು ನೀಡಲಾಗುವುದು". (ಋಗ್ವೇದ 10–95–18)

● "ಜ್ಞಾನ ಇರುವವರು ಶಾಶ್ವತ ಜೀವನವನ್ನು ಪಡೆಯುವರು ಐಹಿಕ ದೇಹವನ್ನು ತ್ಯಜಿಸಿ, ತಮ್ಮ ಸಂಗಾತಿಗಳೊಂದಿಗೆ ಬಾನಿನಲ್ಲಿ ನೆಲೆಸುವರು ದೇವಚರರು ಪಯಣಿಸುವ ಮಾರ್ಗದಿಂದ ಅವರೂ ಪ್ರಯಣಿಸಿ ಸ್ವರ್ಗವನ್ನು ಸೇರುವರು." (ಅಥರ್ವ ವೇದ: 2–34–5)

● "ಪರಿಶುದ್ಧಗೊಳಿಸುವವರ ಮೂಲಕ ಪರಿಶುದ್ಧಗೊಂಡ ಬಳಿಕ ಹೊಸ

ದೇಹದೊಂದಿಗೆ, ಅರಿವಿನೊಂದಿಗೆ ಪ್ರಕಾಶವನ್ನು ಜಗತ್ತನ್ನು ಪ್ರವೇಶಿಸುವರು. ಈ ಹೊಸ ದೇಹದಲ್ಲಿ ಮೂಳೆಗಳಿರುವುದಿಲ್ಲ. ಬೆಂಕಿ ಅವರ ದೇಹವನ್ನು ಸುಡುವುದಿಲ್ಲ. ಸ್ವರ್ಗದಲ್ಲಿ ಅವರು ಬಹಳ ಸಂತುಷ್ಟರಾಗಿರುವರು. (ಅಥರ್ವ ವೇದ 4–34–2)

● **"**ಹಾಲು ಮತ್ತು ಷರಾಬು ತುಪ್ಪದಿಂದ ನಿರ್ಮಿಸಲಾಗಿರು ಕಾಲುವೆಗಳಲ್ಲಿ ಹರಿಯುವವು. ಕಾಲುವೆಯ ಕಿನಾರೆಗಳು ಜೇನಿನಿಂದ ನಿರ್ಮಿಸಲ್ಪಟ್ಟಿರುವವು. ರುಚಿಯಲ್ಲಿ ಇವೆಲ್ಲವೂ ಬಹಳ ಉತ್ಕೃಷ್ಟವಾಗಿರುವವು. ಕೆರೆಗಳು ಕಮಲದ ಹೂವುಗಳಿಂದ ತುಂಬಿರುವವು.**"** (ಅಥರ್ವ ವೇದ 4–34–6)

● **"**ನಿಮ್ಮ ದೇವ ಭಕ್ತಿಯ ಕಾರಣದಿಂದ ನೀವು ಆ ಬೃಹತ್ ವಿಶಾಲವಾಗಿರು ಸ್ಥಳವನ್ನು ನೋಡುವಿರಿ.**"** (ಋಗ್ವೇದ 1–21–6)

ಟಿಪ್ಪಣಿ: ವೇದಗಳಿಗೆ ಭಾಷ್ಯವನ್ನು ಬರೆದಿರುವ ಆಚಾರ್ಯ ಸಯಾನ್‌ರವರು ಬೃಹತ್ ವಿಶಾಲವಾಗಿರುವ ಸ್ಥಳವು ಸ್ವರ್ಗ ವಾಗಿರುವುದು ಎಂದಿದ್ದಾರೆ.

● **"**ಪತಿ, ಪತ್ನಿ ನನ್ನ ಎದುರಿಗೆ (ಸೃಷ್ಟಿಕರ್ತನ) ನಿಲ್ಲುವಿರಿ. ವಿಧೇಯ ದಾಸರಿಗೆ ಸ್ವರ್ಗವನ್ನು ನೀಡಲಾಗುವುದು.**"** (ಅಥರ್ವ ವೇದ 6–122–3)

● ಸ್ವರ್ಗ ಮತ್ತು ನರಕಗಳ ಅಸ್ತಿತ್ವ ವಿರುವುದರಿಂದ ಮನುಷ್ಯರಿಗೆ ಅವರ ಕೆಡುಕುಗಳ ಪ್ರತಿಫಲವಾಗಿ ಪುನರ್ ಜನ್ಮದ ಶಿಕ್ಷೆಯನ್ನು ನೀಡಲಾಗದೆಂದೂ, ಮರಣದ ನಂತರ ನರಕದ ಶಿಕ್ಷೆಯನ್ನು ನೀಡಲಾಗುವುದೆಂದು ವಿದ್ವಾಂಸರು ಹೇಳುತ್ತಾರೆ ಈ ಹಿನ್ನೆಲೆಯಲ್ಲಿ ಆವಗಮನ ಅಥವಾ ಪುನರ್ ಜನ್ಮದ ಪರಿಕಲ್ಪನೆ ಸಮರ್ಥನೀಯವಲ್ಲ.

▼▼▼▼▼▼▼

## ಅಧ್ಯಾಯ– 8

# ಕಲ್ಕಿ ಅವತಾರ ಯಾವಾಗ ಬರುವರು?

## 8. When Kalki Avtar will appear?

● ಪವಿತ್ರ ಪುರಾಣಗಳು, ಒಟ್ಟಾರೆ 24 ಅವತಾರಗಳಿವೆಯೆಂದೂ ಮತ್ತು ಗೌತಮ ಬುದ್ಧ 23ನೇ ಅವತಾರವೆಂದು ತಿಳಿಸುತ್ತವೆ. 24ನೇ ಅವತಾರ ಕಲ್ಕಿ ಅವತಾರವೆಂದು ಭಗವತ್ ಪುರಾಣ ಹೇಳುತ್ತದೆ.

**ಗೌತಮಬುದ್ಧ ತಮ್ಮ ಅನುಯಾಯಿ ನಂದಗೆ ಈ ರೀತಿ ಹೇಳಿದ್ದರು:**

"ಓ ನಂದ! ನಾನು ಮೊದಲು ಬುದ್ಧನೂ ಅಲ್ಲ ಮತ್ತು ಕೊನೆಯವನೂ ಅಲ್ಲ. ನನ್ನ ನಂತರ ಇನ್ನೋರ್ವ ಬುದ್ಧ ಬರಲಿರುವನು. ಆತನ ಹೆಸರು ಮೈತ್ರೇಯನಾಗಿರುವುದು. (ಕಾರಸ್‌ರವರ ಪುಸ್ತಕ ಗಾಸ್ಪೆಲ್ ಆಫ್ ಬುದ್ಧ ಪುಟ– 217)

● ಸ್ವಾಮಿ ವಿವೇಕಾನಂದ, ಗುರನಾನಕ್ ಮತ್ತು ಹಿಂದೂ ಧರ್ಮದ ಹೆಸರಾಂತ ವಿದ್ವಾಂಸರಾದ ಪಂಡಿತ ಸುಂದರಲಾಲ್, ಶ್ರೀ ಬಲರಾಮ್ ಸಿಂಗ್ ಪರಿಹಾರ್, ಡಾ। ವೇದ ಪ್ರಕಾಶ ಉಪಾಧ್ಯಯ, ಡಾ। ಪಿ.ಎಚ್. ಚೌಬೆ, ಡಾ। ರಮೇಶ್ ಪ್ರಸಾದ್ ಗಾರ್ಗ್, ಪಂಡಿತ್ ದುರ್ಗ ಶಂಕರ್ ಸತ್ಯಾರ್ಥಿ, ಶ್ರೀ ಕಶೀರಿ ಲಾಲ್ ಭಗತ್ ಮೊದಲಾದವರು, ಅವತಾರವೆಂದರೆ ಸೃಷ್ಟಿಕರ್ತನು ಭೂಮಿಯ ಮೇಲೆ ಜನ್ಮತಾಳುವುದು ಅಲ್ಲವೆಂದೂ, ಇದಕ್ಕೆ ವ್ಯತಿರಿಕ್ತವಾಗಿ ಅವತಾರವೆಂದರೆ ಸೃಷ್ಟಿಕರ್ತನ ಪ್ರತಿನಿಧಿವೆಂದೂ,ಕೀ ಪ್ರತಿನಿಧಿಯು ಸೃಷ್ಟಿಕರ್ತನ ಸಂದೇಶವನ್ನು ಜನರಿಗೆ ತಲುಪಿಸುವರೆಂದು ಹೇಳುತ್ತಾರೆ.

(ಡಾ। ಎಂಎ. ಶ್ರೀ ವಾಸ್ತವರವರ ಹಝ್ರತ್ ಮುಹಮ್ಮದ್ ಔರ್ ಭಾರತೀಯ ಧರ್ಮಗ್ರಂಥ ಪುಸ್ತಕದಿಂದ ಉದ್ಧರಿತ)

**ಅವತಾರ ಪುರುಷರು ಏಕೆ ಬರುತ್ತಾರೆ?**

यदा यदा ही धर्मस्य ग्लानिर्भवति भारत ।
अभ्युत्थानमधर्मस्य तदात्मानं सृज्याम्यहम् । (गीता)

● "ಸಾಧು ಪುರುಷರನ್ನು ಉದ್ಧರಿಸುವುದಕ್ಕಾಗಿ, ಪಾಪ ಕಾರ್ಯ ಮಾಡುವವರನ್ನು ವಿನಾಶ ಮಾಡುವುದಕ್ಕಾಗಿ ಮತ್ತು ಧರ್ಮವನ್ನು ಚೆನ್ನಾಗಿ ಸ್ಥಾಪಿಸುವುದಕ್ಕಾಗಿ ನಾನು ಯುಗ ಯುಗಗಳಲ್ಲಿ ಪ್ರಕಟವಾಗುತ್ತೇನೆ." (ಭಗವದ್ಗೀತೆ ಅಧ್ಯಾಯ– 4: ಶ್ಲೋಕ 8)

**ಕೊನೆಯ ಅವತಾರ ಯಾವ ಕಾಲದಲ್ಲಿ ಆಗಮಿಸುವರು:**

● ಅಸ್‌ಬಾರ್ನ್(ಗ್ಛಠಡಿಟಿಜ)ರವರ 'ಯನ್ ಸೈಕ್ಲೋಪೀಡಿಯಾ ಆಫ್ ವರ್ಲ್ಡ್ ಹಿಸ್ಟರಿ'ರ ಪ್ರಕಾರ, ಭೂಮಿಯು 4550 ಮಿಲಿಯ ವರ್ಷಗಳಷ್ಟು ಹಳತಾಗಿದೆ.

● ಹಿಂದೂ ಧಾರ್ಮಿಕ ಗ್ರಂಥಗಳ ಪ್ರಕಾರ, ಕಾಲವನ್ನು ನಾಲ್ಕು ಯುಗಗಳಲ್ಲಿ ವಿಂಗಡಿಸಲಾಗಿದೆ.

● ಪ್ರಥಮ ಯುಗವು ಸತ್ಯಯುಗ ಇದಕ್ಕೆ ಕ್ರಿಟ್ ಯುಗವೆಂತಲೂ ಹೇಳುತ್ತಾರೆ. ಇದರ ಅವಧಿ 17,28,000 ವರ್ಷಗಳಾಗಿತ್ತು.

● ಎರಡನೆಯ ಯುಗ ಪ್ರೇತಯುಗವಾಗಿತ್ತು. ಇದರ ಅವಧಿ 12,96,000 ವರ್ಷಗಳಾಗಿತ್ತು.

● ಮೂರನೆಯ ಯುಗ ದ್ವಾಪರಯುಗ ಇದರ ಕಾಲ 8,64,000 ವರ್ಷಗಳಾಗಿತ್ತು.

● ಕೊನೆಯ ಯುಗ ಕಲಿಯು. ಇದರ ಕಾಲ

4,36,000 ವರ್ಷಗಳು ಎಂದು ಹೇಳಲಾಗುತ್ತದೆ. ಇಲ್ಲಿಯವರೆಗೆ ಕಲಿಯುಗ 5100 ವರ್ಷಗಳು ಗತಿಸಿವೆ ಎನ್ನಲಾಗುತ್ತದೆ.

● ಕಲ್ಕಿ ಅವತಾರ ಕಲಿಯುಗದಲ್ಲಿ ಜನ್ಮ ತಾಳುತ್ತಾರೆ ಎಂದು ಪುರಾಣಗಳು ನುಡಿಯುತ್ತವೆ. (ಭಗವತ್ ಪುರಾಣ, 12:2:27)

इत्थ कलौ गतप्राये जनेषु खर धर्मणि-१
धर्म त्राणाय सत्वेन भगवानवतरिष्यति-२

**ಕಲ್ಲಿ ಅವತಾರ ಯಾವ ರ್ಷದಲ್ಲಿ ಜನ್ಮ ತಾಳುತ್ತಾರೆ?**

● ನೆಮಿಚಂದ್ರ ವಿರಚಿತೆ ಜೈನರ ಧರ್ಮ ಗ್ರಂಥ 'ತ್ರಿಲೋಕ ಸಾಗರ'ದ ಪ್ರಕಾರ, ಮಹಾವೀರ ಸ್ವಾಮಿಯವರ ನಿಧನದ 605 ವರ್ಷ 5 ತಿಂಗಳ ನಂತರ 'ಶಕರಜ್'ರವರು ಜನ್ಮತಾಳಿದರು. ಶಕರಜ್‌ರವರ ನಿಧನದ 394 ವರ್ಷಗಳು ಎಳು ತಿಂಗಳ ನಂತ ಕಲ್ಕಿ ಅವತಾರ ಜನ್ಮ ತಾಳಿದರು.

पणछस्सयं वस्संपण मासजंद गमिय वीर णिवुइ दो
सगराजो सो कल्कि चतुणवतिय महिप सगमासं
(त्रिलोकसागर प.३२)

● ಉತ್ತರ ಪುರಾಣದ ಪ್ರಕಾರ, ಕಲ್ಕಿ ಅವತಾರ ಮಹಾವೀರ ಸ್ವಾಮಿಯ ನಿಧನದ 1000 ವರ್ಷಗಳ ನಂತರ ಜನ್ಮ ತಾಳಿದರು.

(ಗುಣಭದ್ರ ಇಂಡಿಯನ್ ಆಂಟಿಕ್ಯೂರಿ ಭಾಗ ಜ.ಗ.ಕ. 143)

ಮಹಾವೀರ ಸ್ವಾಮಿ ಕ್ರಿ.ಪೂರ್ವ 500ರಲ್ಲಿ ಮರಣ ಹೊಂದಿರುವರೆಂದು ಅಂದಾಜಿಸಲಾಗಿದೆ. ಆದುದರಿಂದ ಕಲ್ಕಿ ಅವತಾರರ ಜನ್ಮ ಕ್ರಿ.ಶ. 500ರಲ್ಲಿ ಆಯಿತೆಂದು ಅಂದಾಜಿಸಿದೆ.

**ಯಾವ ದಿನದಂದು ಕಲ್ಕಿ ಅವತಾರ ಜನ್ಮತಾಳುವರು?**

द्वादश्यां शुक्ल पक्षरस्य माघवे माघवमः-१
जातो दद्दशुतुः पुत्रं पित्रौहृष्टमानसौ-२

● "ಕಲ್ಕಿ ಅವತಾರರು ಮಾಧವ ತಿಂಗಳ ಪ್ರಕಾಶಮಯ ಅರ್ಧ ಮಾಸಿಕದ 12ರಂದು ಜನ್ಮತಾಳುವರು." (ಕಲ್ಕಿ ಪುರಾಣ 2:15)

**ಕಲ್ಕಿ ಅವತಾರ ಯಾವ ಸ್ಥಳದಲ್ಲಿ ಜನಿಸುವರು?**

● "ಕಲ್ಕಿ ಅವತಾರರು ಸಂಭಲ ಗ್ರಾಮದಲ್ಲಿ ಜನಿಸುವರು." (ಕಲ್ಕಿ ಪುರಾಣ)

शम्भले विष्णुयशसो गृहे प्रादुर्भविष्याम्यहम् ।
(कल्कि पुराण, २:४)

**ಕಲ್ಕಿ ಅವತಾರರ ಕೌಟುಂಬಿಕ ಹಿನ್ನೆಲೆ ಏನು?**

शम्भल ग्राम मुख्यस्य ब्राह्मणस्य महात्मनः-१
भवने विष्णुयशसः कल्कि प्रादुर्भाविष्यति-२

● "ಕಲ್ಕಿ ಅವತಾರರು ಮುಖ್ಯ ಪುರೋಹಿತರ ನೆಯಲ್ಲಿ ಜನಿಸುವರು. ಅವರ ತಂದೆಯ ಹೆಸರು ವಿಷ್ಣು-ಯಶ್ ಎಂದಾಗಿರುವುದು."

सुमत्या विष्णुयशसा गर्भधत्त वैष्णवम् ।

● "ಕಲ್ಕಿ ಅವತಾರರ ತಾಯಿಯ ಹೆಸರು ಸುಮತಿ ಎಂದಾಗಿರುವುದು." (ಕಲ್ಕಿ ಪುರಾಣ 2:4 ಮತ್ತು 2:11)

**ಕಲ್ಕಿ ಅವತಾರರ ಲಕ್ಷಣಗಳೇನು?**

अश्वमाशुगमारूमह्य देव दत्तं जगगत्पतिः-१
असिनासाधु दमनमष्टैश्वर्य गुणान्वितः-२ ।
(भगवत पुराण, १२ अस्कंध, २:१६)

● ಭಗವತ್ ಪುರಾಣ (12:2:19) ಹೇಳುತ್ತದೆ.

"ಎಚಿಟು ಉತ್ತಮ ಗುಣಗಳನ್ನು ಹೊಂದಿ, ದೇವಚರರು ನೀಡಿರುವ ವೇಗವಾಗಿ ಚಲಿಸುವ ಕುದುರೆಯನ್ನು ಏರಿ, ಕೈಯಲ್ಲಿ ಖಡ್ಗವನ್ನು ಹಿಡಿದು ಜಗತ್ತಿನ ಸಂರಕ್ಷಕನು ಶತ್ರುಗಳನ್ನು ಸದೆಬಡಿಯುವನು."

● ಭಗವತ್ ಪುರಾಣವು ಕಲ್ಕಿ ಅವತಾರವು ಅಂತಿಮ ಅಥವಾ ಕೊನೆಯ ಅವತಾರವೆನ್ನುತ್ತದೆ. (ಭಗವತ್ ಪುರಾಣ 1:3:24)

● ಪರಶುರಾಮನು ಕಲ್ಕಿ ಅವತಾರಿಗೆ ಬೆಟ್ಟದಲ್ಲಿರುವ ಗುಹೆಯಲ್ಲಿ ಜ್ಞಾನವನ್ನು ದಯಪಾಲಿಸುತ್ತಾನೆ ಎಂದು ಕಲ್ಕಿ ಪುರಾಣ ಹೇಳುತ್ತದೆ. ಮುಂದುವರೆದು ಕಲ್ಕಿ ಪುರಾಣವು, ಕಲ್ಕಿ ಅವತಾರನು ಉತ್ತರದ ಕಡೆಗೆ ಹೋಗಿ ನಂತರ ಮರಳುತ್ತಾನೆ ಎಂದು ಹೇಳುತ್ತದೆ.

● ಕಲ್ಕಿ ಪುರಾಣವು (2:5) ಕಲ್ಕಿ ಅವತಾರಿಗೆ ನಾಲ್ಕು ಅನುಯಾಯಿಗಳಿದ್ದು, ಇವರು ಪಿಶಾಚಿಗಳನ್ನು ಮಣಿಸಲು ಕಲ್ಕಿ ಅವತಾರಿಗೆ ಸಹಾಯ ಮಾಡುತ್ತಾರೆ ಎನ್ನುತ್ತದೆ.

चतुर्भिभ्रातृभिर्देव करिष्यामि कलिक्षयम्।

(कल्कि पुराण, २:५)

● ಕಲ್ಕಿ ಅವತಾರಿಗೆ ದೇವಚರರು ಸಹಾಯ ನೀಡುವರು ಎಂದು ಕಲ್ಕಿ ಪುರಾಣ (2:7) ತಿಳಿಸುತ್ತದೆ. ಭಗವತ್ ಪುರಾಣ (12:2:20) ಕಲ್ಕಿ ಅವತಾರಿ ಗಂಭೀರ ವ್ಯಕ್ತಿತ್ವವನ್ನು ಹೊಂದಿರುತ್ತಾನೆ ಎನ್ನುತ್ತದೆ.

विचरन्नाशुना क्षोण्यां हयेनाप्रतिमद्युतिः-१
नृपालिंगप्तछदो दस्युन् कोटिशोनिहनिष्यातिः-२
(भगवत पुराण १२, अस्कंध २, १:२०)

● ಕಲ್ಕಿ ಅವತಾರಿಯ ಮೈ ವಾಸನೆಯು ಸುವಾಸನೆಯಿಂದಿದ್ದು, ಅವರ ಸುತ್ತಲೂ ಗಾಳಿಯು ಸುಗಂಧಮಯವಾಗಿರುವುದು ಎಂದು ಭಗವತ್ ಪುರಾಣ ತಿಳಿಸುತ್ತದೆ.

अथतेषां भाविष्यन्ति मनांसि विशदानिवै ।
वसुदेवांगरागति पुण्यगंधा निलस्पृशाम ।
(भगवत पुराण १२, अस्कंध , २१)

● ಭಗವತ್ ಪುರಾಣವು (12:2) ಕಲ್ಕಿ ಅವತಾರಿಗೆ ಈ ಎಂಟು ಗುಣಗಳಿರುವವು ಎನ್ನುತ್ತದೆ.

1. ವಿವೇಕ 2. ಗೌರವಾನ್ವಿತ ವಂಶಪಾರಂಪರ 3. ಆತ್ಮಸಂಯಮ 4. ದಿವ್ಯಜ್ಞಾನ 5. ಸಾಹಸ 6. ತೂಕದ ಮಾತುಕತೆ 7. ದಾನಶೀಲತೆ 8. ಕೃತಜ್ಞತೆ.

अष्टा गुणाः पुरूषं दीप्यन्ति
प्रज्ञा च कौल्यं च दमः श्रुत च
पराक्रमश च बहुभाषिता च
दानं यथा शक्ति कृतज्ञता च ।। (महाभारत)

● ಕಲ್ಕಿ ಅವತಾರಿ ವೈದಿಕ ಧರ್ಮವನ್ನು ಸ್ಥಾಪಿಸುವರು.

● ಕಲ್ಕಿ ಅವತಾರದ ಬಗ್ಗೆ ಇಷ್ಟು ವಿವರಗಳನ್ನು ತಿಳಿದುಕೊಂಡ ಬಳಿಕ, ಕಲ್ಕಿ ಅವತಾರ ಈಗಾಗಲೇ ಭೂಮಿಯ ಮೇಲೆ ಬಂದು ಹೋಗಿರುವರೋ ಅಥವಾ ಇನ್ನೂ ಬರಲಿಕ್ಕಿದೆಯೋ ಎಂಬುದನ್ನು ಪರಿಶೀಲಿಸೋಣ.

ಅಮೇರಿಕಾ, ಅಫಘಾನಿಸ್ತಾನದ ಮೇಲೆ ಆಕ್ರಮಣ ಮಾಡಿದಾಗ ಬಿ–52 ಬಾಂಬರುಗಳು ಅಮೇರಿಕಾದಿಂದ ಹೊರಟು, ಅಫಘಾನಿಸ್ತಾನದ ನೆಲವನ್ನು ಮುಟ್ಟದೇ, ಅಫಘಾನಿಸ್ತಾನದ ಮೇಲೆ ಬಾಂಬ್ ದಾಳಿ ಮಾಡಿ ಅಮೇರಿಕಾಕ್ಕೆ ಹಿಂತಿರುಗಿದ್ದವು. ಇದರಂತೆ ಪಾಕಿಸ್ತಾನದಲ್ಲಿದ್ದ ತಾಲಿಬಾನಿಗಳ ಅಡಗು ದಾಡಿವನ್ನು ಅಮೇರಿಕಾ ಉಪಗ್ರಹಗಳ ನೆರವಿನಿಂದ ಕ್ಷಿಪಣಗಳನ್ನು ಉಡಾಯಿಸಿ ಧ್ವಂಸಗೊಳಿಸಿದ್ದರು.

ಇಂದು ನಾವು ಜಗತ್ತಿನ ಮತ್ತೊಂದು ಭಾಗದ ಪ್ರದೇಶದ ಮೇಲೆ ಆಕ್ರಮಣ ನಡೆಸಿ ಪುನಃ ಸಾವಿರುವ ತಾಣಕ್ಕೆ ಹಿಂತಿರುಗಲು ಸಾಧ್ಯವಿರುವ ಯುಗದಲ್ಲಿದ್ದೇವೆ. ಉಪಗ್ರಹಗಳ ನೆರವಿನಿಂದ 3000 ಕಿ.ಮೀ. ದೂರವಿರುವ ಶತ್ರುಗಳ ನೆಲೆಯನ್ನು ಕ್ಷಿಪಣಿಗಳ ನೆರವಿನಿಂದ ಕರಾರುವಕ್ಕಾಗಿ ನಾಶಗೊಳಿಸಬಹುದು.

ವಿಜ್ಞಾನವು ಎಷ್ಟು ತ್ವರಿತವಾಗಿ ಅಭಿವೃದ್ಧಿಗೊಳ್ಳುತ್ತಿದೆಯೆಂದರೆ ಅಲ್ಪಕಾಲದಲ್ಲಿ ಉಪಗ್ರಹಗಳಲ್ಲಿ ಇಡಲಾಗುವ ಲೇಸರ್ ಗನ್‌ಗಳಿಂದ ಜನರು ಹೋರಾಟ ನಡೆಸಿದರೆ ಅಚ್ಚರಿಯೇನಿಲ್ಲ. ವಾಸ್ತವಿಕತೆ ಹೀಗಿರುವಾಗ, ಜಗತ್ತಿನ ಸಂರಕ್ಷಕ, ಅಂತಿಮ ಅವತಾರಿ, ಈಗ ಜನ್ಮ ತಳಿದು ಖಡ್ಗ ಹಿಡಿದು, ಕುದುರೆ ಸವಾರಿ ಮಾಡಿ ಶತ್ರುಗಳ ಸಂಹಾರ ಮಾಡುವರು ಎಂದು ಊಹಿಸಲಿಕ್ಕಾಗಿ ಸಾಧ್ಯವೇ?

ಈ ತರಹದ ಘಟನೆ ನಡೆಯಲು ಮೊಟ್ಟಮೊದಲು ಸಂಪೂರ್ಣ ಮಾನವ ಜನಾಂಗದ ನಾಶವಾಗಬೇಕು. ಅದರೊಂದಿಗೆ ಎಲ್ಲಾ ವೈಜ್ಞಾನಿಕ ಉಪಕರಣಗಳ ನಾಶವೂ ಆಗಬೇಕು. ಬದುಕುಳಿದ ಕೆಲವೇ ಜನರು ಶೂನ್ಯದಿಂದ ಜೀವನವನ್ನು ಪುನರಾಂಭಿಸಬೇಕು. ಈ ರೀತಿಯ ಸನ್ನಿವೇಶದಲ್ಲಿ, ಕುದುರೆ ಏರಿ ಖಡ್ಗ ಹಿಡಿದು, ಶತ್ರುಗಳ ಸಂಹಾರ ಮಾಡಲು ಸಾಧ್ಯವಿದೆ. ಆದರೆ ಒಂದು ಪ್ರಶ್ನೆ ಏಳುತ್ತದೆ. ಮಾನವ ಜನಾಂಗವೇ ನಾಶವಾದ ಮೇಲೆ ಸಂರಕ್ಷಕನ ಅಗತ್ಯತೆ ಎಲ್ಲಿರುವುದು?

ಕ್ರಿ.ಶ. 1100ರಿಂದ ಅರಬರು ಸೋಡ ಮತ್ತು ಕಲ್ಲಿದ್ದಲಿನ ಪುಡಿಯನ್ನು ಮಿಶ್ರಣ ಮಾಡಿ ಸ್ಫೋಟಕ ರೂಪದಲ್ಲಿ ಉಪಯೋಗಿಸುತ್ತಿದ್ದಾರೆ. ಸ್ಫೋಟಕಗಳಿದ್ದ ಮೇಲೆ ಖಡ್ಗಗಳು ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ಕಲ್ಕಿ ಅವತಾರಿಯ ಕಾಲ ಕ್ರಿ.ಶ. 1100ರ ಮೊದಲೇ ಇರಬೇಕು.

● ಉತ್ತರ ಪುರಾಣ ಮತ್ತು ತ್ರಿಲೋಕ ಸಾಗರದ ಪ್ರಕಾಶ, ಕಲ್ಕಿ ಅವತಾರ ಮಹಾವೀರ ಸ್ವಾಮಿಯ ನಿಧನದ 1000 ವರ್ಷಗಳ ನಂತರ ಜನ್ಮತಾಳಬೇಕು. ಅಂದರೆ ಸುಮಾರು ಕ್ರಿ.ಶ. 500ರಲ್ಲಿ. ಕ್ರಿ.ಶ. 500ರಲ್ಲಿ ಭಾರತ ದೇಶದಲ್ಲಿ ಯಾರೇ ಸಂತ ಅಥವಾ ಹೆಸರಾಂತ ಧಾರ್ಮಿಕ ವ್ಯಕ್ತಿಯ ಜನನವಾಯಿತೇ ಎಂಬುದನ್ನು ಪರಿಶೀಲಿಸೋಣ.

● ಅವತಾರ ಪುರುಷರಾದ ಗೌತಮಬುದ್ಧ, ಶ್ರೀ. ಕೃಷ್ಣ ಮತ್ತು ಶ್ರೀ. ರಾಮ ಪ್ರಖ್ಯಾತರಾಗಿದ್ದರು. ಇದೇ ರೀತಿ 24ನೇ ಅವತಾರಿ ಸಹ ಪ್ರಖ್ಯಾತರಾಗಿರಲೇ ಬೇಕು. ಅವರು ಅಜ್ಞಾತರಾಗಿರಲು ಸಾಧ್ಯವಿಲ್ಲ. ಕ್ರಿ.ಶ. 500ರಲ್ಲಿ ಭಾರತದಲ್ಲಿ ಅವತಾರ ಪುರುಷನೆಂದು ಪರಿಗಣಿಸಲ್ಪಡುವ ಯಾವನೇ ಹೆಸರಾಂತ ವ್ಯಕ್ತಿ ಕಂಡುಬರುವುದಿಲ್ಲ.

ಆದುದರಿಂದ ಈ ಅವಧಿಯಲ್ಲಿ ಭಾರತ ಖಂಡದ ಹೊರಗೆ ಇಂತಹ ವ್ಯಕ್ತಿ ಜನ್ಮತಾಳಿರುವ ಬಗ್ಗೆ ಪರಿಶೀಲಿಸೋಣ.

● ಕಳೆದ 1500 ವರ್ಷಗಳಲ್ಲಿ ಜನಿಸಿರುವ ಪ್ರಖ್ಯಾತ ಜನರ ಪಟ್ಟಿಯನ್ನು ಪರಿಶೀಲಿಸೋಣ. ಡಬ್ಲ್ಯೂ. ಹೆಚ್. ಹಾರ್ಟ್‌ರವರು ರಚಿಸಿರುವ "ಖ್ಙಜ 100 ಟಥಣ ಎಟಿಜಿಟಣಾಜಟಿಣುಚಿಟ ಠಿಜಡಿಣಠಣಾ ಎಟಿ ಝಣಠಡಿಥಿ" ಪುಸ್ತಕದಲ್ಲಿ, ಗ್ರಂಥಕರ್ತರು ಪ್ರಥಮ ಸ್ಥಾನವನ್ನು ಪ್ರವಾದಿ ಹ. ಮುಹಮ್ಮದ್(ಸ)ರಿಗೆ ನೀಡಿದ್ದಾರೆ. ಹ. ಮುಹಮ್ಮದ್(ಸ) ಕ್ರಿ.ಶ. 571ರಲ್ಲಿ ಜನಿಸಿದರು. ಕ್ರಿ.ಶ. 500ರ ಅಸುಪಾಸಿನಲ್ಲಿ ಇತರ ಯಾವನೇ ಹೆಸರಾಂತ ವ್ಯಕ್ತಿ ಜನ್ಮ ತಾಳಿರುವುದಿಲ್ಲ.

● ಕಲ್ಕಿ ಅವತಾರಿಯ ಜನ್ಮದ ಕಾಲಘಟ್ಟವೂ, ಹ. ಮುಹಮ್ಮದ್‌ರ(ಸ) ಜನನವೂ ಒಂದೇ ಆಗಿರುವುದು. ಆಕಸ್ಮಿಕವಾಗಿರಬಹುದು. ಆದುದರಿಂದ ಹ. ಮುಹಮ್ಮದ್(ಸ) ಕಲ್ಕಿ ಅವತಾರವಾಗಿದ್ದರೇ? ಎಂಬುದನ್ನು ದೃಢೀಕರಿಸಲು ಹ. ಮುಹಮ್ಮದ್‌ರ(ಸ) ಜನ್ಮಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳ ಬಗ್ಗೆ ವಿವರಗಳನ್ನು ಹಾಗೂ ಕಲ್ಕಿ ಅವತಾರದ ಬಗ್ಗೆ ಪುರಾಣಗಳಲ್ಲಿರುವ ಭವಿಷ್ಯವಾಣಿಗಳನ್ನು ತಾಳೆ ಮಾಡೋಣ.

ಹುಟ್ಟಿದ ದಿನಾಂಕ
ಜನ್ಮ ಸ್ಥಳ

ಕೌಟುಂಬಿಕ ಹಿನ್ನೆಲೆ
ತಂದೆಯ ಹೆಸರು
ತಾಯಿಯ ಹೆಸರು
ಜ್ಞಾನದ ಮೂಲ
ಅವರ ಹೊಣೆಗಾರಿಕೆ
ಅವರ ಅನುಯಾಯಿಗಳು
ಅವರ ವ್ಯಕ್ತಿತ್ವ
ಕೊನೆಯ ಅವತಾರವಾಗಿರವ ಬಗ್ಗೆ
ಇತರೆ ಸಂಬಂಧಿತ ಭವಿಷ್ಯವಾಣಿಗಳು

**ಜನ್ಮ ದಿನಾಂಕ:**

ಕಲ್ಕಿ ಪುರಾಣವು (2:25), ಕಲ್ಕಿ ಅವತಾರ ಮಾಧವ ತಿಂಗಳ 12ನೇ ದಿನದಂದು ಜನ್ಮತಾಳುತ್ತಾರೆ ಎನ್ನುತ್ತದೆ. ಹ. ಮುಹಮ್ಮದ್(ಸ)ರವರು ರಬೀವುಲ್ ಅವ್ವಲ್‌ತಿಂಗಳ 12ನೇ ತಾರೀಕಿನಂದು ಜನಿಸಿರುವರು. ರಬೀವುಲ್ ಅವ್ವಲ್ ಮಾಸವು ಮಾಧವ ಮಾಸಕ್ಕೆ ಸರಿ ಸಮಾನವಾಗಿರುವುದು.

**ಜನ್ಮ ಸ್ಥಳ:**

ಕಲ್ಕಿ ಪುರಾಣದ ಪ್ರಕಾರ, ಕಲ್ಕಿ ಅವತಾರಿಯ ಜನನ ಸಂಭಲ ಗ್ರಾಮದಲ್ಲಿ ಆಗುವುದು. ಭಾರತದಲ್ಲಿ ಎಲ್ಲಿಯೂ ಸಂಭಲ ಗ್ರಾಮವಿಲ್ಲ. ಈ ಹೆಸರಿಗೆ ಹತ್ತಿರದ ಎರಡು ಹೆಸರುಗಳಿವೆ. ಸಂಭಲಪುರ ಮತ್ತು ಸಂಭರ ಕೆರೆ. ಆದರೆ ಈ ಎರಡು ಸ್ಥಳಗಳಲ್ಲಿ ಯಾವನೇ ಹೆಸರಾಂತ ವ್ಯಕ್ತಿ ಜನಿಸಿರುವ ಬಗ್ಗೆ ಯಾರಿಗೂ ಮಾಹಿತಿ ಇಲ್ಲ.

ಡಾ॥ ವೇದ ಪ್ರಕಾಶ ಉಪಾಧ್ಯಯರು (ಪ್ರಯೋಗ ವಿಶ್ವವಿದ್ಯಾಲಯದ ಸಂಸ್ಕೃತ ವಿದ್ವಾಂಸರು), ಸಂಭಲ ಹೆಸರು ಒಂದು ಸಥಳದ ಗುಣವಿಶೇಷವನ್ನು ಸೂಚಿಸುತ್ತದೆಯೇ ಹೊರತು ಸ್ಥಳದ ಹೆಸರನ್ನು ಅಲ್ಲವೆನ್ನುತ್ತಾರೆ. ಸಂಸ್ಕೃತ ಭಾಷೆಯಲ್ಲಿ 'ಸಾಮ್'ವೆಂದರೆ ಶಾಂತಿ ವೆಂದರ್ಥ. ಅದರಂತೆ ಸಂಭಲ ಪದದ ಅರ್ಥ ಶಾಂತಿ ದೊರಕುವ ಸ್ಥಳವಾಗಿದೆ.

ಹ. ಮುಹಮ್ಮದ್(ಸ) ಮಕ್ಕಾ ಪಟ್ಟಣದಲ್ಲಿ ಜನಿಸಿದ್ದರು. ಪವಿತ್ರ ಕುರ್‌ಆನ್ ಮಕ್ಕಾ ಪಟ್ಟಣವನ್ನು 'ಬಲದುಲ್ ಅಮೀನ್' (ಕುರ್‌ಆನ್, 85:3) ಎಂದು ವರ್ಣಿಸಿದೆ. 'ಬಲದ್' ಶಬ್ದದ ಅರ್ಥ 'ಪಟ್ಟಣ'ವಾಗಿದ್ದು, ಅಮೀನ್ ಶಬ್ದದ ಅರ್ಥ 'ಶಾಂತಿ'ಯಾಗಿರುವುದು. ಅಂದರೆ 'ಶಾಂತಿ ದೊರಕುವ ಪಟ್ಟಣ.'

**ಕೌಟುಂಬಿಕ ಹಿನ್ನೆಲೆ:**

ಭಗವತ್ ಪುರಾಣದ ಪ್ರಕಾರ, ಕಲ್ಕಿ ಅವತಾರ ಮುಖ್ಯ ಅರ್ಚಕರ ಮನೆಯಲ್ಲಿ ಜನಿಸುವರು.
(ಭಗವತ್ ಪುರಾಣ 12–2–18)

ಹ. ಮುಹಮ್ಮದ್(ಸ)ರ ಅಜ್ಜ ಅಬ್ದುಲ್ ಮುತ್ತಲಿಬ್‌ರವರು ಪವಿತ್ರ ಕಅಬಾದ ಮುಖ್ಯ ಅರ್ಚಕರು ಮತ್ತು ಧರ್ಮದರ್ಶಿಯಾಗಿದ್ದರು.

**ತಂದೆಯ ಹೆಸರು:**

● ಭಗವತ್ ಪುರಾಣದ ಪ್ರಕಾರ, (12–2–18) ಕಲ್ಕಿ ಅವತಾರಿಯ ತಂದೆಯ ಹೆಸರು 'ವಿಷ್ಣು–ಯಶ್' ಆಗಿರುವುದು. ಈ ಶಬ್ದದ ಅರ್ಥ ವಿಷ್ಣುವನ್ನು ಅಥವಾ ಸೃಷ್ಟಿಕರ್ತನನ್ನು ಆರಾಧಿಸುವವ. ಹ. ಮುಹಮ್ಮದ್(ಸ)ರ ತಂದೆಯ ಹೆಸರು ಅಬ್ದುಲ್ಲಾವಾಗಿತ್ತು. ಅಬ್ದುಲ್ಲಾ ಶಬ್ದದ ಅರ್ಥ 'ಸೃಷ್ಟಿಕರ್ತನ ವಿಧೇಯ ದಾಸ.'

**ತಾಯಿಯ ಹೆಸರು:**

● ಕಲ್ಕಿ ಪುರಾಣದ ಪ್ರಕಾರ, ಕಲ್ಕಿ ಅವತಾರಿಯ ತಾಯಿಯ ಹೆಸರು ಸುಮತಿ ಸುಮತಿ ಶಬ್ದದ ಅರ್ಥ ಸೌಮ್ಯ ಮತ್ತು ಪರಹಿತವಾಗಿದೆ. ಹ. ಮುಹಮ್ಮದ್(ಸ)ರ ತಾಯಿಯ ಹೆಸರು 'ಆಮೀನಾ'ವಾಗಿತ್ತು. ಈ ಪದದ ಅರ್ಥವೂ ಶಾಂತಿಪ್ರಿಯ, ಸೌಮ್ಯ ಮತ್ತು ಪರಹಿತವಾಗಿದೆ.

● ಕಲ್ಕಿ ಪುರಾಣವು, ಕಲ್ಕಿ ಅವತಾರಿ ತನ್ನ ವಾಸಸ್ಥಳದಿಂದ ಉತ್ತರಕ್ಕೆ ಹೋಗಿ, ಪುನಃ ಅಲ್ಲಿಂದ ಹಿಂದಿರುಗುವುದಾಗಿ ಹೇಳುತ್ತದೆ. ಹ.

ಮುಹಮ್ಮದ್(ಸ) ತಮ್ಮ ವಾಸಸ್ಥಳ ಮಕ್ಕಾ ಪಟ್ಟಣದಿಂದ, ಅದರ ಉತ್ತರಕ್ಕೆ ಇರುವ ಮದೀನಾಕ್ಕೆ ವಲಸೆ ಹೋಗಿದ್ದರು. ವಲಸೆ ಹೋದ ಎಂಟು ವರ್ಷಗಳ ನಂತರ ಅವರು ಮಕ್ಕಾ ಪಟ್ಟಣದ ಮೇಲೆ ವಿಜಯ ಸಾಧಿಸಿ ಮಕ್ಕಾ ಪಟ್ಟಣಕ್ಕೆ ಹಿಂದಿರುಗಿದ್ದರು.

● ಕಲ್ಕಿ ಪುರಾಣವು ಕಲ್ಕಿ ಅವತಾರಿ ಬೆಟ್ಟ ಕ್ಕೆ ತೆರಳಿ, ಅಲ್ಲಿ ಪರಶುರಾಮನಿಂದ ಜ್ಞಾನವನ್ನು ಪಡೆಯುವರು ಎಂದು ತಿಳಿಸುತ್ತದೆ. ಹ. ಮುಹಮ್ಮದ್(ಸ) ಬೆಟ್ಟಕೆಕ ತೆರಳಿ, ಅದರಲ್ಲಿದ್ದ 'ಹಿರಾ' ಗುಹೆಯಲ್ಲಿ ಧ್ಯಾನ ಮತ್ತು ಆರಾಧನೆಯಲ್ಲಿ ತಲ್ಲೀನರಾಗುತ್ತಿದ್ದುದು ಐತಿಹಾಸಿಕ ಸತ್ಯವಾಗಿದೆ. 40ನೇ ವಯಸ್ಸಿನಲ್ಲಿ, ಹಿರಾ ಗುಹೆಯಲ್ಲಿ ದೇವಚರ ಹ. ಜಿಬ್ರೀಲ್‌ರ ಮೂಲಕ ಪವಿತ್ರ ಕುರ್‌ಆನ್ ಅನ್ನು ಪಡೆದರು.

● ಭಗವತ್ ಪುರಾಣವು (12:2:9) ಕಲ್ಕಿ ಅವತಾರಿಯು ಜಗತ್ತಿನ ಸಂರಕ್ಷಕರನಾಗಿರುತ್ತಾನೆ ಎಂದು ತಿಳಿಸುತ್ತದೆ. ಪವಿತ್ರ ಕುರ್‌ಆನ್, ಹ. ಮುಹಮ್ಮದ್(ಸ)ರ ಬಗ್ಗೆ ಈ ರೀತಿ ಹೇಳುತ್ತದೆ.

"ನಾವು ಮುಹಮ್ಮದ್(ಸ)ರನ್ನು ರಹಮತುಲ್‌ಲಿಲ್ ಆಲಮೀನ್" ಆಗಿ ರವಾನಿಸಿದೆವು. (ಪವಿತ್ರ ಕುರ್‌ಆನ್, 21:107)

'ರಹಮತ್'ವೆಂದರೆ ಅನುಗ್ರಹ, 'ಆಲಮೀನ್'ವೆಂದರೆ ಇಡಿಯ ಜಗತ್ತು. ಅಂದರೆ, ಹ. ಮುಹಮ್ಮದ್(ಸ) ಇಡಿಯ ಜಗತ್ತಿಗೆ ಅನುಗ್ರಹವಾಗಿದ್ದು, ಅವರ ಮುಖಾಂತರ ಇಹಲೋಕದಲ್ಲಿ ಶಾಂತಿ, ಯಶಸ್ಸು ಮತ್ತು ಪರಲೋಕದಲ್ಲಿ ಮುಕ್ತಿ, ಶಾಶ್ವತ ಸುಖ, ಸಂತೋಷ ಪಡೆಯಲು ಅವಶ್ಯವಿರುವ ಮಾರ್ಗದರ್ಶನ ದೊರಕುತ್ತದೆ ಎಂಬುದು ಕುರ್‌ಆನಿನ ಈ ಸೂಕ್ತದ ಅರ್ಥವಾಗಿದೆ.

● ಕಲ್ಕಿ ಪುರಾಣವು (2:5) ಕಲ್ಕಿ ಅವತಾರಿ ತಮ್ಮ ನಾಲ್ವರು ಅನುಯಾಯಿಗಳು ನೆರವಿನೊಂದಿಗೆ ಕಾಳಿ ಅಂದರೆ ಸೈತಾನನ್ನು ಸೋಲಿಸುವರು ಎಂದು ತಿಳಿಸುತ್ತದೆ.

ಡಬ್ಲ್ಯೂ.ಎಲ್. ಲ್ಯಾಂಜರ್(ಘ.ಐ. ಐಚಿಟಿರಜಡಿ)ರವರ ಎನ್‌ಸೈಕ್ಲೋಪೀಡಿಯಾ ಆಫ್ ವರ್ಲ್ಡ್ ಹಿಸ್ಟರಿ, ಹ. ಮುಹಮ್ಮದ್(ಸ)ರ ನಿಧನದ ನಂತರ, ಅವರ ನಾಲ್ವರು ಅನುಯಾಯಿಗಳು ಹ. ಅಬೂಬಕರ್ ಸಿದ್ದೀಕ್(ರ), ಹ. ಉಮರ್(ರ), ಹ. ಉಸ್ಮಾನ್(ರ) ಮತ್ತು ಹ. ಅಲಿ(ರ) ಇಸ್ಲಾಮಿನ ಸಂದೇಶವನ್ನು ಜಗತ್ತಿನಾದ್ಯಂತ ಹರಡಿದರೆಂದೂ ಇದರ ಮೂಲಕ ಒಳಿತಿನ ಸಂಸ್ಥಾಪನೆಯಾಗಿ ಕೆಡಕುಗಳು ನಿರ್ಮೂಲನೆಗೊಂಡಿತೆಂದು ತಿಳಿಸುತ್ತದೆ.

● ಕಲ್ಕಿ ಪುರಾಣವು (2:7), ಕಲ್ಕಿ ಅವತಾರಿಗೆ ಯುದ್ಧ ಭೂಮಿಯಲ್ಲಿ ದೇವಚರರು ಸಹಾಯ ಮಾಡುತ್ತಾರೆ ಎನ್ನುತ್ತದೆ.

ಬದ್ರ್ ಯುದ್ಧದಲ್ಲಿ ಮುಸ್ಲಿಮ್ ಸೇನೆಯಲ್ಲಿ 313 ಸೈನಿಕರಿದ್ದರೆ, ಶತ್ರು ಸೇನೆಯಲ್ಲಿ 1000 ಯೋಧರಿದ್ದರು. ಕಂದಕ ಯುದ್ಧದಲ್ಲಿ 3000 ಮುಸ್ಲಿಮ್ ಸೈನಿಕರಿಗೆ ಎದುರಾಗಿ 15,000ಕ್ಕಿಂತಲೂ ಹೆಚ್ಚಿನ ಶತ್ರು ಸೈನಿಕರಿದ್ದರು. ಈ ಎರಡು ಯುದ್ಧಗಳಲ್ಲದೇ ಇತರ ಅನೇಕ ಯುದ್ಧಗಳಲ್ಲಿಯೂ, ಕಡಿಮೆ ಸಂಖ್ಯೆಯಲ್ಲಿ ಮುಸ್ಲಿಮ್ ಸೇನೆಯಿದ್ದರೂ, ದೇವಚರರ ನೆರವಿನ ಕಾರಣದಿಂದ ವಿಜಯ ಸಾಧಿಸಿತ್ತು. ಪವಿತ್ರ ಕುರ್‌ಆನಿನ ಅಧ್ಯಾಯ– 3:123–125, 8:9, 23:9 ಮೊದಲಾದವುಗಳಲ್ಲಿ ಇದನ್ನು ದೃಢೀಕರಿಸಲಾಗಿದೆ.

● ಭಗವತ್ ಪುರಾಣವು (12:2:21) ಕಲ್ಕಿ ಅವತಾರಿಯ ಬೆವರು ಸುವಾಸೆಯಿಂದ ಕೂಡಿದ್ದು, ಈ ಕಾರಣದಿಂದ ಅವರ ಸುತ್ತಮುತ್ತಲಿನ ಗಾಳಿಯು

ಸುಗಂಧಮಯವಾಗಿರುವುದೆಂದು ಹೇಳುತ್ತದೆ.

ಹದೀಸ್ ಗ್ರಂಥಗಳಲ್ಲಿ ಒಂದು ಘಟನೆ ಉಲ್ಲೇಖಿತವಿದೆ. ಒಮ್ಮೆ ಹ. ಮುಹಮ್ಮದ್(ಸ) ಮಲಗಿರುವಾಗ ಹ. ಉಮ್ಮೆ ಸಲ್ಮಾ ಹ. ಮುಹಮ್ಮದ್(ಸ)ರ ಬೆವರನ್ನು ಸಂಗ್ರಹಿಸುತ್ತಿದ್ದರು. ಹ. ಮುಹಮ್ಮದ್(ಸ)ರಿಗೆ ಎಚ್ಚರವಾಗಿ, ಅವರು ಹ. ಉಮ್ಮೆ ಸಲ್ಮಾ(ರ)ರಿಗೆ, ಬೆವರಿನಿಂದ ಏನು ಮಾಡುವಿ? ಎಂದು ಪ್ರಶ್ನಿಸಿದರು. ಹ. ಉಮ್ಮೆ ಸಲ್ಮಾ(ರ), ಪ್ರವಾದಿ ಮುಹಮ್ಮದ್(ಸ)ರ ಬೆವರನ್ನು ಸುಗಂಧ ತೈಲದಂತೆ ಉಪಯೋಗಿಸುವುದಾಗಿ ಉತ್ತರಿಸಿದರು.

ಪ್ರವಾದಿ ಮುಹಮ್ಮದ್(ಸ)ರ ಕೈಕುಲುಕಿದವರ ಕೈಗಳು ಇಡೀ ದಿನ ಸುಗಂಧಮಯವಾಗಿರುತ್ತಿದ್ದವು. (ತಿರ್ಮಿದಿ ಪುಟ– 208)

ಪ್ರವಾದಿ ಮುಹಮ್ಮದ್(ಸ)ರ ಸೇವಕ ಅನಸ್ ನುಡಿದಿರುವರು: "ಗಾಳಿಯಲ್ಲಿ ತುಂಬುವ ಸುಗಂಧ ಪರಿಮಳದಿಂದ ನಾವು ಪ್ರವಾದಿ ಮುಹಮ್ಮದ್(ಸ) ತಮ್ಮ ಕೊಠಡಿಯಿಂದ ಹೊರ ಬಂದಿರುವುದನ್ನು ಅರಿತುಕೊಳ್ಳುತ್ತಿದ್ದೆವು.

(ಲೈಫ್ ಆಫ್ ಮುಹಮ್ಮದ್–ಸರ್ ವಿಲಿಯಮ್ ಮೂರ್– ಪುಟ 342)

● ಭಗವತ್ ಪುರಾಣ. (ವಿಭಾಗ 2 ಅಧ್ಯಾಯ 2) ಕಲ್ಕಿ ಅವತಾರಿ ಎಂಟು ಗುಣಗಳಿಂದ ಅಲಂಕೃತನಾಗಿರುವನು ಎಂದು ತಿಳಿಸುತ್ತದೆ. ವಿವೇಕ, ಗೌರವಾನ್ವಿತ ವಂಶಪಾರಂಪಳಿ, ಆತ್ಮಸಂಯಮ, ದಿವ್ಯಜ್ಞಾನ, ಸಾಹಸ, ತೂಕದ ಮಾತುಕತೆ, ದಾನಶೀಲತೆ ಮತ್ತು ಕೃತಜ್ಞತೆ.

ಮುಸ್ಲಿಮೇತರರ ಈ ಕೆಳಗಿನ ಪುಸ್ತಕಗಳು ಪ್ರವಾದಿ ಮುಹಮ್ಮದ್(ಸ)ರಲ್ಲಿ ಈ ಗುಣಗಳಿದ್ದ ಬಗ್ಗೆ ದೃಢೀಕರಿಸುತ್ತವೆ.

**1**. ಲೈಫ್ ಆಫ್ ಮುಹಮ್ಮದ್– ಸರ್ ವಿಲಿಯಮ್ ಮೂರ್

(ಸ್ಮಿತ್ ಯೆಲ್ಡರ್ ಅಂಡ್ ಕಂಪೆನಿ ಲಂಡನ್‌ರಿಂದ ಪ್ರಕಾಶಿತ)

**2**. ಇನ್ಟ್ರಡಕ್ಷನ್ ಟುದ ಸ್ಪೀಚಸ್ ಆಫ್ ಮುಹಮ್ಮದ್– ಲೇನ್‌ಪೂಲ್

(ಮ್ಯಾಕ್‌ಮಿಲನ್ ಅಂಡ್ ಕಂಪೆನಿ ಲಂಡನ್‌ರಿಂದ ಪ್ರಕಾಶಿತ)

**3**. ಮುಹಮ್ಮದ್ ಅಂಡ್ ಮುಹಮ್ಮದ್– ಆರ್. ಬೋಸ್‌ವರ್ತ್ ಸ್ಮಿತ್

● ಭಗವತ್ ಪುರಾಣವು (12:2:19) ಜಗತ್ತಿನ ಸಂರಕ್ಷಕನಾದ ಕಲ್ಕಿ ಅವತಾರಿಯು ಎಂದು ವಿಶಿಷ್ಟಗುಣಗಳಿಂದ ಅಲಂಕೃತನಾಗಿ, ಕೈಯಲ್ಲಿ ಖಡ್ಗವನ್ನು ಹಿಡಿದು, ವೇಗವಾಗಿ ಓಡುವ ಕುದುರೆಯನ್ನು ಏರಿ ಶತ್ರುಗಳನ್ನು ಸದೆ ಬಡಿಯುವನು ಎನ್ನುತ್ತದೆ. ಹ. ಮುಹಮ್ಮದ್(ಸ)ರ ಬಳಿ ಏಳು ಕುದುರೆಗಳು ಮತ್ತು ಒಂಭತ್ತು ಖಡ್ಗಗಳಿದ್ದವು. ಕೇವಲ 23 ವರ್ಷಗಳ ಅವಧಿಯಲ್ಲಿ ಹ. ಮುಹಮ್ಮದ್(ಸ) 1,48,000 ಚದರ ಕಿ.ಮೀ. ಪ್ರದೇಶದಲ್ಲಿ ವೈರಿಗಳನ್ನು ಮಣಿಸುವುದರಲ್ಲಿ ಸಫಲರಾದರು.

● ಭಗವತ್ ಪುರಾಣವು (1:3:24) ಕಲ್ಕಿ ಅವತಾರವು ಅಂತಿಮ ಅವತಾರವಾಗಿರುವುದು ಎಂದು ತಿಳಿಸುತ್ತದೆ. ಪವಿತ್ರ ಕುರ್‌ಆನ್ ಸಹ ಹ. ಮುಹಮ್ಮದ್(ಸ)ರನ್ನು ಅಂತಿಮ ಪ್ರವಾದಿ ಎಂದು ಕರೆಯುತ್ತದೆ. (ಪವಿತ್ರ ಕುರ್‌ಆನ್, 33:40)

● ಪುರಾಣಗಳು ಕಲ್ಕಿ ಅವತಾರಿ ವೈದಿಕ ಧರ್ಮವನ್ನು ಸ್ಥಾಪಿಸುವುದು ಎಂದು ತಿಳಿಸುತ್ತವೆ. ಹ. ಮುಹಮ್ಮದ್(ಸ) ಕುರ್‌ಆನಿನ ಮಾರ್ಗದರ್ಶನದಂತೆ ಧರ್ಮವನ್ನು ಸಂಸ್ಥಾಪಿಸಿದರು. ಪವಿತ್ರ ವೇದಗಳ ಸಾರಾಂಶವು ಕುರ್‌ಆನಿನ ಬೋಧನೆಗಳಿಗೆ ಹೋಲುತ್ತದೆ. ಈ ಪುಸ್ತಕದಲ್ಲಿ ವೇದಗಳಲ್ಲಿ ಮತ್ತು ಕುರ್‌ಆನ್‌ನಲ್ಲಿ ಹೋಲುವ 80

ಸೂಕ್ತಗಳನ್ನು ಉಲ್ಲೇಖಿಸಲಾಗಿದೆ. ವೇದಗಳು ಮತ್ತು ಕುರ್‌ಆನ್ ಏಕದೇವನ ಆರಾಧನೆಯನ್ನು ಮತ್ತು ಮಾನವತೆ, ಸಹೋದರತೆಯನ್ನು ಬೋಧಿಸುತ್ತವೆ. ಆದುದರಿಂದ ಇಸ್ಲಾಮ್ ಧರ್ಮವನ್ನು ವೈದಿಕ ಧರ್ಮವೆಂದೂ ಹೇಳಬಹುದು.

● ಕಲ್ಕಿ ಅವತಾರಿಯ ಎಲ್ಲಾ ವೈಶಿಷ್ಟ್ಯಗಳು ಪ್ರವಾದಿ ಮುಹಮ್ಮದ್(ಸ)ರಲ್ಲಿ ಕಂಡು ಬರುತ್ತವೆ. ಆದುದರಿಂದ ಹೆಚ್ಚಿನ ಸಂಸ್ಕೃತ ವಿದ್ವಾಂಸರು ಉದಾಹರಣೆಗೆ ಡಾ॥ ವೇದ್ ಪ್ರಕಾಶ್ ಉಪಾಧ್ಯಾಯ, ಡಾ॥ ಎಮ್.ಎ. ಶ್ರೀ ವಾಸ್ತವ, ಪಂಡಿತ ಧನವೀರ ಉಪಾಧ್ಯಾಯ ಮೊದಲಾದವರು, ಹ. ಮುಹಮ್ಮದ್(ಸ)ರವರೇ ಕಲ್ಕಿ ಅವತಾರವೆಂದು ಹೇಳುತ್ತಾರೆ. ಆದರೆ ಇತರ ಕೆಲವರು ಕಲ್ಕಿ ಅವತಾರಿಗೆ ಇನ್ನೂ ಕಾಯುತ್ತಿದ್ದಾರೆ.

ನರಶನ್ಸ, ಕಲ್ಕಿ ಅವತಾರ ಮತ್ತು ಪ್ರವಾದಿ ಮುಹಮ್ಮದ್(ಸ)ರ ಬಗ್ಗೆ ಹೆಚ್ಚಿ ವಿವರಗಳಿಗೆ ಈ ಕೆಳಗಿನ ಪುಸ್ತಕಗಳನ್ನು ಅಧ್ಯಯನ ಮಾಡಬಹುದು.

**1.** ಕಲ್ಕಿ ಅವತಾರ್ ಅಂಡ್ ಹಜರತ್ ಮುಹಮ್ಮದ್– ಡಾ। ವೇದ ಪ್ರಕಾಶ ಉಪಾಧ್ಯಾಯ

**2.** ನರಶನ್ಸ ಔರ್ ಅಚಿತಿಮ್ ಋಷಿ– ಡಾ। ವೇದ ಪ್ರಕಾಶ ಉಪಾಧ್ಯಾಯ

**3.** ಮುಹಮ್ಮದ್ ಔರ್ ಭಾರತೀಯ ಧರ್ಮ್ ಗ್ರಂಥ್– ಡಾ। ಎಮ್.ಎ. ಶ್ರೀವಾತ್ಸವ

**4.** ಮುಹಮ್ಮದ್ ಇನ್ ವರ್ಲ್ಡ್ ಸ್ಕ್ರಿಪ್ಚರ್ಸ್– ಎ.ಎಚ್. ವಿದ್ಯಾರ್ಥಿ.

● ಗೌತಮಬುದ್ಧ 23ನೇ ಅವತಾರವಾಗಿದ್ದು ಬೌದ್ಧರು ವೈದಿಕ ಧರ್ಮದ 23ನೇ ಅವತಾರವಾದ ಗೌತಮಬುದ್ಧರ ಅನುಯಾಯಿಗಳಾಗಿರುವರು. ಹ. ಮುಹಮ್ಮದ್(ಸ) 24ನೇ ಅವತಾರ ಹ. ಮುಹಮ್ಮದ್(ಸ)ರ ಅನುಯಾಯಿಗಳಾಗಿರುವರು.

ಜನರು ದೀರ್ಘಕಾಲದ ಬೋಧನೆಯ ಹೊರತಾಗಿಯೂ ಮನುರವರ [ಹ. ನೂಹ್(ಅ)] ಕರೆಗೆ ಓಗೋಡದ ಕಾರಣ, ಸೃಷ್ಟಿಕರ್ತನು ಜನರ ಮೇಲೆ ಯಾತನೆಯನ್ನು ಎರಗಿಸಿದನು. ಈ ಯಾತನೆಯು ಭಯಂಕರ ಪ್ರವಾಹದ ರೂಪದಲ್ಲಿತ್ತು. ಈ ಪ್ರವಾಹವು ಸಂಪೂರ್ಣ ಜಗತನ್ನೇ ಆವರಿಸಿತ್ತು. ಏಕೈಕ ದೇವರ ಮೇಲೆ ವಿಶ್ವಾಸವಿಡುವವರು ಮತ್ತು ಮನು ಮಾತ್ರ ಈ ಪ್ರವಾಹದಿಂದ ಸಂರಕ್ಷಿಸಲ್ಪಟ್ಟರು ಮತ್ತು ಇತರರೆಲ್ಲರೂ ನಾಶ ಹೊಂದಿದರು.

● ಮನು ಮತ್ತು ಅವರ ಅನುಯಾಯಿಗಳು ಪ್ರವಾಹದ ನಂತರ ವೈದಿಕ ಧರ್ಮವನ್ನು ಅನುಸರಿಸುತ್ತಿದ್ದರೆ, ಇಸ್ಲಾಮ್ ಧರ್ಮವೂ ಸಹ ವೈದಿಕ ಧರ್ಮವನ್ನು ಆಗಿರುತ್ತದೆ. ಏಕೆಂದರೆ ಹ. ಮುಹಮ್ಮದ್(ಸ) ಇಸ್ಲಾಮ್ ಹೆಸರಿನಲ್ಲಿ ಯಾವುದೇ ಹೊಸ ಧರ್ಮವನ್ನು ಸ್ಥಾಪಿಸಿರುವುದಿಲ್ಲ. ಹ. ಮುಹಮ್ಮದ್(ಸ) ಈ ಮೊದಲು ಪ್ರವಾದಿಗಳು ಮತ್ತು ಮನು ಬೋಧಿಸಿದ್ದ ಧರ್ಮವನ್ನು ಪುನಃಚ್ಚೇತನಗೊಳಿಸಿದ್ದರು. ಪವಿತ್ರ ಕುರ್‌ಆನಿನ ಈ ಸೂಕ್ತವು ಇದನ್ನು ದೃಢೀಕರಿಸುತ್ತದೆ.

"ಅವನು ನೂಹರಿಗೆ ಆಜ್ಞಾಪಿಸಿದ್ದ ಧರ್ಮ ವಿಧಾನವನ್ನೇ ನಿಮಗಾಗಿಯೂ ನಿಶ್ಚಯಿಸಿಕೊಟ್ಟಿದ್ದಾನೆ ಮತ್ತು (ಮುಹಮ್ಮದರೇ) ಈಗ ನಾವು ಅದನ್ನೇ ದಿವ್ಯವಾಣಿಯ ಮೂಲಕ ನಿಮ್ಮ ಕಡೆಗೆ ಕಳುಹಿಸಿರುತ್ತೇವೆ. ಇದನ್ನೇ ನಾವು ಇಬ್ರಾಹೀಮ್ ಮೂಸಾ ಮತ್ತು ಈಸಾರಿಗೂ ಬೋಧಿಸುದ್ದೆವು. ಈ ಧರ್ಮವನ್ನು ಸಂಸ್ಥಾಪಿಸಿರಿ ಮತ್ತು ಇದರಲ್ಲಿ ವಿಭಿನ್ನರಾಗದಿರಿ ಎಂಬ ಆದೇಶದೊಂದಿಗೆ." (ಪವಿತ್ರ ಕುರ್‌ಆನ್, 42:13)

● ಪವಿತ್ರ ಕುರ್‌ಆನ್ ಏಕದೇವನ ಆರಾಧನೆಯನ್ನು, ಸನ್ನಡತೆಯನ್ನು, ನೈತಿಕ ಮೌಲ್ಯಗಳನ್ನು, ಪರಸ್ಪರ ಪ್ರೀತಿ, ಸಹೋದರತೆ, ತಾಳ್ಮೆ ಮೊದಲಾದವುಗಳನ್ನು ಬೋಧಿಸುತ್ತದೆ. ವೈದಿಕ ಧರ್ಮಗ್ರಂಥಗಳಲ್ಲಿಯೂ ಇದೇ ಬೋಧನೆಯ ಮಿಣುಕು ನೋಟವನ್ನು ಕಾಣಬಹುದು.

● ಇಲ್ಲಿಯ ವರೆಗೆ ಕಲ್ಕಿ ಅವತಾರ ಮತ್ತು ಹ. ಮುಹಮ್ಮದ್(ಸ)ರ ಬಗ್ಗೆ ಚರ್ಚಿಸಿದ್ದೇವೆ. ಆದರೆ ಪವಿತ್ರ ವೇದಗಳಲ್ಲಿ ಇರುವ ಭವಿಷ್ಯವಾಣಿಯಂತೆ ನರಶನ್ಸ ಮತ್ತು ಕಲ್ಕಿ ಅವತಾರ ಹ. ಮುಹಮ್ಮದ್(ಸ)ರವರೇ ಆಗಿರುವರು ಎಂಬುದರ ಬಗ್ಗೆ ದೃಢ ಪುರಾವೆ ನೀಡಲಾಗಿಲ್ಲ ಎಂದು ಕೆಲವರು ವಾದಿಸಬಹುದು.

ಆದುದರಿಂದ ಪವಿತ್ರ ನರಶನ್ಸ ಮತ್ತು ಕಲ್ಕಿ ಅವತಾರಿಯ ವ್ಯಕ್ತಿತ್ವವನ್ನು ದೃಢೀಕರಿಸಲು ಮತ್ತು ಪವಿತ್ರ ವೇದಗಳಲ್ಲಿ ಇರುವ ಭವಿಷ್ಯವಾಣಿಯನ್ನು ದೃಢೀಕರಿಸಲು ನಾವು ಹಿಂದೂ ಧರ್ಮ ಗ್ರಂಥಗಳಲ್ಲಿರುವ ಈ ಕೆಳಗಿನ ಸೂಕ್ತಗಳನ್ನು ಉಲ್ಲೇಖಿಸುತ್ತಿದ್ದೇವೆ.

● ಭವಿಷ್ಯ ಪುರಾಣ ಹೇಳುತ್ತದೆ: "ಮತ್ತೊಂದು ದೇಶದಲ್ಲಿ ಓರ್ವ ಪ್ರವಾದಿಯು ಅನುಯಾಯಿಗಳೊಂದಿಗೆ ಬರಲಿರುವನು. ಅವರ ಹೆಸರು ಮಹಮದ್ ಆಗಿರುವುದು ಮತ್ತು ಅವರು ಮರುಭೂಮಿಯಲ್ಲಿ ಆಗಮಿಸುವರು."

● ಪಂಡಿತ ಧರಮ್‌ವೀರ್ ಉಪಾಧ್ಯಾಯ "ಅಂತಿಮ್ ಈಶ್ವರ್ ದೂತ್" ಎಂಬ ಪುಸ್ತಕವನ್ನು ಬರೆದಿದ್ದಾರೆ. ನ್ಯಾಷನಲ್ ಪ್ರಿಂಟಿಂಗ್ ಪ್ರೆಸ್ ದರಿಯಾ ಗಂಜ್ ನವದೆಹಲಿ 1923ರಲ್ಲಿ ಈ ಪುಸ್ತಕವನ್ನು ಪ್ರಕಟಿಸಿದೆ. ಈ ಪುಸ್ತಕದಲ್ಲಿ ಅವರು ಈ ರೀತಿ ಬರೆದಿರುವರು.

"ಕಾಗ್-ಬುಸಂದಿ ಮತ್ತು ಗರುಡ ಶ್ರೀ ರಾಮನೊಂದಿಗೆ ದೀರ್ಘ ಅವಧಿಯವರೆಗೆ ಜೊತೆಯಲ್ಲಿದ್ದರು. ಶ್ರೀರಾಮನನ್ನು ಹಿಂಬಾಲಿಸುವುದರೊಂದಿಗೆ ಶ್ರೀರಾಮನ ಬೋಧನೆಯನ್ನು ಜನತೆಗೆ ತಲುಪಿಸುತ್ತಿದ್ದರು. ತುಳಸಿ ದಾಸರು "ಸಂಗ್ರಮ್ ಪುರಾಣ"ದ ಅನುವಾದದಲ್ಲಿ ಶಂಕರ್‌ಜಿಯವರು ಭವಿಷ್ಯದ ಧರ್ಮದ ಬಗ್ಗೆ ತಮ್ಮ ಮಗನಿಗೆ ನುಡಿದಿರುವ ಭವಿಷ್ಯವಾಣಿಯನ್ನು ಉಲ್ಲೇಖಿಸಿರುವರು.

| | |
|---|---|
| यहां न पक्षपात कछु राखहुं वेद, पुराण, संत मत भाखहुं । | ಯಾವುದೇ ಪಕ್ಷಪಾತವಿಲ್ಲದೇ ಸಾಧುಗಳ, ವೇದಗಳ ಮತ್ತು ಪುರಾಣಗಳ ಬೋಧನೆಗಳನ್ನು ನಾನು ಉಲ್ಲೇಖಿಸುತ್ತೇನೆ. |
| संवत विक्रम दोऊ अनङा महाकोक नस चतुर्पतङा | ಏಳನೇಯ ಬಿಕ್ರಮಿ ಶತಮಾನದಲ್ಲಿ 4 ನಕ್ಷತ್ರಗಳ (ಸೂರ್ಯ) ಉದಯದೊಂದಿಗೆ ಅವನು ಜನಿಸುವನು |
| राजनीति भव प्रीति दिखवै आपन मत सबका समझावै । | ಅವನು ರಾಜ್ಯವನ್ನಾಳಲು ಅರ್ಹನಾಗಿರುವನು. ತರ್ಕದೊಂದಿಗೆ (ಪ್ರೀತಿ ಮತ್ತು ವಿವೇಕದೊಂದಿಗೆ) ಮತ್ತು ಶಕ್ತಿ ಪ್ರದರ್ಶನದೊಂದಿಗೆ ತನ್ನ ಬೋಧನೆಗಳನ್ನು ಮನಗಾಣಿಸುತ್ತಾನೆ. |
| सुरन चतुसुदर सतचारी । तिनको वंश भयो अति भारी | ಆತನಿಗೆ ನಾಲ್ವರು ಸಹಾಯಕರಿದ್ದು, ಅವರ ಬೆಂಬಲದ ಕಾರಣ ಆತನ ಅನುಯಾಯಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುವುದು. |
| तब तक सुन्दर मद्दिकोया । बिना महामद पार न होया । | ದಿವ್ಯಗ್ರಂಥವು ಭೂಮಿಯ ಮೇಲೆ ಇರುವವರೆಗೆ, ಮಹಮದ್‌ವಿಲ್ಲದೇ ಮುಕ್ತಿ ಪ್ರಾಪ್ತವಾಗುವುದಿಲ್ಲ. |
| तबसे मानहु जन्तु भिखारी समस्थ नाम एहि व्रतधारी । | ಅವರ ಹೆಸರನ್ನು ಉಚ್ಛರಿಸಿದ ಜನರು, ಭಿಕ್ಷುಕರು, ಕೀಟಗಳು ಮತ್ತು ಪ್ರಾಣಿಗಳು ಸೃಷ್ಟಿಕರ್ತನಿಗೆ ವಿಧೇಯರಾಗುವರು. |

| | |
|---|---|
| हर सुन्दर निर्माण न होई तुलसी वचन सत्य सच होई। | ಅವರ ನಂತರ ಯಾರೂ ಅವರಂತೆ ಹುಟ್ಟಿ ಬರುವುದಿಲ್ಲ. ತುಲಸಿ ದಾಸನ ನುಡಿಗಳು ಸತ್ಯವಾಗಿ ಪರಿಣಮಿಸುವವು. |

[ಸಂಗ್ರಾಮ್ ಪುರಾಣ್ ಸ್ಕಂದ್ 12, ಕಾಂಡ– 6, ಅನುವಾದ ಗೋಸ್ವಾಮಿ ತಲಸೀ ದಾಸ]

[ಹಝುರತ್ ಮುಹಮ್ಮದ್ ಇನ್ ಭಾರತೀಯ ಧರಮ್ ಗ್ರಂಥ್– ಡಾ। ಎಮ್.ಎ. ಶ್ರೀವಾಸ್ತವ ಪುಟ ಸಂಖ್ಯೆ 18]

ನಾಗೇಂದ್ರನಾಥ ಬಸುರವರ ಸಂಪಾದಕೀಯದ ವಿಶ್ವಕೋಶದ ಎರಡನೇ ಭಾಗದಲ್ಲಿ ಸೃಷ್ಟಿಕರ್ತ ಮತ್ತು ಹ. ಮುಹಮ್ಮದ್(ಸ)ರ ಬಗ್ಗೆ ಉಪನಿಷದ್‌ನ ಕೆಲ ಉಲ್ಲೇಖಗಳು ಈ ರೀತಿ ಇವೆ.

| | |
|---|---|
| आदल्ला बूक मेककम अल्लबूक निखादम ।।४।। | ಈ ಶ್ಲೋಕದ ಅನುವಾದವಾಗಿರುವುದಿಲ್ಲ. |
| अला यज्ञन हुत हुत्वा अल्ला सुर्य चंद्र सर्व नक्षत्रा ।।५।। | ಅಲ್ಲಾಹನನ್ನು ಯುಗಕಾಲದಿಂದಲೂ ಆರಾಧಿಸಲಾಗುತ್ತಿದೆ. ಸೂರ್ಯ, ಚಂದ್ರ, ನಕ್ಷತ್ರಗಳು ಅಲ್ಲಾಹನಿಂದಾಗಿ ಅಸ್ತಿತ್ವದಲ್ಲಿವೆ. |
| अल्लो ऋषीणां सर्व दिव्यां इन्द्रायपूर्व माया परमन्तरिक्षा।।६।। | ಅಲ್ಲಾಹ್ ಋಷಿಗಳಿಂದ ಇರುವನು. ಆತನು ಅತ್ಯಂತ ಶ್ರೇಷ್ಠನು. ಆತನು ಇಂದ್ರನಿಗಿಂತಲೂ ಮೊದಲು ಅಸ್ತಿತ್ವದಲ್ಲಿದ್ದು, ಕಾಲಕ್ಕಿಂತಲೂ ನಿಗೂಢನಾಗಿರುವನು. |
| अल्ल पृथिव्या अन्तरिक्षं विश्वरूपम् ।।७।। | ಅಲ್ಲಾಹ್ ಭೂಮಿ, ಆಕಾಶ, ಮತ್ತು ವಿಶ್ವದ ಪ್ರತಿಯೊಂದು ವಸ್ತುವಿನಲ್ಲಿ ಪ್ರಕಟಿತನಾಗಿರುವನು. |

| | |
|---|---|
| इल्लांकबर इल्लांकबर इल्लां इल्लल्लेति इल्लल्ला ।।८।। | ಅಲ್ಲಾಹ್ ಮಹಾನನು. ಅಲ್ಲಾಹ್ ಮಹಾನನು. ಆತನಿಗೆ ಸರಿ ಸಮಾನರು ಯಾರೂ ಇಲ್ಲ. |
| ओम अल्ला इल्लल्ला अनदि | ಓಂ ನ ಅರ್ಥ ಅಲ್ಲಾಹ್. ಆತನ ಮೂಲ ಮತ್ತು ಅಸ್ತಿತ್ವದ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಇಂತಹ ಮಹಾನ್ ಅಲ್ಲಾಹನ ಬಳಿ ನಾವು ಕೆಡುಕಿನ ವಿರುದ್ಧ ಸಂರಕ್ಷಣೆಗಾಗಿ ಪ್ರಾರ್ಥಿಸುತ್ತೇವೆ. |
| दे स्वरूपाय अथर्वण श्यामा हुह्री जनान पशून सिद्धान जलवरान् अदृश्टं कुरू कुरूफट | ಓ ಅಲ್ಲಾಹ್! ದುಷ್ಕರ್ಮಿಗಳನ್ನು, ದಾರಿತಪ್ಪಿಸುವ ಧಾರ್ಮಿಕ ವ್ಯಕ್ತಿಗಳನ್ನು ಮತ್ತು ನೀರಿನಲ್ಲಿರುವ ವಿಷಜಂತುಗಳನ್ನು ನಿರ್ಮೂಲನಗೊಳಿಸು. |
| असुरसंहारिणी हुं हीं अल्लो रसुल महमदरकबरस्य अल्लो | ಅಲ್ಲಾಹ್ ಕೆಡುಕಿನ ಶಕ್ತಿಗಳನ್ನು ನಿರ್ಮೂಲಗೊಳಿಸುವವನಾಗಿರುವನು. ಶ್ರೇಷ್ಠ ಮುಹಮ್ಮದ್ ಅಲ್ಲಾಹನ ಪ್ರವಾದಿಯಾಗಿರುವರು. |
| अल्लाम इल्लल्लेति इल्लल्ला | ಅಲ್ಲಾಹನಿಗೆ ಸರಿಸಮಾನರು ಯಾರೂ ಇಲ್ಲ. |

[ಈತಿ ಅಲ್ಲೋಪನಿಷತ್. ಹಝುರತ್ ಮುಹಮ್ಮದ್ ಇನ್ ಭಾರತೀಯ ಧರಮ್ ಗ್ರಂಥ್– ಡಾ। ಎಂ.ಎ. ಶ್ರೀವಾಸ್ತವ್ ಪುಟ ಸಂಖ್ಯೆ 30]

● ಗೊರಖಪುರದಲ್ಲಿರುವ ಗೀತಾ ಪ್ರೆಸ್ 'ಕಲ್ಯಾಣ್' ಪತ್ರಿಕೆಯನ್ನು ಪ್ರಕಟಿಸುತ್ತದೆ. ಅದು ಪ್ರಕಟಿಸಿರುವ ವಿಶೇಷಾಂಕ 'ಉಪನಿಷತ್ ಅಂಕ್'ನಲ್ಲಿ 220 ಉಪನಿಷತ್‌ಗಳನ್ನು ಹೆಸರಿಸಲಾಗಿದೆ. 15ನೇ ಕ್ರಮ ಸಂಖ್ಯೆಯಲ್ಲಿ ಅಲ್ಲೋಪನಿಷತ್ ಬರುತ್ತದೆ. ಡಾ| ವೇದ್ ಪ್ರಕಾಶ್ ಉಪಾಧ್ಯಯ ತಮ್ಮ ಪುಸ್ತಕ 'ವೇದಿಕ್ ಸಾಹಿತ್ಯ– ಏಕ್ ವಿವೇಚ್'ನಲ್ಲಿಯೂ 'ಅಲ್ಲೋಪನಿಷತ್' ಅನ್ನು ವಿವರಿಸಿರುವರು. ಪ್ರದೀಪ್ ಪ್ರಕಾಶನ 1989ರಲ್ಲಿ ಈ ಪುಸ್ತಕವನ್ನು ಪ್ರಕಟಿಸಿರುವರು.

● ಪವಿತ್ರ ವೇದಗಳು ಸುಮಾರು 4000 ವರ್ಷಗಳು ಹಳೆಯದಾಗಿರುವ ವೇದಗಳ ನಂತರ ಅವತೀರ್ಣಗೊಂಡ ದಿವ್ಯ ಗ್ರಂಥಗಳು ಸಹ ನರಶನ್ಸ ಅಥವಾ ಕಲ್ಕಿ ಅವತಾರ ಅಥವಾ ಹ. ಮುಹಮ್ಮದ್(ಸ)ರ ಆಗಮನದ ಬಗ್ಗೆ ಭವಿಷ್ಯವಾಣಿ ನುಡಿದಿವೆ.

**ಯಹೂದಿ ಧರ್ಮ ಗ್ರಂಥಗಳಲ್ಲಿ ಭವಿಷ್ಯವಾಣಿ.**

● ಅವರ ಸಹೋದರ ನಡುವೆ (ಮೂಸರನ್ನು) ಹೋಲುವ ಪ್ರವಾದಿಯನ್ನು ಎಬ್ಬಿಸುವೆನು. ನನ್ನ ಮಾತುಗಳನ್ನು ಅವರ ಬಾಯಿಯಲ್ಲಿ ಹಾಕುವೆನು. ನಾನು ಆದೇಶಿಸುವ ಮಾತುಗಳನ್ನು ಆತನು ಜನರಿಗೆ ತಲುಪಿಸುವನು. (ಹಳೆಯ ಒಡಂಬಡಿಕೆ ಡಿಯುಟಿರೊನೊಮಿ 18:18)

**ಕ್ರೈಸ್ತ ಧರ್ಮ ಗ್ರಂಥಗಳಲ್ಲಿ ಭವಿಷ್ಯವಾಣಿ:**

ಪವಿತ್ರ ಬೈಬಲ್‌ನಲ್ಲಿ ಯೇಸು ಕ್ರಿಸ್ತರು ಈ ರೀತಿ ನುಡಿದಿರುವರು:

ನಿಮ್ಮ ಪಶ್ಚಾತ್ತಾಪಕ್ಕಾಗಿ ಮನು ನಿನ್ನನ್ನು ನೀರಿನಿಂದ ದೀಕ್ಷಾ ಸ್ನಾನ ಮಾಡಿಸುವೆನು. ಆದರೆ ನನ್ನ ನಂತರ ಬರುವ ಪ್ರವಾದಿಯು ನನಗಿಂತ ಹೆಚ್ಚು ಸಮರ್ಥನಾಗಿರುನು. ಅವರ ಪಾದರಕ್ಷೆಯನ್ನು ಧರಿಸಲೂ ನಾನು ಯೋಗ್ಯನಲ್ಲ. ಪವಿತ್ರ ದೇವಚರರು ಮತ್ತು ಬೆಂಕಿಯ ಮೂಲಕ ನಿಮಗೆ ದೀಕ್ಷಾ ಸ್ನಾನ ನೀಡುವನು. (ಮ್ಯಾಥ್ಯೂ 3:11)

● ಪವಿತ್ರ ಬೈಬಲ್ ಹೀಬ್ರೂ ಭಾಷೆಯಲ್ಲಿ ಅವತೀರ್ಣಗೊಂಡಿದೆ. ಅಧ್ಯಾಯ– 5 (ಸೊಲೋಮನ್) 16ನೇ ಸೂಕ್ತದಲ್ಲಿ ಈ ರೀತಿ ಹೇಳಲಾಗಿದೆ. "ಇಸ್ರೇಲಿನ ಪುತ್ರಿಯರೇ, ಆತನ ಬಾಯಿಯಿಂದ ಸಿಹಿ (ಮಾತುಗಳು) ಹೊರಡುವುವು. ಆತನು ಮನೋಹರನಾಗಿರುವನು. ಮುಹಮ್ಮದ್ ನನ್ನ ಅತ್ಯಂತ ಪ್ರೀತಿ ಪಾತ್ರನು."

**ಬೌದ್ಧ ಧರ್ಮಗ್ರಂಥಗಳಲ್ಲಿ ಭವಿಷ್ಯವಾಣಿ**

● ಪವಿತ್ರ ಪುರಾಣಗಳು ಗೌತಮ ಬುದ್ಧ 23ನೇ ಅವತಾರವೆಂದು ಹೇಳುತ್ತವೆ. ಗೌತಮ ಬುದ್ಧ ತಮ್ಮ ಸೇವಕ ನಂದರಿಗೆ ಹೇಳಿದರು: "ಓ ನಂದ! ಜಗತ್ತಿಗೆ ನಾನು ಪ್ರಥಮ ಬುದ್ಧನಲ್ಲ ಮತ್ತು ಕೊನೆಯವನೂ ಅಲ್ಲ. ಇನ್ನು ಸ್ವಲ್ಪ ಕಾಲದಲ್ಲಿ ಜಗತ್ತಿಗೆ ಇನ್ನೋರ್ವ ಬುದ್ಧನು ಬರಲಿರುವನು. ಆತನು ಸತ್ಯದ ಮತ್ತು ಔದಾರ್ಯದ ಬೋಧನೆಗಳನ್ನು ನೀಡುವನು: ಆತನ ಗುಣವು ಪರಿಶುದ್ಧವೂ, ಪವಿತ್ರವೂ ಆಗಿರುವುದು. ಆತನ ಹೃದಯವು ನಿರ್ಮಲವಾಗಿರುವುದು. ಆತನು ಜ್ಞಾನವನ್ನು ಮತ್ತು ವಿವೇಕವನ್ನು ಹೊಂದಿರುವನು. ಆತನು ಸಕಲ ಜನರ ನಾಯಕನೂ ಮಾರ್ಗದರ್ಶಿಯೂ ಆಗಿರುವನು. ನಾನು ಬೋಧಿಸಿರುವಂತೆ ಸತ್ಯವನ್ನು ಆತನು ಬೋಧಿಸಿರುವನು. ಆತನು ಪರಿಶುದ್ಧ ಮತ್ತು ಪರಿಪೂರ್ಣವಾದ ಜೀವನ ಕ್ರಮವನ್ನು ಜಗತ್ತಿಗೆ ನೀಡುವನು. ಓ ನಂದ! ಆತನ ಹೆಸರು ಮೈತ್ರೀಯವಾಗಿರುವುದು. (ಗಾಸ್ಪೆಲ್ ಆಫ್ ಬುದ್ಧ– ಕಾರಸ್ ಪುಟ 217)

● ಡಾ| ವೇದ ಪಕ್ರಾಶ್ ಉಪಾಧ್ಯಾಯರು ಈ ಮೊದಲು ಉಲ್ಲೇಖಿಸಿರುವ ಎರಡು

ಪುಸ್ತಕಗಳಲ್ಲಿ, ಎಲ್ಲಾ ಧರ್ಮ ಗ್ರಂಥಗಳಲ್ಲಿ ಹೇಳಲಾಗಿರುವ ಭವಿಷ್ಯವಾಣಿಗಳು ಹ. ಮುಹಮ್ಮದ್(ಸ)ರಿಗೆ ಕುರಿತಾಗಿದೆ ಎಂದು ಸಾಬೀತು ಪಡಿಸಿರುವರು.

ಈ ಎಲ್ಲಾ ವಿವರಗಳನ್ನು ನೀಡಿರುವ ಉದ್ದೇಶ: ನಾವು ವಿದೇಶಕ್ಕೆ ಪ್ರಯಾಣ ಬೆಳೆಸಿದ್ದೇವೆ ಎಂದಿಟ್ಟುಕೊಳ್ಳೋಣ. ವಿದೇಶದಲ್ಲಿ ಸಹಜವಾಗಿ ಎಲ್ಲರೂ ಅಪರಿಚಿತರಿರುತ್ತಾರೆ. ಅವರಲ್ಲಿ ಒಬ್ಬರು ಭಾರತೀಯರಾಗಿರುವರು ಎಂದು ತಿಳಿದು ಬಂದಾಗ, ಸಹಜವಾಗಿ ನಾವು ಅವರ ಕಡೆ ಆಕರ್ಷಿತರಾಗುತ್ತೇವೆ. ಅವರ ಬಗ್ಗೆ ಏನು ತಿಳಿದಿರದಿದ್ದರೂ ಅವರು ಭಾರತೀಯರು ಎಂಬ ಏಕೈಕ ಕಾರಣದ ಮೇರೆಗೆ ಅವರ ಕಡೆಗೆ ಸ್ನೇಹದ ಹಸ್ತ ಚಾಚುತ್ತೇವೆ.

'ನಮ್ಮವರು' ಎಂಬ ಭಾವನೆ ಇಬ್ಬರು ಅಪರಿಚಿತರ ನಡುವಿನ ದೂರವನ್ನು ಕುಗ್ಗಿಸುತ್ತದೆ. ಇದೇ ರೀತಿ ಎರಡು ಧರ್ಮಗಳ ನಡುವೆ ಸಮಾನ ಅಂಶಗಳಿವೆ ಎಂಬುದು ತಿಳಿದು ಬಂದಾಗಲೂ ಎರಡೂ ಧರ್ಮೀಯರು ಆಪ್ತರಾಗುತ್ತಾರೆ.

ಈ ಅಧ್ಯಾಯದಲ್ಲಿ ಈಗಾಗಲೇ ಬಂದಿರುವ ವಿವರಣೆಗಳಿಂದ ಪವಿತ್ರ ನರಶನ್ಸ, ಕಲ್ಕಿ ಅವತಾರ ಹ. ಮುಹಮ್ಮದ್(ಸ)ರಿಗೆ ಹೋಲುತ್ತದೆಂದೆಂದೂ, ಪುರುಷ್ ಮೇಧವೆಂದರೆ ಬಕ್ರೀದ್‌ಗೆ ಸಂಬಂಧಿಸಿದ ಘಟನೆಯೆಂದೂ, ಮಕ್ತೇಶ್ವರವೆಂದರೆ ಮಕ್ಕಾ ಪಟ್ಟಣವೆಂದು ಮನುವೆಂದರೆ ಹ. ನೂಹ್(ಅ)ವೆಂದೂ, ವೇದಗಳ 80 ಶ್ಲೋಕಗಳು ಕುರ್‌ಆನಿನ 80 ಸೂಕ್ತಗಳಿಗೆ ಹೋಲುತ್ತವೆಂದೂ ತಿಳಿದು ಬರುತ್ತದೆ. ಆದುದರಿಂದ ಈ ಸತ್ಯದಿಂದ ಹಿಂದೂ ಮತ್ತು ಇಸ್ಲಾಮ್ ಧರ್ಮಗಳನ್ನು ಹತ್ತಿರ ಬರುವಂತೆ ಆಗಬೇಕು.

ಈ ವಿಷಯವನ್ನು ಜನಸಾಮಾನ್ಯರಲ್ಲಿ ಹರಡಬೇಕು. ಈ ರೀತಿ ಜನರಲ್ಲಿ ಇರುವ ಅಪನಂಬಿಕೆ, ತಪ್ಪುಕಲ್ಪನೆಗಳನ್ನು ದೂರ ಮಾಡಿ ಪರಸ್ಪರರಲ್ಲಿ ಸೌಹಾರ್ದತೆ, ಪ್ರೀತಿ, ವಿಶ್ವಾಸ, ನಂಬಿಕೆ ಮೂಡುವಂತೆ ಮಾಡಬೇಕು.

ಅಧ್ಯಾಯ– 9

# ನಾವು ಯಾರನ್ನು ಆರಾಧಿಸಬೇಕು?

## 9. To whom should we worship?

● ಭಾರತದಲ್ಲಿ ಅನೇಕ ದರ್ಗಾಗಳಿವೆ (ಮುಸ್ಲಿಮ್ ಸಂತರ ಭವ್ಯ ಸಮಾಧಿಗಳು). ಉರುಸ್‌ನ ಸಂದರ್ಭದಲ್ಲಿ ಸಹಸ್ರಾರು ಜನರು ದರ್ಗಾಗಳಿಗೆ ಬರುತ್ತಾರೆ. ಇಸ್ಲಾಮ್ ಧರ್ಮವು ನಿಧನ ಹೊಂದಿರುವ ನಂತರ ಆರಾಧನೆ ಮಾಡುವಂತೆ ಬೋಧಿಸುವುದಿಲ್ಲ. ಇದೊಂದು ಕುರುಡು ನಂಬಿಕೆಯಾಗಿದ್ದು, ಸಾಮಾನ್ಯ ಜನರಲ್ಲಿ ವ್ಯಾಪಕವಾಗಿ ಹರಡಿದೆ. ಯಾವುದೇ ಧರ್ಮವು ಕುರುಡು ನಂಬಿಕೆಗಳ ಮೇಲೆ ನೆಲೆ ನಿಲ್ಲುವುದಿಲ್ಲ. ತಪ್ಪು ಆಚರಣೆಯನ್ನು ತಪ್ಪೆಂದೇ ಹೇಳಬೇಕು. ಎಲ್ಲಾ ಜನರು ಇದನ್ನು ಆಚರಿಸಿದರೂ ಸರಿಯೇ!

● ಪ್ರವಾದಿ ಮುಹಮ್ಮದ್(ಸ) ಕಲ್ಲು, ಇಟ್ಟಿಗೆಗಳಿಂದ ಹೋರಿ ಗೋರಿ ನಿರ್ಮಿಸುವುದನ್ನು ಗೋರಿಯನ್ನು ಅಲಂಕರಿಸುವುದನ್ನು ನಿಷೇಧಿಸಿರುವರು. ಗೋರಿಯ ಮೇಲೆ ಸ್ಮಾರಕಗಳನ್ನು ನಿರ್ಮಿಸುವುದನ್ನು ಗೋರಿಯನ್ನು ಆರಾಧನಾ ಸ್ಥಳವನ್ನಾಗಿಸುವುದನ್ನೂ ನಿಷೇಧಿಸಿರುವರು.
(ಮಅರೂಫುಲ್ ಹದೀಸ್ ಭಾಗ–3, ಪುಟ 486)

● ಪ್ರವಾದಿ ಮುಹಮ್ಮದ್(ಸ)ರ ಗೋರಿಯನ್ನು ಸಾಮಾನ್ಯ ಮಣ್ಣಿನಿಂದ ನಿರ್ಮಿಸಲಾಗಿದೆ. ಗೋರಿಯನ್ನು ನೆಲದಿಂದ ಸ್ವಲ್ಪ ಎತ್ತರಿಸಲಾಗಿದೆ. ಗೋರಿಯ ಮೇಲೆ ಯಾವುದೇ ಸ್ಮಾರಕಗಳಾಗಲೀ ಅಥವಾ ಅಲಂಕಾರಿಕ ಕಟ್ಟಡವನ್ನು ನಿರ್ಮಿಸಲಾಗಿಲ್ಲ.

● ಕೆಲ ಯುಹೂದಿಗಳು ಪ್ರವಾದಿ ಮುಹಮ್ಮದ್(ಸ)ರ ಶರೀರವನ್ನು ಅಪಹರಿಸಲು ಕುತಂತ್ರ ರೂಪಿಸಿದ್ದರು. ಈ ಘಟನೆಯ ನಂತರ, ಅವರ ಗೋರಿಯ ಸುತ್ತಲೂ, ರಕ್ಷಣೆಗಾಗಿ ಕಲ್ಲು ಮತ್ತು ಸೀಸದಿಂದ ನೆಲಮಟ್ಟದಿಂದ ಭೂಮಿಯ ಕೆಳಭಾಗಕ್ಕೆ ಗೋಡೆಯನ್ನು ನಿರ್ಮಿಸಲಾಗಿದ್ದು, ಇದಕ್ಕೆ ಕಿಟಕಿ, ಬಾಗಿಲು ಇರುವುದಿಲ್ಲ. ಆದ ಕಾರಣ ಯಾರಿಗೂ ಗೋರಿಯನ್ನು ನೋಡಲೂ ಸಾಧ್ಯವಾಗುವುದಿಲ್ಲ.

● ಆರಂಭದಲ್ಲಿ ಹ. ಮುಹಮ್ಮದ್(ಸ)ರ ಗೋರಿಯು ಮಸ್ಜಿದ್ ನಬವಿಯ ಹೊರಭಾಗದಲ್ಲಿತ್ತು. ಆದರೆ ಮಸೀದಿಯನ್ನು ವಿಸ್ತರಿಸಿದಾಗ, ಗಂತ್ಯರವಿಲ್ಲ. ಗೋರಿಯನ್ನು ಸಹ ಮಸೀದಿಯ ಆವರಣದೊಳಗೆ ಸೇರಿಸಬೇಕಾಯಿತು.

● ಮಸ್ಜಿದ್ ನಬವಿಯ ಛಾವಣಿಯನ್ನು ದುರಸ್ಥಿಗೊಳಿಸಬೇಕಾದಾಗ, ಕಾರ್ಮಿಕರು ಛಾವಣಿಯನ್ನು ಹತ್ತುತ್ತಿದ್ದರು. ಪವಿತ್ರ ಗೋರಿಯ ನೇರವಾಗಿ ಛಾವಣಿಯ ಮೇಲೆ ಕಾರ್ಮಿಕರು ನಿಲ್ಲದಂತೆ ತಡೆಯಲು ಗೋರಿಯ ಮೇಲಿರುವ ಮಸೀದಿಯ ಛಾವಣಿಯನ್ನು ಗುಮ್ಮಟ ರೂಪದಲ್ಲಿ ನಿರ್ಮಿಸಲಾಗಿದೆ.

● ಮೇಲೆ ತಿಳಿಸಿರುವಂತೆ ಗೋರಿಗಳ ಮೇಲೆ ಸ್ಮಾರಕಗಳನ್ನು, ಕಟ್ಟಡಗಳನ್ನು ನಿರ್ಮಿಸುವುದನ್ನು ಇಸ್ಲಾಮ್ ನಿಷೇಧಿಸಿದೆ. ಸೌದಿ ಅರೇಬಿಯಾದಲ್ಲಿ ಎಲ್ಲಿಯೂ ಗೋರಿಗಳ ಮೇಲೆ ಸ್ಮಾರಕಗಳು ಕಾಣಸಿಗುವುದಿಲ್ಲ. ಸೌದಿ ಅರೇಬಿಯಾದ ರಾಜರ ಗೋರಿಗಳ ಮೇಲೂ ಸಹ ಸ್ಮಾರಕಗಳನ್ನು ನಿರ್ಮಿಸಿರುವುದಿಲ್ಲ. ವಾಸ್ತವಿಕತೆ ಹೀಗಿರುವಾಗ ಭಾರತದಲ್ಲಿ ಕೆಲ ಮುಸ್ಲಿಮರು ಗೋರಿಗಳನ್ನು ಆರಾಧನಾ ಸ್ಥಳವನ್ನಾಗಿಸಿಕೊಂಡಿದ್ದರೆ ಅದು ಅವರು ಮಾಡುತ್ತಿರುವ ತಪ್ಪು ಹೊರತು ಇಸ್ಲಾಮ್ ಅನುಮತಿಸಿರುವ ಆರಾಧನಾ ವಿಧಿಯಲ್ಲ.

ಹಿಂದೂ ಧರ್ಮದಲ್ಲಿ ಅನೇಕ ದೇವತೆಗಳನ್ನು ಪೂಜಿಸುವುದನ್ನು ಕಾಣುತ್ತೇವೆ. ಸಂಪತ್ತಿಗಾಗಿ ಲಕ್ಷ್ಮಿ ದೇವತೆಯನ್ನು, ಜ್ಞಾನಕ್ಕಾಗಿ ಗಣಪತಿಯನ್ನು, ವಿದ್ಯೆಗಾಗಿ ಸರಸ್ವತಿಯನ್ನು, ಶನಿ ಗ್ರಹಕ್ಕಾಗಿ ಹನುಮಂತನ್ನನು ಪೂಜಿಸಲಾಗುತ್ತದೆ.

● ಸನಾತನ ಧರ್ಮದ ಧರ್ಮ ಗ್ರಂಥಗಳನ್ನು ಪರಿಶೀಲಿಸಿ, ಧರ್ಮ ಗ್ರಂಥಗಳಲ್ಲಿ ಮೂರ್ತಿ ಪೂಜೆ ಮಾಡುವುದನ್ನು ಬೋಧಿಸಲಾಗಿದೆಯೇ? ಅಥವಾ ಇದೊಂದು ಸಂಪ್ರದಾಯವಷ್ಟೆಯೇ? ಎಂಬುದನ್ನು ನೋಡೋಣ.

● ಪವಿತ್ರ ವೇದಗಳು ಸನಾತನ ಧರ್ಮದ ಅತ್ಯಂತ ದೃಢೀಕೃತ ದಿವ್ಯ ಗ್ರಂಥಗಳಾಗಿರುವವು. ನಾನು ವೇದಗಳ ಹಾಗೂ ಇತರ ಧರ್ಮ ಗ್ರಂಥಗಳ ಅಧ್ಯಯನ ನಡೆಸಿದಾಗ, ಸನಾತನ ಧರ್ಮದಲ್ಲಿ ಮೂರ್ತಿ ಪೂಜೆಯನ್ನು ವಾಸ್ತವಿಕವಾಗಿ ನಿಷೇಧಿಸಿರುವುದು ಕಂಡು ಬಂದಿತು. ಈ ಕೆಳಗಿನ ಶ್ಲೋಕಗಳು ಇದನ್ನು ದೃಢೀಕರಿಸುತ್ತವೆ.

**1**. "ಸೃಷ್ಟಿಕರ್ತನು ಗಿಡಮರಗಳಲ್ಲಿ ಅಥವಾ ಕಲ್ಲಿನಲ್ಲಿಲ್ಲ. ನೀವು ಮಣ್ಣಿನಿಂದ ಮಾಡಿರುವ ಮೂರ್ತಿಗಳಲ್ಲಿಯೂ ಇಲ್ಲ. ಆತನು ಭಾವನೆಗಳಲ್ಲಿರುವನು. (ನೀವು ಈ ವಿಶ್ವದ ಬಗ್ಗೆ ಆಲೋಚಿಸಿದಾಗ ನಿಮಗೆ ಸೃಷ್ಟಿಕರ್ತನ ಇರುವಿಕೆಯ ಅರಿವಾಗುವುದು. ಸೃಷ್ಟಿಕರ್ತನ ಅನಿಸಿಕೆಯು ಸೃಷ್ಟಿಕರ್ತನ ಅಸ್ತಿತ್ವದ ದೊಡ್ಡ ಪುರಾವೆಯಾಗಿದೆ." (ಗರುಡ ಪುರಾಣ ಧರ್ಮಕಾಂಡ ಪ್ರೇತ ಖಂಡ)

**2**. "ಮಣ್ಣಿನಿಂದ ಮತ್ತು ಕಲ್ಲಿನಿಂದ ಮಾಡಿರುವ ಮೂರ್ತಿಗಳು ದೇವರಲ್ಲ." (ಶ್ರೀಮದ್ ಭಗವತ್ ಮಹಾ ಪುರಾಣ)

**3**. ನನ್ನ ಲಕ್ಷಣಗಳನ್ನು ಅರಿಯದ ಮೂರ್ಖರು ನನಗೆ ಆಕಾರವನ್ನು ನೀಡಿ ನನ್ನನ್ನು ಅಪಮಾನಿಸುತ್ತಾರೆ. (ಭಗವದ್ಗೀತೆ)

**4**. ಜೀವಂತ ಸೃಷ್ಟಿಗಳಲ್ಲಿ ನನ್ನ ಅಸ್ತಿತ್ವವಿರುವುದಿಲ್ಲ. ನಾನು ಜೀವಿಗಳನ್ನು ಸೃಷ್ಟಿಸಿ ಅವುಗಳ ಪೋಷಣೆಯನ್ನು ಮಾಡುತ್ತೇನೆ. ಈ ಕಾರಣ ನನ್ನ ಅಸ್ತಿತ್ವ ಅವುಗಳಲ್ಲಿ ಇರುವುದಿಲ್ಲ. (ಭಗವದ್ಗೀತೆ 9:5)

**5**. ಸೃಷ್ಟಿಕರ್ತನು ಬೆಳಕಾಗಿದ್ದು ಅದು (ವಿಶ್ವದಲ್ಲಿ) ಎಲ್ಲಾ ಕಡೆ ಇರುವುದು. (ಯರ್ಜುವೇದ 40:1)

**6**. ಭಗವಂತನ ಯಾವುದೇ ಮೂರ್ತಿ ಇಲ್ಲ. ಆತನು ಮಹೋನ್ನತನು. (ಯರ್ಜುವೇ 3:32)

**7**. ನೈಸರ್ಗಿಕ ವಸ್ತುಗಳನ್ನು ಪೂಜಿಸುವವರು (ಗಾಳಿ, ನೀರು, ಬೆಂಕಿ ಮೊದಲಾದವುಗಳು) ಅಂಧಕಾರವನ್ನು ಪ್ರವೇಶಿಸುವರು. ಸಂಭೂತಿಯನ್ನು ಪೂಜಿಸುವವರು ಅಂಧಕಾರದ ಆಳಕ್ಕೆ ಇಳಿಯುವರು. (ಸೃಷ್ಟಿಸಲ್ಪಟ್ಟ ವಸ್ತುಗಳು ಉದಾಹರಣೆಗೆ ಮೂರ್ತಿಗಳು ಮೊದಲಾದವುಗಳು)

(ಯರ್ಜುವೇದ ಸಂಹಿತ–ರಾಲ್ಫ ಟಿ.ಹೆಚ್. ಗ್ರಿಫ್ಫಿತ್ ಪುಟ 538)

**8**. ಸನಾತನ ಧರ್ಮದ ಅತ್ಯಂತ ದೃಢೀಕೃತ ಧರ್ಮಗ್ರಂಥಗಳು, ವೇದಗಳು. ವೇದಗಳು ಮೂರ್ತಿ ಪೂಜೆಯನ್ನು ನಿಷೇಧಿಸಿವೆ.

**9**. ವೇದಗಳ ನಂತರ ಸನಾತನ ಧರ್ಮದಲ್ಲಿ ದೃಢೀಕೃತ ಧರ್ಮ ಗ್ರಂಥ ಉಪನಿಷತ್ತುಗಳು. 108 ಉಪನಿಷತ್ತುಗಳಿವೆ. 108 ಉಪನಿಷತ್ತುಗಳ ಪೈಕಿ ಕೇವಲ 10 ಉಪನಿಷತ್ತುಗಳು ಮಾತ್ರ ವಿಶ್ವಾಸಾರ್ಹವೆಂದು ವಿಶ್ವಾಸಾರ್ಹ 10 ಉಪನಿಷತುಗಳು ಈ ರೀತಿ ಇವೆ.

ऐरा, केसुद, कठ, प्रशन, मंडक, मांडोक्या, एत्रेया तेत्रया, छादोग्या, बृहद अर्डक.

ಈ ಎಲ್ಲಾ 10 ಉಪನಿಷತ್ತುಗಳು ಸಹ

ಮೂರ್ತಿಪೂಜೆಯನ್ನು ನಿಷೇಧಿಸುತ್ತವೆ.

ಪವಿತ್ರ ವೇದಗಳು ಮತ್ತು ಉಪನಿಷತ್ತುಗಳು ಪ್ರಾಚೀನ ಧರ್ಮಗ್ರಂಥಗಳು. ಪುರಾಣಗಳನ್ನು ಋುಷಿಗಳು ರಚಿಸಿದ್ದು, ಅವು ಪ್ರಾಚೀನವಲ್ಲ. ಕೆಲ ಪುರಾಣಗಳು ಮೂರ್ತಿ ಪೂಜೆಯನ್ನು ಮಾಡಲು ಸಲಹೆ ಮಾಡುತ್ತವೆ. ಈ ರೀತಿಯ ಸಲಹೆಗಳಿಗೆ ಸ್ವಾಮಿ ವಿವೇಕಾನಂದರು ಕಾರಣವನ್ನು ನೀಡಿದ್ದಾರೆ.

"ಋುಷಿಗಳು ಮೂರ್ತಿ ಪೂಜೆಯ ಸಂಪ್ರದಾಯವನ್ನು ಆರಂಭಿಸಿದರು. ಭಗವಂತನನ್ನು ಊಹಿಸುವುದು ಕಷ್ಟವಾದ ಕೆಲಸವಾಗಿರುವುದರಿಂದ ಧ್ಯಾನದ ವೇಳೆ ಸುಲಭವಾಗಿ ಏಕಾಗ್ರತೆ ಉಂಟಾಗುವಂತೆ ಮಾಡಲು ಮೂರ್ತಿ ಪೂಜೆಯನ್ನು ಆರಂಭಿಸಲಾಯಿತು.

(विष्णु ऋषि पृष्ठ क्र. १४६, विवेकानंद साहीत्य अदोहोत आश्रम, पथ्थोरा गढ, दुसरी आवृत्ती १९७३)

ಆದರೆ ಭಗವದ್ಗೀತೆಯ ಈ ಶ್ಲೋಕವನ್ನು ಗಮನಿಸಿದಾಗ, ಧ್ಯಾನದ ವೇಳೆ ಏಕಾಗ್ರತೆಯನ್ನು ಸಾಧಿಸಲು ಮೂರ್ತಿಗಳ ಅವಶ್ಯಕತೆ ಇರುವುದಿಲ್ಲವೆಂಬುದು ಮನವರಿಕೆಯಾಗುತ್ತದೆ.

"ಪ್ರಾರ್ಥನೆಯನ್ನು ಮಾಡಬಯಸುವವರು ಕುತ್ತಿಗೆ ಮತ್ತು ತಲೆಯನ್ನು ನೇರವಾಗಿರಿಸಿ ಕುಳಿತುಕೊಳ್ಳಬೇಕು. ನಂತರ ಮೂಗಿನ ತುದಿಗೆ ದೃಷ್ಟಿ ಹರಿಸಬೇಕು. ಅತ್ತ ಇತ್ತ ನೋಡಬಾರದು. (ಭಗವದ್ಗೀತೆ)

ಹೀಗೆ ಮೇಲಿನ ವಿವರಣೆಗಳಿಂದ ಸನಾತನ ಧರ್ಮ ಮೂರ್ತಿ ಪೂಜೆಯನ್ನು ಬೋಧಿಸುವುದಿಲ್ಲವೆಂಬುದು ನಿಚ್ಚಳವಾಗುತ್ತದೆ. ಮೂರ್ತಿಪೂಜೆಯನ್ನು ಮಾಡುತ್ತಿರುವವರು ಕೇವಲ ಅಜ್ಞಾನದಿಂದಷ್ಟೇ ಮಾಡುತ್ತಿರುವರು.

ದೇವಿ-ದೇವತೆಗಳು: ಜನಸಾಮಾನ್ಯರು ದೇವಿ, ದೇವತೆಗಳು, ಪ್ರವಾದಿಗಳು, ದೇವಚರರು, ಜಿನ್ನ್‌ಗಳು, ಬಾಬಾ ಮೊದಲಾದವುಗಳನ್ನು ಆರಾಧಿಸುತ್ತಾರೆ. ಈ ಬಗ್ಗೆ ಧರ್ಮಗ್ರಂಥಗಲು ಏನನ್ನು ಹೇಳುತ್ತವೆ? ಎಂಬುದನ್ನು ಪರಿಶೀಲಿಸೋಣ.

ಋುಗ್ವೇದ ಹೇಳುತ್ತದೆ"

**यो देवष्वधि देव एक आसीत्।** (ऋग्वेद १०:१२१:८)

"ಎಲ್ಲಾ ದೇವತೆಗಳ ಓರ್ವ ಸೃಷ್ಟಿಕರ್ತನಿರುವನು."

ಪವಿತ್ರ ಕುರ್‌ಆನ್ ನುಡಿಯುತ್ತದೆ.

"ಇವರು ಯಾರನ್ನು ಪ್ರಾರ್ಥಿಸುತ್ತಿರುವರೋ ಅವರೇ ತಮ್ಮ ಪ್ರಭುವಿನ ಸಾಮಿಪ್ಯ ಹೊಂದಲಿಕ್ಕಾಗಿ ಮತ್ತು ಯಾರು ಅವನಿಗೆ ಹೆಚ್ಚು ನಿಕಟನಾಗುವನೆಂದು ಮಾರ್ಗೋಪಾಯ ಅವನ್ನು ಅರಸುತ್ತಿರುತ್ತಾರೆ ಮತ್ತು ಅವರು ಅವನ ಕೃಪೆಯನ್ನು ಆಶಿಸುವವರೂ ಅವನ ಯಾತನೆಯನ್ನು ಭಯಪಡುವವರೂ ಆಗಿರುತ್ತಾರೆ. (ಪವಿತ್ರ ಕುರ್‌ಆನ್– 17:57)

ಅಜಿದರೆ, ವಾಸ್ತವಿಕವಾಗಿ ವಿಗ್ರಹಗಳು ಸಂತರಾಗಿರಬಹುದು ಅಥವಾ ದೇವಚರರಾಗಿರಬಹುದು. ಆದರೆ ಇವರೂ ಸಹ ಏಕೈಕ ಸೃಷ್ಟಿಕರ್ತನನ್ನು ಆರಾಧಿಸುತ್ತಾರೆ. ಆದುದರಿಂದ ಸೃಷ್ಟಿಕರ್ತನು ಎಲ್ಲಾ ಸೃಷ್ಟಿಗಳಿಗಿಂತಲೂ ಶ್ರೇಷ್ಠನು.

ಯಜುರ್ವೇದ ಹೇಳುತ್ತದೆ:

**''न ऋते श्रान्तस्य सख्याय देग।।''** (यजुर्वेद ३३:११)

"ಪರಿಶ್ರಮವಿಲ್ಲದೇ, ದೇವತೆಗಳೂ ಸಹ ಭಗವಂತಹ ಅನುಗ್ರಹವನ್ನು ಪಡೆಯಲಾರರು."

ಮೇಲಿನ ಶ್ಲೋಕಗಳಿಂದ, ಜನ ಸಾಮಾನ್ಯರು ಆರಾಧಿಸುವ ದೇವಿ, ದೇವತೆಗಳು, ಬಾಬಾ,

ಸಂತರು, ಮಹಾಪುರುಷರು, ಪ್ರವಾದಿಗಳು ಭಗವಂತವಲ್ಲ. ಅವರಿಗೆ ಜನರಿಗೆ ಲಾಭವನ್ನುಂಟು ಮಾಡುವ ಅಥವಾ ನಷ್ಟವನ್ನುಂಟು ಮಾಡುವ ಸಾಮರ್ಥ್ಯವಿಲ್ಲ. ಅವರೂ ಸಹ ತಮ್ಮ ಮುಕ್ತಿಗಾಗಿ ಸೃಷ್ಟಿಕರ್ತನನ್ನು ಆರಾಧಿಸುತ್ತಾರೆ.

**ಅವತಾರಿಗಳು ಭಗವಂತರಲ್ಲ:**

**यदा यदा ही धर्मस्य ग्लानिर्भवति भारत ।**
**अद्भुतथानाय अर्धमस्य तदात्म्यम् सृजानम्यहम्।**
(गीता)

"ಸಾಧು ಪುರುಷರನ್ನು ಉದ್ಧರಿಸುವುದಕ್ಕಾಗಿ ಪಾಪ ಕಾರ್ಯ ಮಾಡುವವರನ್ನು ವಿನಾಶ ಮಾಡುವುದಕ್ಕಾಗಿ ಮತ್ತು ಧರ್ಮವನ್ನು ಚೆನ್ನಾಗಿ ಸ್ಥಾಪಿಸುವುದಕ್ಕಾಗಿ ನಾನು ಯುಗ ಯುಗಗಳಲ್ಲಿ ಪ್ರಕಟವಾಗುತ್ತೇನೆ."

● ಶ್ರೀಕೃಷ್ಣ ಹೀಗೆಂದು ಭಗವದ್ಗೀತೆಯಲ್ಲಿ ಹೇಳಿದ್ದಾರೆ. ಹಾಗಿದ್ದ ಮೇಲೆ ಶ್ರೀಕೃಷ್ಣನನ್ನು ಭಗವಂತನೆಂದು ಏಕೆ ಪರಿಗಣಿಸಬಾರದು?

● ಈ ಪ್ರಶ್ನೆಗೆ ಉತ್ತರಿಸಲು ದಿವ್ಯ ಗ್ರಂಥಗಳ ಸಾಹಿತ್ಯವನ್ನು ನಾವು ಅರ್ಥಮಾಡಿಕೊಳ್ಳಬೇಕು. ಅಂದರೆ ಸೃಷ್ಟಿಕರ್ತನು ಮಾನವರನ್ನು ಯಾವ ಶೈಲಿಯಲ್ಲಿ ಸಂವಹಿಸಿರುವನು? ಇಸ್ಲಾಮಿನ ಧಾರ್ಮಿಕ ಗ್ರಂಥಗಳಲ್ಲಿ ಇದನ್ನು ಪರಿಶೀಲಿಸೋಣ.

● ಪವಿತ್ರ ಕುರ್‌ಆನ್ ಹೇಳುತ್ತದೆ.

"ನೋಡಿರಿ, ನಿಮ್ಮ ಬಳಿಗೆ ಓರ್ವ ಸಂದೇಶವಾಹಕರು ಬಂದಿರುತ್ತಾರೆ. ಅವರು ನಿಮ್ಮವರಿಂದಲೇ ಆಗಿರುತ್ತಾರೆ. ನೀವು ನಷ್ಟ ಹೊಂದುವುದು ಅವರಿಗೆ ಅಸಹನೀಯವಾಗಿದೆ. ಅವರು ನಿಮ್ಮ ಯಶಸ್ಸಿಗೆ ಹಂಬಲಿಸುವವರಾಗಿದ್ದಾರೆ. ಅವರು ಸತ್ಯವಿಶ್ವಾಸಿಗಳಿಗೆ ವತ್ಸಲರೂ ಕರುಣಾಳುವೂ ಆಗಿರುತ್ತಾರೆ." (ಪವಿತ್ರ ಕುರ್‌ಆನ್: 9:128)

ಸೃಷ್ಟಿಕರ್ತನು ಹೇಳಿರುವನು: "ಸತ್ಯವಿಶ್ವಾಸಿಯು ನನಗಾಗಿ ಆರಾಧನೆಯನ್ನು ಮಾಡಿದರೆ ಮತ್ತು ನನ್ನ ಎಲ್ಲಾ ಆದೇಶಗಳನ್ನು ಪಾಲಿಸಿದರೆ, ಆತನು ಕೆಲಸ ಮಾಡುವ ಕೈ ನಾನಾಗುತ್ತೇನೆ, ಆತನು ನೋಡುವ ಕಣ್ಣಾಗುತ್ತೇನೆ..." (ಜಮಾಉಲ್‌ಫವಾಯಿದ್)

ಸೃಷ್ಟಿಕರ್ತನಿಗೆ ರೂಪವಿಲ್ಲ. ಯಾರೇ ಮಹಾತ್ಮರು ಘೋರ ತಪಸ್ಸು, ಆರಾಧನೆಗಳ ನಂತರ ಸೃಷ್ಟಿಕರ್ತನಂತೆ ರೂಪವಿಲ್ಲದ ಆಕಾರ ತಾಳಿರುವ ಘಟನೆ ಇತಿಹಾಸದಲ್ಲಿ ಜರುಗಿಲ್ಲ.

● ಹದೀಸ್‌ನಲ್ಲಿರುವಂತೆ ನಿರ್ಣಾಯಕ ದಿನದಂದು ಸೃಷ್ಟಿಕರ್ತನು ವ್ಯಕ್ತಿಯನ್ನು ಪ್ರಶ್ನಿಸುವನು. "ನಾನು ಹಸಿದಿದ್ದೆ, ಬಾಯಾರಿಕೆಯಿಂದ ಇದ್ದೆ ಮತ್ತು ರೋಗಿಯಾಗಿದ್ದೆ. ನೀನು ನನಗೆ ಉಣಬಡಿಸಲಿಲ್ಲ ಮತ್ತು ನನ್ನನ್ನು ವಿಚಾರಿಸಲಿಲ್ಲ? ವ್ಯಕ್ತಿಯು ನುಡಿಯುವನು ಓ ದೇವನೇ! ನೀನು ಸಕಲ ಜೀವಿಗಳ ಪರಿಪಾಲಕನಾಗಿರುವೆ. ನೀನು ಹಸಿವೆಯಿಂದ ಇರುವುದು ಹೇಗೆ ಸಾಧ್ಯ? ನೀನು ರೋಗಿಯಾಗುವುದು ಹೇಗೆ ಸಾಧ್ಯ? ಸೃಷ್ಟಿಕರ್ತನು ನುಡಿಯುವನು. ನನ್ನ ದಾಸನೋರ್ವನು ಹಸಿದಿದ್ದನು ಮತ್ತು ರೋಗಗ್ರಸ್ತನಾಗಿದ್ದನು. ನೀನು ಆತನ ಬಗ್ಗೆ ತಾತ್ಸಾರದಿಂದ ಇದ್ದೆ. ನೀನು ಆತನಿಗೆ ಉಣ ಬಡಿಸಿ, ಆತನ ಯೋಗಕ್ಷೇಮ ವಿಚಾರಿಸುತ್ತಿದ್ದರೆ ನೀನು ನನ್ನನ್ನು ಆ ವ್ಯಕ್ತಿಯ ಬಳಿ ಕಾಣುತ್ತಿದ್ದೆ." (ಬುಖಾರಿ)

● ಮಸೀದಿ, ದೇವಾಲಯ ಮತ್ತು ಇತರ ಆರಾಧನಾಲಯಗಳ ಹೊರಗೆ ಹೆಚ್ಚಿನ ಸಂಖ್ಯೆಯಲ್ಲಿ ಹಸಿದವರು, ರೋಗಿಗಳು ಕಾಣ ಸಿಗುತ್ತಾರೆ. ಅವರಿಗೆ ಉಣಬಡಿಸಿ, ಅವರ ಯೋಗಕ್ಷೇಮ ವಿಚಾರಿಸಿ. ಅವರ ಬಳಿ ದೇವನನ್ನು ಹುಡುಕಲು ಯತ್ನಿಸಿ. ದೇವನು ಕಾಣಸಿಗುವನೇ?

● ಕಾಲೇಜಿನ ಪರೀಕ್ಷೆಯಲ್ಲಿ ನಿಮ್ಮ ಮಗನು ಪ್ರಥಮ ರ್‍ಯಾಂಕ್ ಪಡೆದಿದ್ದಾನೆ ಎಂದಿಟ್ಟುಕೊಳ್ಳೋಣ. ನೀವು ಹೆಮ್ಮೆಯಿಂದ 'ಅವನು ನನ್ನ ಮಗ' ಎನ್ನುತ್ತೀರಿ. ಇದರ ಅರ್ಥ ನಿಮ್ಮ ಇನ್ನೋರ್ವ ಮಗ ನಿಮ್ಮ ಮಗನಲ್ಲವೆಂದೇ?

ಭಾಷಾಜ್ಞಾನ ಉಳ್ಳವರು, 'ಅವನು ನನ್ನ ಮಗ' ಎಂಬುದರ ಅರ್ಥ, 'ಅವನು ನನ್ನ ಗುಣಗಳಂತೆ ಇದ್ದಾನೆ' ಎನ್ನುತ್ತಾರೆ. ಇದೇ ರೀತಿ, ಸೃಷ್ಟಿಕರ್ತನು, ನಾನು ನನ್ನ ದಾಸನ ಕೈ ಮತ್ತು ಕಣ್ಣುಗಳಾಗುತ್ತೇನೆ ಎನ್ನುವುದರ ಅರ್ಥ ದಾಸನ ಕೈ ಮತ್ತಿ ಕಣ್ಣು ಸಂಪೂರ್ಣವಾಗಿ ಸೃಷ್ಟಿಕರ್ತನ ಆದೇಶಗಳ ಅನುಸಾರ ಉಪಯೋಗಿಸಲ್ಪಡುತ್ತವೆ ಎಂದಾಗಿದೆ.

● ಸೃಷ್ಟಿಕರ್ತನು, 'ನೀವು ಹಸಿದವನಿಗೆ ಊಣ ಬಡಿಸಿದ್ದರೆ ಮತ್ತು ರೋಗಿಯ ಯೋಗಕ್ಷೇಮ ವಿಚಾರಿಸಿದ್ದರೆ ಅವನ ಬಳಿ ನನ್ನನ್ನು ಕಾಣುತ್ತಿದ್ದೀರಿ' ಎಂಬುದರ ಅರ್ಥ, ಈ ರೀತಿ ನೀವು ವರ್ತಿಸಿದ್ದರೆ, ನೀವು ನನ್ನ ಆಪ್ತರಾಗುತ್ತಿದ್ದೀರಿ ಎಂದಾಗಿದೆ.

● ಇದೇ ರೀತಿ, 'ಪಾಪ ಕಾರ್ಯ ಮಾಡುವವರನ್ನು ವಿನಾಶ ಮಾಡುವುದಕ್ಕಾಗಿ ಮತ್ತು ಧರ್ಮವನ್ನು ಚೆನ್ನಾಗಿ ಸ್ಥಾಪಿಸುವುದಕ್ಕಾಗಿ ನಾನು ಯುಗ ಯುಗಗಳಲ್ಲಿ ಪ್ರಕಟವಾಗುತ್ತೇನೆ' ಎಂಬುದರ ಅರ್ಥ ನಾನು ಕಳುಹಿಸಿಕೊಡುವೆ. ನನ್ನ ಪ್ರತಿನಿಧಿಯು ನನ್ನ ಪ್ರವಾದಿಯಾಗಿರುತ್ತಾನೆ ಮತ್ತು ನನ್ನ ಆದೇಶಗಳನ್ನು ಅನುಷ್ಠಾನಗೊಳಿಸುತ್ತಾನೆ ಎಂಬುದಾಗಿದೆ. ಸ್ವಾಮಿ ವಿವೇಕಾನಂದ, ಪಂಡಿತ ಸುಂದರಲಾಲ್, ಡಾ। ವೇದ ಪ್ರಕಾಶ ಉಪಾಧ್ಯಾಯ, ಡಾ। ಪಿ.ಎಚ್. ಚೌಬೆ, ಡಾ। ರಮೇಶ್ ಪ್ರಸಾದ್ ಗಾರ್ಗ್, ಪಂಡಿತ್ ದುರ್ಗ ಶಂಕರ ಸತ್ಯಾರ್ಥಿ, ಶ್ರೀ. ಲಾಲ್ ಭಜತ್ ಮೊದಲಾದ ಪ್ರಖ್ಯಾತ ವ್ಯಕ್ತಿಗಳು, ವಿದ್ವಾಂಸರು ಹೊಲಿನಂತೆ ಅಭಿಪ್ರಾಯವನ್ನು ಹೊಂದಿದ್ದಾರೆ. ನೋಡಿ ಹಝರತ್ ಮುಹಮ್ಮದ್ ಆಂಡ್ ಬಾರತೀಯ ಧರ್ಮ ಗ್ರಂಥ– ಡಾ। ಎಮ್.ಎಚ್. ಶ್ರೀ. ವಾತ್ಸವ.

● ಶ್ರೀರಾಮನು 14 ವರ್ಷಗಳ ಬಹಿಷ್ಕಾರದ ಅವಧಿಯನ್ನು ಕಳೆಯುತ್ತಿದ್ದಾಗ ಹನುಮಾನನು ಶ್ರೀರಾಮನಿಗೆ, ಭಗವಂತನನ್ನು ಆರಾಧಿಸುವ ವಿಧಾನದ ಕುರಿತು ವಿಚಾರಿಸುತ್ತಾನೆ. ಆಗ ಶ್ರೀರಾಮನು, ಹನುಮಂತ, ಕಲಿಯುಗದಲ್ಲಿ ಜನರು ನಿನ್ನನ್ನು ಪೂಜಿಸಲು ಆರಂಭಿಸುತ್ತಾರೆ. ಆದುದರಿಂದ ನೀನೇ ಭಗವಂತವೆಂದು ಅಥವಾ ಮುಂದಿನ ಯುಗಗಳಲ್ಲಿ ಜನರು ನನ್ನನ್ನು ಭಗವಂತನೆಂದು ಬಗೆದು ಆರಾಧಿಸುವರು. ಆದುದರಿಂದ ನೀನು ನನ್ನನ್ನು ಪೂಜಿಸು ಎಂದು ಹೇಳಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಶ್ರೀ ರಾಮನು ಹುಮಂತನಿಗೆ ಭಗವಂತನನ್ನು ಆರಾಧಿಸುವ ವಿಧಾನವನ್ನು ಈ ರೀತಿ ವಿವರಿಸಿದನು.

प्रथमः ताराकः चयवादितिय दंड मुच्यते तीतय कुंडला।

कारम चतुर्थ अर्द्धे चन्द्रक पंच बिन्दु संयुक्त
ओउ्म मित्यज्योती रूपक। (श्री राम तत्वामृत)

"ಪ್ರಥಮವಾಗಿ ನೇರವಾಗಿ ನಿಲ್ಲಬೇಕು. ನಂತರ ದಂಡವತ ಮಾಡಬೇಕು. (ಹಣೆಯನ್ನು ನೆಲಕ್ಕೆ ತಾಗಿಸಬೇಕು) ಅದಾದ ಮೇಲೆ ಕುಂಡಲಿಯ ಜೊತೆ ನೆಲೆದ ಮೇಲೆ ಕುಳಿತುಕೊಳ್ಳಬೇಕು. ಅದರ ನಂತರ ಅರ್ಧ ಚಂದ್ರನಂತೆ ಬಾಗಬೇಕು. ತದ ನಂತರ ಕೆಳಗೆ ಕುಳಿತುಕೊಂಡು ಏಕಾಗ್ರತೆಯಿಂದ ಭಗವಂತನ ಧ್ಯಾನ ಮಾಡಬೇಕು."

ಇದರ ಅರ್ಥ ನಿರಾಕಾರನಾದ ಭಗವಂತನ ಆರಾಧನೆ ಮಾಡುವುದಾಗಿದೆ.

▼ ▼ ▼ ▼ ▼ ▼ ▼

ಅಧ್ಯಾಯ– 10

# ಇಸ್ಲಾಮ್ ಎಚಿದರೇನು?

## 10. What is Islam?

● ಸೃಷ್ಟಿಕರ್ತನಾದ ಅಲ್ಲಾಹನಿಗೆ ನಿಶ್ಯರ್ಥ ಮತ್ತು ಸಂಪೂರ್ಣ ಶರಣಾಗತಿಗೆ ಇಸ್ಲಾಮ್‌ವೆನ್ನುತ್ತಾರೆ.

● ಅಲ್ಲಾಹನು ಜನರಿಗೆ ನೀಡಿರುವ ಆದೇಶಗಳೇನು? ಅಲ್ಲಾಹನು ಮುಖ್ಯವಾಗಿ ಜನರಿಗೆ ಐದು ಆದೇಶಗಳನ್ನು ನೀಡಿರುವನು.

**1**. ಸೃಷ್ಟಿಕರ್ತನಾದ ಅಲ್ಲಾಹನನ್ನು ಏಕೈಕನೆಂದು ಪರಿಗಣಿಸಿ ಕೇವಲ ಆತನನ್ನು ಮಾತ್ರ ಆರಾಧಿಸುವುದು ಮತ್ತು ಆರಾಧನೆಯಲ್ಲಿ ಇತರ ಯಾರನ್ನೂ ಪಾಲುದಾರಗೊಳಿಸದಿರುವುದು.

**2**. ಅಲ್ಲಾಹನ ಆರಾಧನೆ ಮಾಡುವುದು.

**3**. ಕೆಡುಕಿನ ಕಾರ್ಯಗಳಿಂದ ದೂರವಿರುವುದು ಮತ್ತು ಸಚ್ಚಾರಿತ್ರ್ಯವಂತರಾಗುವುದು.

**4**. ಸಮಾಜದ ದೀನ, ದಲಿತರಿಗೆ ಸಹಾಯ ಮಾಡುವುದು.

**5**. ಜೀವನದಲ್ಲಿ ಒಮ್ಮೆ ಆರ್ಥಿಕ ಸಾಮರ್ಥ್ಯವುಳ್ಳವರು ಹಜ್ಜ್ ನಿರ್ವಹಿಸುವುದು.

● ಅಲ್ಲಾಹನ ಮೇಲಿನ ಆದೇಶಗಳನ್ನು ಒಂದೊಂದಾಗಿ ಅಧ್ಯಯನ ಮಾಡೋಣ.

● ಸೃಷ್ಟಿಕರ್ತನಾದ ಅಲ್ಲಾಹನನ್ನು ಏಕೈಕನೆಂದು ಪರಿಗಣಿಸುವುದು ಮತ್ತು ಆತನ ಆದೇಶಗಳ ಪಾಲನೆ ಮಾಡುವುದು.

ಉಪನಿಷತ್ ನುಡಿಯುತ್ತದೆ.

● "ಆತನು (ಸೃಷ್ಟಿಕರ್ತನು) ಏಕೈಕನು. ಆತನ(ದೈವತ್ವದಲ್ಲಿ) ಯಾರೂ ಪಾಲುದಾರರಿಲ್ಲ." (ಚಂದೋಗ್ಯ ಉಪನಿಷತ್ 6:2:1)

ಋಗ್ವೇದ ನುಡಿಯುತ್ತದೆ.

● "ಓ ವಿಶ್ವಾಸಿಗಳೇ! ಆತನಲ್ಲದೇ (ಸೃಷ್ಟಿಕರ್ತ) ಇನ್ನಾರ ಆರಾಧನೆಯನ್ನು ಮಾಡಬೇಡಿ. ಆತನು ಏಕೈಕನಾಗಿರುವನು." (ಋಗ್ವೇದ 8:1:1)

● ಬ್ರಹ್ಮಸೂತ್ರ ಹೇಳುತ್ತದೆ: "ಸೃಷ್ಟಿಕರ್ತನು ಏಕೈಕನಾಗಿರುವನು. ಆತನಲ್ಲದೇ ಇನ್ನಾರೂ ಆರಾಧ್ಯರಿಲ್ಲ. ಕಿಂಚತ್ತೂ ಇಲ್ಲ."

● ಅಥರ್ವವೇದ ಹೇಳುತ್ತದೆ: "ಆ ದೇವನು ಏಕೈಕನು" (ಅಥರ್ವವೇದ 10:9:29)

● ಪವಿತ್ರ ಬೈಬಲ್‌ನಲ್ಲಿ ಸೃಷ್ಟಿಕರ್ತನು ಹೇಳಿರುವನು; "ನಾನು ದೇವರು. ನಾನಲ್ಲದೇ ಮತ್ತಾವ ದೇವರಿಲ್ಲ." (ಪವಿತ್ರ ಬೈಬಲ್ 46:9, ಡಿಯೊಟಿರೊನೊಮಿ 6:4 ಮಾರ್ಕ್ 12:29:32)

● ಪವಿತ್ರ ಕುರ್‌ಆನ್ ಹೇಳುತ್ತದೆ: "ಏಕೈಕ ಆರಾಧ್ಯನಲ್ಲದೇ ಇನ್ನಾರೂ ಆರಾಧನೆಗೆ ಅರ್ಹರಿಲ್ಲ." (ಪವಿತ್ರ ಕುರ್‌ಆನ್ 48:19)

ಸೃಷ್ಟಿಕರ್ತನು ನೇರವಾಗಿ ಜನರೊಂದಿಗೆ ಮಾತಾಡುವುದಿಲ್ಲ. ಆತನು ಸಂದೇಶವಾಹಕರ ಮೂಲಕ ಮತ್ತು ದಿವ್ಯಗ್ರಂಥಗಳನ್ನು ಅವತೀರ್ಣಗೊಳಿಸುವ ಮೂಲಕ ಜನರಿಗೆ ಬೋಧನೆಗಳನ್ನು ತಲುಪಿಸುತ್ತಾನೆ.

ಸಂದೇಶವಾಹಕರು ಸೃಷ್ಟಿಕರ್ತನ ನೈಜ ಪ್ರತಿನಿಧಿಗಳಾಗಿರುವರು ಎಂಬುದರ ಬಗ್ಗೆ ದೃಢ ವಿಶ್ವಾಸ ತಾಳಬೇಕು. ಆಗಷ್ಟೇ ಸೃಷ್ಟಿಕರ್ತನ ಬೋಧನೆಗಳು ಪರಿಣಾಮಕಾರಿಯಾಗಲು ಸಾಧ್ಯ. ಸೃಷ್ಟಿಕರ್ತನ ಅಂತಿಮ ಪ್ರವಾದಿ

ಕಲಿಯುಗದಲ್ಲಿ ಕಲ್ಕಿ ಅವತಾರ ಅಥವಾ ಪ್ರವಾದಿ ಮುಹಮ್ಮದ್(ಸ) ಆಗಿರುವರು.

ಎಲ್ಲಾ ಧರ್ಮಗಳ ಧರ್ಮ ಗ್ರಂಥಗಳ ಅನುಸಾರ, ಭಗವಂತನು ಏಕೈಕನಾಗಿರುವನು. ಮುಂದುವರೆದು ಎಲ್ಲಾ ಧರ್ಮಗ್ರಂಥಗಳು ಹ. ಮುಹಮ್ಮದ್(ಸ) ಸೃಷ್ಟಿಕರ್ತನ ಅಂತಿಮ ಪ್ರವಾದಿಯಾಗಿರುವರು ಎಂದು ಭವಿಷ್ಯವಾಣಿ ನುಡಿದಿವೆ. ಆದುದರಿಂದ ಭಗವಂತನ ಈ ಮೊದಲ ಆದೇಶವನ್ನು ನಾವು ಮನಃಪೂರ್ವಕವಾಗಿ ಒಪ್ಪಿಕೊಳ್ಳಬೇಕು.

ಮೇಲಿನ ಸತ್ಯವನ್ನು ನಾವು ಹೃದಯ ಪೂರ್ವಕವಾಗಿ ಒಪ್ಪಿ, ಮೌಖಿಕವಾಗಿಯೂ ಉಚ್ಛರಿಸಬೇಕು. ಈ ಮೌಖಿಕ ಉಚ್ಚಾರ ಯಾವುದೇ ಭಾಷೆಯಲ್ಲಿ ಆಗಬಹುದು. ಅರಬಿ ಭಾಷೆಯಲ್ಲಿ ಇದನ್ನು ಹೀಗೆ ಹೇಳಲಾಗುತ್ತದೆ.

● "ಲಾ ಇಲಾಹ ಇಲ್ಲಲ್ಲಾಹ್. ಮುಹಮ್ಮದುರ್‍ರಸೂಲುಲ್ಲಾಹ್."
(ಸಹಿ ಬುಖಾರಿ ಭಾಗ–2, ಹದೀಸ್ ಸಂಖ್ಯೆ–7)

ಇದರ ಅರ್ಥ: ಅಲ್ಲಾಹನಲ್ಲದೇ ಅನ್ಯ ಆರಾಧ್ಯರಿಲ್ಲ. ಮುಹಮ್ಮದ್(ಸ) ಅಲ್ಲಾಹನ ಪ್ರವಾದಿಯಾಗಿರುವರು. ಇದಕ್ಕೆ ಕಲಿಮಃವೆಂದೂ ಹೇಳುತ್ತಾರೆ. ಕಲಿಮಃವೆಂದರೆ ವಾಕ್ಯ ಅಥವಾ ಮಾತು.

ಸೃಷ್ಟಿಕರ್ತನ ಎರಡನೆಯ ಆದೇಶ:

"ಅಲ್ಲಾಹನ ಆರಾಧನೆ ಮಾಡುವುದು."

**ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹ್ ಈ ರೀತಿ ಹೇಳಿರುವನು.**

● "ನಾನು ಮನುಷ್ಯರನ್ನು ಮತ್ತು ಜಿನ್ನ್‌ಗಳನ್ನು ನನ್ನ ಆರಾಧನೆಗಾಗಿ ಸೃಷ್ಟಿಸಿದ್ದೇನೆ." (ಪವಿತ್ರ ಕುರ್‌ಆನ್: 51:56)

● ಪ್ರವಾದಿ ಮುಹಮ್ಮದ್(ಸ) ನುಡಿದಿರುವರು: ಅಲ್ಲಾಹ್ ಹೇಳುವನು, ಓ ಆದರಮ ಸಂತತಿಯೇ! ನನ್ನ ಆರಾಧನೆಯಲ್ಲಿ ತೊಡಗಿರಿ. ನಾನು ನಿಮಗೆ ಸಮೃದ್ಧಿಯನ್ನು ನೀಡುವೆನು ಮತ್ತು ನಿಮ್ಮ ಸಂಕಷ್ಟಗಳನ್ನು ಕೊನೆಗೊಳಿಸುವೆನು. ನೀವು ಈ ರೀತಿ ಮಾಡಿದ್ದರೆ, ನಿಮ್ಮನ್ನು ಸದಾ ಬಿಡುವಿಲ್ಲದಂತೆ ಮಾಡುವೆನು ಮತ್ತು ನಿಮ್ಮ ದಾರಿದ್ರ್ಯ, ಸಂಕಷ್ಟಗಳು ಎಂದೂ ಕೊನೆಗೊಳ್ಳುವುದಿಲ್ಲ. (ವರದಿ: ಇಬ್ನ್ ಮಾಜಃ)

ಪವಿತ್ರ ಬೈಬಲ್ ನುಡಿಯುತ್ತದೆ:

"ಸಚ್ಚಾರಿತ್ರ್ಯವಂತನು ಖರ್ಜೂರದ ಮರದಂತೆ ಏಳಿಗೆ ಹೊಂದುತ್ತಾನೆ." (ಪವಿತ್ರ ಬೈಬಲ್ ಪಿ.ಎಸ್. 92:12)

ಋಗ್ವೇದ ಹೇಳುತ್ತದೆ:

● "ಭಗವಂತನಲ್ಲಿ ವಿಶ್ವಾಸವಿಡದವನು ಭಗವಂತನ ಶತ್ರುವಾಗಿರುವನು. ಭಗವಂತನು ತನ್ನ ಶತ್ರುಗಳ ಸಂಪತ್ತನ್ನು ನಾಶಗೊಳಿಸುವನು." (ಋಗ್ವೇದ 2:12:5)

**ಆರಾಧಿಸುವ ಕ್ರಮವೇನು?**

ಶ್ರೀರಾಮನು 14 ವರ್ಷಗಳ ಬಹಿಷ್ಕಾರದ ಕಾಲವನ್ನು ಕಳೆಯುತ್ತಿದ್ದಾಗ ಹನುಮಾನನು ಶ್ರೀರಾಮನಿಗೆ ಭಗವಂತನನ್ನೂ ಆರಾಧಿಸುವ ವಿಧಾನದ ಕುರಿತು ವಿಚಾರಿಸುತ್ತಾನೆ. ಆಗ ಶ್ರೀರಾಮನು, ಹನುಮಂತ ಭಗವಂತನನ್ನು ಆರಾಧಿಸುವ ವಿಧಾನವನ್ನು ಈ ರೀತಿ ವಿವರಿಸಿದನು.

प्रथमः ताराकः चयवादितिय दंड मुच्यते तीतय कुंडला कारमचतुर्थ अर्धे चन्द्रकः
पंचं बिन्दू संयुक्तः ओम मित्यजयोती रूपक
(Sri Ram Tatwamreet)

(ಶ್ರೀರಾಮ ತತ್ವಮ್‌ರೀತ್)

"ಪ್ರಥಮವಾಗಿ ನೇರವಾಗಿ ನಿಲ್ಲಬೇಕು. ನಂತರ ದಂಡವತ ಮಾಡಬೇಕು. (ಹಣೆಯನ್ನು ನೆಲಕ್ಕೆ ತಾಗಿಸಬೇಕು. ನಂತರ ಕುಂಡಲಿಯ ಜೊತೆ

ನೆಲದ ಮೇಲೆ ಕುಳಿತುಕೊಳ್ಳಬೇಕು. ಅದರ ನಂತರ ಅರ್ಧ ಚಂದ್ರನಂತೆ ಭಾಗಬೇಕು. ತದ ನಂತರ ಕೆಳಗೆ ಕುಳಿತುಕೊಂಡು ಏಕಾಗ್ರತೆಯಿಂದ ಭಗವಂತನ ಧ್ಯಾನ ಮಾಡಬೇಕು.

● 'ಸಾಷ್ಟಾಂಗ' ಒಂದು ವಿಧದ ಆರಾಧನೆಯ ಕ್ರಮವಾಗಿದೆ. ದೇವರನ್ನು ಆರಾಧಿಸುವಾಗ ನಮ್ಮ ದೇಹದ ಎಂಟು ಅಂಗಗಳು ನೆಲವನ್ನು ಸ್ಪರ್ಶಿಸುತ್ತವೆ. ಈ ಅಂಗಗಳು ಯಾವುದೆಂದರೆ ಹಣೆ, ಮೂಗು, ಎರಡು ಹಸ್ತಗಳು, ಎರಡು ಮೊಣಕಾಲುಗಳು ಮತ್ತು ಎರಡು ಕಾಲುಗಳು.

(ಅಷ್ಟವೆಂದರೆ ಎಂಟು, ಅಂಗವೆಂದರೆ ದೇಹದ ಅಂಗಗಳು. ಸಾಷ್ಟಾಂಗವೆಂದರೆ ದೇಹದ ಎಂಟು ಅಂಗಗಳು ನೆಲಕ್ಕೆ ಸ್ಪರ್ಶಿಸುವ ಆರಾಧನಾ ವಿಧಿ) ಸಾಷ್ಟಾಂಗಕ್ಕೆ ಅರಬಿ ಭಾಷೆಯಲ್ಲಿ ಸಜದಃವೆನ್ನುತ್ತಾರೆ. ಬೈಬಲ್‌ನಲ್ಲಿಯೂ ಇದರ ವಿವರಣೆ ಇದೆ. (ಜೆನೆಸಿಸ್ 17:3, ನಂಬರ್ಸ್ 20:6, ಜೋಸುವ 5:14, ಮ್ಯಾಥ್ಯೂ: 26:39)

● ಇಸ್ಲಾಮ್ ಧರ್ಮದಲ್ಲಿರುವ 'ನಮಾಝ್' ಸಾಷ್ಟಾಂಗ ಮತ್ತು ಶ್ರೀರಾಮನು ಹನುಮಂತನಿಗೆ ಬೋಧಿಸಿರುವ ಆರಾಧನಾ ವಿಧಿಯ ಮಿಶ್ರಣದಂತಿದೆ.

● ಸಾಮಾನ್ಯವಾಗಿ ವಿವಿಧ ಧರ್ಮಗಳಲ್ಲಿ ಪ್ರತಿದಿನ ಮೂರು ಸಲ ಪ್ರಾರ್ಥನೆ ಮಾಡಲು ಸಲಹೆ ನೀಡುತ್ತವೆ. ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಂಜೆ. ಇಸ್ಲಾಮ್ ಧರ್ಮದಲ್ಲಿ ಪ್ರತಿದಿನ ಐದು ಸಲ ನಮಾಝ್ ಮಾಡಲು ಆಜ್ಞಾಪಿಸಲಾಗಿದೆ. ನಮಾಝ್ ನಿರ್ವಹಿಸುವ ವೇಳೆ ಪ್ರಾತಃಕಾಲ (ಸೂರ್ಯ ಉದಯಿಸುವ ಮೊದಲು) (ಫಜರ್) ಮಧ್ಯಾಹ್ನ (ಝುಹರ್), ಸಂಜೆ (ಅಸರ್), ಸೂರ್ಯಾಸ್ತಮದ ವೇಳೆ (ಮಗ್‌ರಿಬ್) ಮತ್ತು ರಾತ್ರಿಯ ವೇಳೆ (ಇಶಾ).

● ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹ್, ಸಚ್ಚಾರಿತ್ರ್ಯವಂತರಿಗೆ ಜೀವನದಲ್ಲಿ ನೆಮ್ಮದಿ ಮತ್ತು ಸಮೃದ್ಧಿ ನೀಡುವ ವಾಗ್ದಾನ ಮಾಡಿರುವನು. (ಪವಿತ್ರ ಕುರ್‌ಆನ್: 16:97)

ಧಾರ್ಮಿಕತೆ ಜೀವನದಲ್ಲಿ ನೆಮ್ಮದಿ ಮತ್ತು ಸಮೃದ್ಧಿಯನ್ನು ತರುತ್ತದೆ. ನಾವು ನಿಷ್ಕಪಟತೆಯಿಂದ, ಶ್ರದ್ಧೆಯಿಂದ ಆರಾಧನೆಯನ್ನು ಮಾಡಬೇಕು.

**ಸೃಷ್ಟಿಕರ್ತನ ಮೂರನೆಯ ಆದೇಶ:**

ಕೆಡುಕಿನ ಕಾರ್ಯಗಳಿಂದ ದೂರವಿರುವುದು ಮತ್ತು ಸಚ್ಚಾರಿತ್ರ್ಯವಂತರಾಗುವುದು.

● ಕೆಡುಕಿನ ಕಾರ್ಯಗಳಿಂದ ದೂರವಿರುವುದು ಹೇಗೆ?

ಜನರು ಕುಡುಕರು ಮತ್ತು ಜೂಜಾಡುವವರು ಏಕಾಗುತ್ತಾರೆ? ಏಕೆಂದರೆ ಜನರಿಗೆ ತಮ್ಮನ್ನು ನಿಯಂತ್ರಣದಲ್ಲಿಡಲು ಶಕ್ತಿಯು ಮನೋಬಲವಿರುವುದಿಲ್ಲ. ಮನೋಬಲವಿರುವವರಿಗೆ ಮಾತ್ರ ಕೆಡುಕುಗಳಿಂದ ದೂರವಿರಲು ಮತ್ತು ಸಚ್ಚಾರಿತ್ರ್ಯವಂತನಾಗಲು ಸಾಧ್ಯ.

● ಮನೋಬಲವನ್ನು ಬೆಳೆಸಲು ಉಪವಾಸ ವ್ರತದ ಆಚರಣೆ ಮಾಡಬೇಕು. ಮನುಸ್ಮೃತಿಯಲ್ಲಿ ಒಂದು ತಿಂಗಳ ಉಪವಾಸವನ್ನಿಡಲು ಆದೇಶಿಸಲಾಗಿದೆ. ಬೈಬಲ್ ಸಹ ಉಪವಾಸವನ್ನು ಆಚರಿಸಲು ಆದೇಶಿಸಿದೆ. ಕುರ್‌ಆನ್ ಸಹ ಒಂದು ತಿಂಗಳ ಉಪವಾಸವನ್ನು ಆಚರಿಸಲು ಆದೇಶಿಸಿದೆ. "ಸತ್ಯವಿಶ್ವಾಸಿಗಳೇ, ಗತ ಸಮುದಾಯದವರ ಮೇಲೆ ಉಪವಾಸವನ್ನು ಕಡ್ಡಾಯಗೊಳಿಸಿದಂತೆ ನಿಮ್ಮಮೇಲೂ ಸಹ ಉಪವಾಸವನ್ನು ಕಡ್ಡಾಯಗೊಳಿಸಲಾಗಿದೆ. ನಿಮ್ಮಲ್ಲಿ ದೇವಭಯ ಉಂಟಾಗುವುದೆಂದು ಆಶಿಸಲಾಗಿದೆ." (ಪವಿತ್ರ ಕುರ್‌ಆನ್ 2:183)

ಉಪವಾಸದ ಉದ್ದೇಶ

ಸಚ್ಚಾರಿತ್ರ್ಯವಂತನಾಗಲು ಮನೋಬಲವನ್ನು ಸುದೃಢಗೊಳಿಸುವುದಾಗಿದೆ. ಮನುಷ್ಯರನ್ನು ವಿನಾ ಕಾರಣ ಹಸಿವೆಯಿಂದ, ಬಾಯಾರಿಕೆಯಿಮದ ಬಳಲುವಂತೆ ಮಾಡುವುದಲ್ಲ. ಸೃಷ್ಟಿಕರ್ತನು ಮಹಾ ಕರುಣಾಮಯಿಯಾಗಿದ್ದು ಆತನು ಜನರನ್ನು ಪೀಡಿಸಬಯಸುವುದಿಲ್ಲ.

ಉಪವಾಸ ವ್ರತದ ಆಚರಣೆಯಲ್ಲಿ ಸೂರ್ಯೋದಯದ ಮೊದಲಿನಿಂದ ಸೂರ್ಯಾಸ್ತಮದ ತನಕ ಅನ್ನ, ಪಾನೀಯಗಳಿಂದ ದೂರ ಉಳಿಯಲಾಗುತ್ತದೆ. ಉಪವಾಸದ ಸಮಯದಲ್ಲಿ ಲೈಂಕಿಕ ಕ್ರಿಯೆಗಳಿಂದಲೂ ದೂರವಿರಬೇಕು. ಇದರ ಜೊತೆಗೆ ಉಪವಾಸಿಗನು ಸುಳ್ಳು ಹೇಳುವುದನ್ನು, ಜಾತಿ ಹೇಳುವುದನ್ನು, ವಂಚನೆ ಮೊದಲಾದವುಗಳನ್ನು ವರ್ಜಿಸಬೇಕು.

ಸ್ವಇಚ್ಛೆಯಿಂದ ಹಸಿವನ್ನು ಸಹಿಸುವುದು ಬಹಳ ಕಷ್ಟಕರ ಕೆಲಸವಾಗಿರುವುದು. ಈ ರೀತಿ ಹಸಿವನ್ನು ಸಹಿಸುವ ವ್ಯಕ್ತಿ ಸುಲಭವಾಗಿ ಕೆಡುಕಿನ ಕಾರ್ಯಗಳಿಂದ ದೂರವಿರಬಹುದು.

**4. ಸೃಷ್ಟಿಕರ್ತನ ನಾಲ್ಕನೇಯ ಆದೇಶ.**

ಸಮಾಜದ ದೀನ ದಲಿತರಿಗೆ ಸಹಾಯ ಮಾಡುವುದು.

ಸೃಷ್ಟಿಕರ್ತನು ಸಕಲ ಜೀವಿಗಳ ಪರಿಪಾಲಕನಾಗಿರುವನು. ಹಲವೊಮ್ಮೆ ಭಗವಂತನು ಜನರಿಗೆ ನೆರವನ್ನು ನೀಡಲು ಮೂರನೆಯ ವ್ಯಕ್ತಿಯನ್ನು ಆಯ್ದುಕೊಳ್ಳುತ್ತಾನೆ. ಅಂದರೆ ಒಬ್ಬ ವ್ಯಕ್ತಿಗೆ, ಮತ್ತೊಬ್ಬ ವ್ಯಕ್ತಿಯಿಂದ ನೆರವನ್ನು ನೀಡುತ್ತಾರೆ.

ಇಸ್ಲಾಮ್ ಧರ್ಮದಲ್ಲಿ ಝಕಾತ್ ಅನ್ನು ಕಡ್ಡಾಯಗೊಳಿಸಲಾಗಿದೆ. ಇದು ಶ್ರೀಮಂತರಿಗೆ ಮಾತ್ರ ಅನ್ವಯಿಸುತ್ತದೆ. ಓರ್ವನ ಬಳಿ ಎರಡೂವರೆ ತೊಲೆ ಬಂಗಾರ ಅಥವಾ ಅದಕ್ಕೆ ಸಮ ಹಣವಿದ್ದು, ಒಂದು ವರ್ಷದ ಅವಧಿ ಕಳೆದಿದ್ದರೆ, ವ್ಯಕ್ತಿಗೆ ಝಕಾತ್ ನೀಡುವುದು ಕಡ್ಡಾಯವಾಗುತ್ತದೆ. ಅವನ ಬಳಿ ಇರುವ ಬಂಗಾರ ಅಥವಾ ಹಣದ ಎರಡೂವರೆ ರಝಕಾತ್ ರೂಪದಲ್ಲಿ ತೆಗೆದು ಸಂಬಂಧಿಕರಲ್ಲಿರುವ ಬಡವರಿಗೆ ನೀಡಬೇಕು. ಸಂಬಂಧಿಕರಿಗೆ ನೀಡಿದ ನಂತರ, ನೆರೆ ಹೊರೆಯವರಿಗೆ ನಿಡಬಹುದು. ಝಕಾತ್ ಜನರ ಬಳಿಯಲ್ಲಿರುವ ಸಂಪತ್ತಿನಲ್ಲಿ ಬಡವರ ಹಕ್ಕಾಗಿರುವುದು.

● ಝಕಾತ್ ಅನ್ನು ಈ ಕೆಳಕಂಡವರಿಗೆ ನೀಡಬಹುದು.

**1.** ಬಡ ಜನರಿಗೆ

**2.** ಅಗತ್ಯವುಳ್ಳವರಿಗೆ (ಸಮಾಜದ ಕುಲೀನ ವರ್ಗಕ್ಕೆ ಸೇರಿರಬಹುದು. ಆದರೆ ಆರ್ಥಿಕ ತೊಂದರೆಗೆ ಸಿಲುಕಿರಬಹುದು.)

**3.** ಝಕಾತ್ ಸಂಗ್ರಹಿಸಿ, ವಿತರಣೆ ಮಾಡುವ ಕಾರ್ಯದಲ್ಲಿ ತೊಡಗಿರುವವರಿಗೆ ಸಂಬಳದ ರೂಪದಲ್ಲಿ.

**4.** ಒಳಿತಿನ ಕಾರ್ಯಗಳಿಗೆ ಜನರನ್ನು ಆಕರ್ಷಿಸಲು

**5.** ಗುಲಾಮರನ್ನು ಬಿಡುಗಡೆಗೊಳಿಸಲು

**6.** ಸಾಲದಲ್ಲಿ ಸಿಲುಕಿದವರಿಗೆ ಸಾಲದಿಮದ ಮುಕ್ತಗೊಳಿಸಲು

**7.** ಪ್ರಯಾಣಿಕರಿಗೆ (ಪ್ರಯಾಣಿಕರು ಪ್ರಯಾಣದ ವೇಳೆ ಹಣವನ್ನು ಕಳೆದುಕೊಂಡು ಕಷ್ಟದಲ್ಲಿದ್ದರೆ)

**8.** ಸೃಷ್ಟಿಕರ್ತನ ಸಂದೇಶವನ್ನು ಜನರಿಗೆ ತಲುಪಿಸಲು. (ಪವಿತ್ರ ಕುರ್‌ಆನ್ 9:150)

ಈ ಪುಸ್ತಕದ 'ದಿವ್ಯ ಶಿಕ್ಷೆ' ಅಧ್ಯಾಯದಲ್ಲಿ ದಾನ ಮಾಡುವುದನ್ನು ಉತ್ತೇಜಿಸುವ ಅನೇಕ

ವೇದಗಳ ಶ್ಲೋಕಗಳನ್ನು ಉಲ್ಲೇಖಿಸಲಾಗಿದೆ. ಈ ಶ್ಲೋಕಗಳಲ್ಲಿ, ದಾನ–ಧರ್ಮ ಮಾಡಲು ನಿರಾಕರಿಸುವವರಿಗೆ ಘೋರ ಶಿಕ್ಷೆಯ ಎಚ್ಚರಿಕೆಯನ್ನು ನೀಡಲಾಗಿದೆ. ಬೈಬಲ್‌ನಲ್ಲಿಯೂ ಸಹ ಹಾಗೂ ಧರ್ಮವನ್ನು ಪ್ರೋತ್ಸಾಹಿಸುವ ಅನೇಕ ಸೂಕ್ತಗಳಿವೆ.

**5. ಸೃಷ್ಟಿಕರ್ತನ ಐದನೇಯ ಆದೇಶ:**

**ಹಜ್ಜ್ ನಿರ್ವಹಿಸುವುದು:**

● "ಹಝ್ರತ್ ನೂಹ್(ಅ) ಅಥವಾ ಮನು" ಅಧ್ಯಾಯದಲ್ಲಿ ಮಹಾ ಪ್ರವಾಹದ ಬಗ್ಗೆ ನಾವು ಅಧ್ಯಯನ ನಡೆಸಿದ್ದೇವೆ. ಮಹಾ ಪ್ರವಾಹದ ನಂತರ ಹ. ನೂಹ್(ಅ) ಮತ್ತು ಅವರ ಮಕ್ಕಳ ಸಂತತಿಯು ಜಗತ್ತಿನಲ್ಲೆಲ್ಲಾ ಹಬ್ಬಿತು. ಈ ಹಿನ್ನೆಲೆಯಲ್ಲಿ, ಎಲ್ಲಾ ದೇಶಗಳಲ್ಲಿ ಜನಾಂಗಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ಮಹಾ ಪ್ರವಾಹದ ಒಂದೇ ವಿವರ ಲಭ್ಯವಿರಬೇಕಿತ್ತು. ದುರದೃಷ್ಟವಷಾತ್, ಮಹಾ ಪ್ರವಾಹದ ಬಗ್ಗೆ ಎಲ್ಲಾ ಜನಾಂಗಗಳಲ್ಲಿ ಉಲ್ಲೇಖವಿದ್ದರೂ ವಿವರಗಳಲ್ಲಿ ಬಹಳಷ್ಟು ಭಿನ್ನತೆ ಕಂಡು ಬರುತ್ತದೆ. ಇದಕ್ಕೆ ಅನೇಕ ಐತಿಹಾಸಿಕ ಕಾರಣಗಳಿರಬಹುದು.

● ಹಿಂದಿನ ಅಧ್ಯಾಯಗಳಲ್ಲಿ, ಮಕ್ಕಾ ಪಟ್ಟಣವು ಭೂಮಿಯ ಮಧ್ಯ ಭಾಗದಲ್ಲಿದ್ದು, ಪವಿತ್ರ ಕಅಬಾವು ಭೂಮಿಯ ಕೇಂದ್ರದಲ್ಲಿರುವುದು ಬಂದಿದೆಯಷ್ಟೇ. ಪವಿತ್ರ ಕಅಬಾವನ್ನು ಸಂದರ್ಶಿಸಿ ಕೆಲ ವಿಧಿಗಳನ್ನು ನಿರ್ವಹಿಸುವುದಕ್ಕೆ ಹಜ್ಜ್‌ವೆನ್ನುತ್ತಾರೆ. ಹಜ್ಜ್ ಯಾತ್ರೆ ನಿರ್ವಹಿಸಲು ಆರ್ಥಿಕ ಸಾಮರ್ಥ್ಯವುಳ್ಳ ಮುಸ್ಲಿಮರಿಗೆ ಜೀವನದಲ್ಲಿ ಒಂದು ಬಾರಿ ಹಜ್ಜ್ ನಿರ್ವಹಿಸುವುದು ಕಡ್ಡಾಯವಾಗಿದೆ.

ಹಜ್ಜ್ ನಿರ್ವಹಣೆಯಿಮದ ವಿಶ್ವಾಸಿಯ ಸಕಲ ಪಾಪಗಳೆಲ್ಲವೂ ಕ್ಷಮಿಸಲ್ಪಡುತ್ತವೆ. ಇದಲ್ಲದೆ, ಹಜ್ಜ್ ಮರಣಾ ನಂತರ ಜರುಗಲಿರುವ ವಿಚಾರಣೆ ದಿನದ ತಾಲೀಮುವಾಗಿದೆ.

7ನೇ ಅಧ್ಯಾಯ, "ಮಕ್ಕಾ ಅಥವಾ ಮಕ್ಕೇಶ್ವರ"ದಲ್ಲಿ ಅಥರ್ವ ವೇದದ ಅನುಸಾರ ಕಅಬಾ ಭವನದ ಪ್ರಾಮುಖ್ಯತೆ, ಕಅಬಾ ಭವನದ ದರ್ಶನದಿಂದ ದೊರೆಯುವ ದೇವರ ಅನುಗ್ರಹಗಳ ಬಗ್ಗೆ ಚರ್ಚಿಸಲಾಗಿದೆ. ಬೈಬಲ್‌ನಲ್ಲಿ ಸಹ (ಕಿಚಿಟಟಥ 8:4–6) ಕಅಬಾ ದರ್ಶನದ ಪ್ರಾಮುಖ್ಯತೆಯನ್ನು ನೀಡಲಾಗಿದೆ.

**ವಿವಿಧ ಧರ್ಮಗಳಲ್ಲಿ ಭಿನ್ನಾಭಿಪ್ರಾಯವಿರುವುದೇಕೆ?**

● **ಪವಿತ್ರ ವೇದ ಈ ರೀತಿ ಹೇಳುತ್ತದೆ:**

"ಭಗವಂತ ಕಾನೂನು ಬದಲಾಗುವುದಿಲ್ಲ." (ಋಗ್ವೇದ 1:24:10)

ಪವಿತ್ರ ಕುರ್‌ಆಣ್ ಈ ಮಾತನ್ನು ದೃಢೀಕರಿಸುತ್ತದೆ.

"ಇದು ಹಿಂದಿನಿಂದಲೇ ನಡೆದು ಬರುತ್ತಿರುವ ಅಲ್ಲಾಹನ ಕಾರ್ಯ ವಿಧಾನವಾಗಿದೆ ಮತ್ತು ನೀವು ಅಲ್ಲಾಹನ ಕಾರ್ಯ ವಿಧಾನದಲ್ಲಿ ಯಾವ ಬದಲಾವಣೆಯನ್ನು ಕಾಣಲಾರರಿ." (ಪವಿತ್ರ ಕುರ್‌ಆನ್ 48:23)

ಸೃಷ್ಟಿಕರ್ತನು ಮೇಲಿನ ಐದು ಆದೇಶಗಳನ್ನು ಎಲ್ಲಾ ಪ್ರವಾದಿಗಳಿಗೆ ನೀಡಿರುವನು. ಎಲ್ಲಾ ದಿವ್ಯ ಗ್ರಂಥಗಳಲ್ಲಿಯೂ ಈ ಆದೇಶಗಳು ಉಲ್ಲೇಖಿಸಲ್ಪಟ್ಟಿವೆ. ಆದುದರಿಂದ ವಿವಿಧ ದೇಶಗಳಲ್ಲಿ ವಿವಿಧ ಜನಾಂಗಗಳಲ್ಲಿ ವಿವಿಧ ಧರ್ಮಗಳಲ್ಲಿ ಭಿನ್ನಾಭಿಪ್ರಾಯಗಳುವಿರಬಾರದಿತ್ತು.

ಈ ಪ್ರಶ್ನೆಗೆ ಉದಾಹರಣೆಯನ್ನು ನೀಡುವ ಮೂಲಕ ಉತ್ತರ ನೀಡಲು ಪ್ರಯತ್ನಿಸುತ್ತೇನೆ.

**ಪವಿತ್ರ ಕುರ್‌ಆನ್ ನುಡಿಯುತ್ತದೆ:**

"ಓ ಪೈಗಂಬರರೇ, ಇವರೊಡನೆ ಹೇಳಿರಿ– "ನನ್ನಲ್ಲಿ ಅಲ್ಲಾಹನ ಖಜಾನೆಗಳಿವೆಯೆಂದು ನಾನು ನಿಮ್ಮೊಡನೆ ಹೇಳುವುದಿಲ್ಲ. ನಾನು

ಪರೋಕ್ಷ ಜ್ಞಾನಿಯೂ ಅಲ್ಲ. ನಾನು ದೇವಚರನೆಂದೂ ಹೇಳುವುದಿಲ್ಲ. ನಾನು ನನ್ನ ಮೇಲೆ ಅವತೀರ್ಣಗೊಳ್ಳುತ್ತಿರುವ ದಿವ್ಯವಾಣಿಯ ಅನುಸರಣೆಯನ್ನು ಮಾತ್ರ ಮಾಡುತ್ತಿದ್ದೇನೆ." (ಪವಿತ್ರ ಕುರ್‌ಆನ್ 6:50) ಪ್ರವಾದಿ ಮುಹಮ್ಮದ್(ಸ) ಈ ರೀತಿ ನುಡಿದಿರುವರಾಗಿ ವರದಿಯಾಗಿದೆ.

ಪ್ರವಾದಿ ಮುಹಮ್ಮದ್(ಸ) ತಮ್ಮ ಮಗಳು ಹ. ಫಾತಿಮಾ(ರ)ರಿಗೆ ಈ ರೀತಿ ನುಡಿದರು, "ಫಾತಿಮಾ(ರ), ನೀನು ನನ್ನ ಮಗಳಾಗಿದ್ದರೂ ನಿರ್ಣಾಯಕ ದಿನದಂದು ನಾನು ನಿನಗೆ ಸಹಾಯವನ್ನು ಮಾಡಲಾರೆ. ನಿನ್ನ ಕರ್ಮಗಳ ಅನುದಾರ ತೀರ್ಪನ್ನು ನೀಡಲಾಗುವುದು."

ಸೃಷ್ಟಿಕರ್ತನು ಏಕೈಕನಾಗಿರುವನು. ಆತನ ತೀರ್ಪು ಅಂತಿಮ ತೀರ್ಪಾಗಿರುವುದು. ಪ್ರವಾದಿ ಮುಹಮ್ಮದ್(ಸ) ಅಲ್ಲಾಹನ ದಾಸರೂ ಮತ್ತು ಸಂದೇಶವಾಹಕರೂ ಆಗಿರುವರು. ಇದು ಇಸ್ಲಾಮಿನ ಮೂಲಭೂತ ವಿಶ್ವಾಸವಾಗಿದೆ. ಆದರೆ ಕೆಲ ಮುಸ್ಲಿಮರು ಈ ಮೂಲಭೂತ ವಿಶ್ವಾಸದಲ್ಲಿಯೇ ವಾರ್ಪಟನ್ನು ಮಾಡುತ್ತಿದ್ದಾರೆ.

ಉದಾಹರಣೆಗೆ ಒಂದು ಕವನದ ಕೆಲವು ಸಾಲುಗಳು ಹೀಗಿವೆ.

**ಮೈ ತೋ ಮಾಲಿಕ್ ಹೀ ಕಹೂಂಗಾ ಕೆಹ್ಲೇ ಮಾಲಿಕ್ ಕೆ ಹಬೀಬ್**

● ಯಾನಿ ಮೆಹಬೂಬ್ ಔರ್ ಮುಹಿಬ್ ಮೆ ನಹೀ ತೇರಾ ಮೇರಾ.

ಅನುವಾದ: ನೀವು ಒಡೆಯನ (ಭಗವಂತನ) ಅಚ್ಚು ಮೆಚ್ಚಿನವರಾದ ಕಾರಣ ನಿಮ್ಮನ್ನು ಒಡೆಯನೆಂತಲೇ ಕರೆಯುತ್ತೇನೆ. ಒಡೆಯ ಮತ್ತು ಒಡೆಯನ ಆಪ್ತನ ನಡುವೆ ಯಾವುದೇ ವ್ಯತ್ಯಾಸವಿಲ್ಲ.

ವಹಿ ಜೋ ಮುಸ್ತವೀ ಥಾ ಅರ್ಷ್ ಪರ್ ಖುದಾ ಹೋಕರ್

ನಿಲ್ ಪಡಾ ಹೈ ಮದೀನೆ ಮೆ ಮುಸ್ತಫಾ ಹೋಕರ್.

ಅನುವಾದ: ಆಕಾಶದಲ್ಲಿ ಸಿಂಹಾಸಾನಲ್ಲಿ ಆಸೀನರೂಢನಾಗಿದ್ದವನೇ, ಮದೀನದಲ್ಲಿ ಮುಹಮ್ಮದರ ರೂಪದಲ್ಲಿ ಅವತರಿಸಿರುವನು.

ಜನರ ಈ ರೀತಿಯ ತಪ್ಪು ನಡೆಯನ್ನು ಕೆಲ ವಿದ್ವಾಂಸರು ಸಮ ನೀಡುವ ಮೂಲಕ ಅದನ್ನು ಬಲಪಡಿಸುತ್ತಾರೆ. ಹೆಚ್ಚಿನ ಜನರಿಗೆ ಇಸ್ಲಾಮ್ ಧರ್ಮದ ಬಗ್ಗೆ ಅರಿವಿಲ್ಲ. ಇಂತಹ ಜನರು ವಿದ್ವಾಂಸರ ತಪ್ಪು ಮಾತುಗಳ ಅಂಧಾನುಕರಣೆ ಮಾಡುತ್ತಾರೆ.

ಇಸ್ಲಾಮ್ ಧರ್ಮಿಯರಲ್ಲಿ ಆಗುತ್ತಿರುವ ಬದಲಾವಣೆಗಳು ವಿಶ್ವದ ಇತರ ಧರ್ಮಿಯರಲ್ಲೂ ಆಗುತ್ತಿವೆ. ಸನಾತನ ಧರ್ಮದ ದಿವ್ಯ ಗ್ರಂಥಗಳು ಸೃಷ್ಟಿಕರ್ತನು ಏಕೈಕನಾಗಿರುವನೆಂದೂ, ದೇವತ್ವದಲ್ಲಿ ಇತರ ಯಾರೂ ಭಾಗೀದಾರರಿಲ್ಲವೆಂದು ಘಂಟಾ ಘೋಷವಾಗಿ ಸಾರುತ್ತಿದ್ದರೂ ಅನೇಕರು ಗಿಡಮರಗಳನ್ನು, ಕಲ್ಲು, ವಿಗ್ರಹಗಳನ್ನು ದೇವರೆಂದು ಬಗೆದು ಪೂಜಿಸುತ್ತಿದ್ದಾರೆ.

ಮುಸ್ಲಿಮರಂತೆ ಇತರ ಧರ್ಮಗಳ ಹೆಚ್ಚಿನ ಅನುಯಾಯಿಗಳು ಸಹಾ ಧರ್ಮವನ್ನು ಅರಿತವರಲ್ಲ. ಪುರೋಹಿತ ವರ್ಗ ನುಡಿದಿದ್ದನ್ನೇ ಕಣ್ಣು ಮುಚ್ಚಿ ಪಾಲಿಸುತ್ತಾರೆ. ಭಿನ್ನಾಭಿಪ್ರಾಯಗಳು ಧರ್ಮಗಳ ನಡುವೆಯಷ್ಟೇ ಅಲ್ಲ. ಒಂದು ಧರ್ಮದ ಅನುಯಾಯಿಗಳ ನಡುವೆಯೇ ನೇಕ ಭಿನ್ನಾಭಿಪ್ರಾಯಗಳಿವೆ. ಆದುದರಿಂದ ಪ್ರತಿಯೊಂದು ಧರ್ಮದ ಅನುಯಾಯಿಗಳು ನೇರವಾಗಿ ಧರ್ಮಗ್ರಂಥಗಳ ಅಧ್ಯಯನವನ್ನು ಮಾಡಿ ಅವುಗಳ ಬೋಧನೆಯಂತೆ ನಡೆದುಕೊಳ್ಳಬೇಕು.

**ನಾವೇನು ಮಾಡಬೇಕು?**

ಪವಿತ್ರ ಕುರ್‌ಆನ್ ನುಡಿಯುತ್ತದೆ:

"ಅವನು ನೂಹ್‌ರಿಗೆ ಆಜ್ಞಾಪಿಸಿದ್ದ ಧರ್ಮ ವಿಧಾನವನ್ನೇ ನಿಮಗಾಗಿಯೂ ನಿಶ್ಚಯಿಸಿಕೊಟ್ಟಿದ್ದಾನೆ ಮತ್ತು (ಮುಹಮ್ಮದರೇ) ಈಗ ನಾವು ಅದನ್ನೇ ದಿವ್ಯವಾಣಿಯ ಮೂಲಕ ನಿಮ್ಮ ಕಡೆಗೆ ಕಳುಹಿಸಿರುತ್ತೇವೆ. ಇದನ್ನೇ ನಾವು ಇಬ್ರಾಹೀಮ್, ಮೂಸಾ ಮತ್ತು ಈಸಾರಿಗೂ ಬೋಧಿಸಿದ್ದೆವು. ಈ ಧರ್ಮವನ್ನು ಸಂಸ್ಥಾಪಿಸಿರಿ ಮತ್ತು ವಿಭಿನ್ನರಾಗದಿರಿ ಎಂಬ ಆದೇಶದೊಂದಿಗೆ." (ಕುರ್‌ಆನ್: 42:13)

ಕುರ್‌ಆನಿನ ಈ ಸೂಕ್ತವನ್ನು ಖಚಿತಪಡಿಸಿಕೊಳ್ಳಿರಿ. ನಮ್ಮ ದಿವ್ಯ ಗ್ರಂಥಗಳಲ್ಲಿ ಭಗವಂತನ ಮೇಲಿನ ಐದು ಆದೇಶಗಳಿವೆಯೇ? ಎಂಬುದನ್ನು ಪರಿಶೀಲಿಸಿ. ಈ ಪುಸ್ತಕದಲ್ಲಿ ವೇದಗಳಲ್ಲಿರುವ ಮತ್ತು ಬೈಬಲ್‌ನಲ್ಲಿರುವ ಸೃಷ್ಟಿಕರ್ತನ ಐದು ಆದೇಶಗಳ ಶ್ಲೋಕಗಳ ಉಲ್ಲೇಖವನ್ನು ನೀಡಲಾಗಿದೆ. ವೇದಗಳ ಮತ್ತು ಬೈಬಲ್‌ನ ಈ ಸೂಕ್ತಗಳ ಅಧ್ಯಯನ ನಡೆಸಬೇಕು. ಈ ಸೂಕ್ತಗಳಲ್ಲಿ ಭಗವಂತನ ಆದೇಶಗಳು ಇರಾವುದಾದಲ್ಲಿ, ಅದನ್ನು ಅನುಸರಿಸಬೇಕು.

ಸತ್ಯವನ್ನು ಕಂಡುಕೊಂಡ ಬಳಿಕ ಅದರ ಅನುಸಾರ ನಡೆದುಕೊಳ್ಳಲು ನಿರಾಕರಿಸುವವರಿಗೆ ಭಗವಂತನು ಘೋರ ಶಿಕ್ಷೆ ನೀಡುವುದಾಗಿ ಎಚ್ಚರಿಕೆ ನೀಡಿದ್ದಾನೆ. ಪವಿತ್ರ ಕುರ್‌ಆನಿನ ಈ ಸೂಕ್ತವನ್ನು ಗಮನಿಸಿ.

"ಯಾರಾದರೂ ಈ ವಿಧೇಯತೆ(ಇಸ್ಲಾಮ್)ಯ ಹೊರತು ಯಾವುದಾದರೂ ಇತರ ಪದ್ಧತಿಯನ್ನು ಸ್ವೀಕರಿಸಲಿಚ್ಛಿಸಿದರೆ, ಅವರ ಆ ಪದ್ಧತಿಯನ್ನು ಎಷ್ಟು ಮಾತ್ರಕ್ಕೂ ಮಾನ್ಯ ಮಾಡಲಾಗದು ಮತ್ತು ಪರಲೋಕದಲ್ಲಿ ಅವನು ವಿಫಲನೂ ಹತಾಶನೂ ಆಗಿ ತೀರುವನು." (ಪವಿತ್ರ ಕುರ್‌ಆನ್ 3:85)

ಸೃಷ್ಟಿಕರ್ತನು ಸತ್ಯವನ್ನು ಅರಿಯುವ ಮತ್ತು ಅದನ್ನು ಪ್ರಾಮಾಣಿಕವಾಗಿ ಅನುಸರಿಸುವ ವಿವೇಕವನ್ನು ದಯಪಾಲಿಸಲಿ.

ಅಧ್ಯಯ: 11

# ಸೃಷ್ಟಿಕರ್ತನು ಯಾರು?

## 11. Who is God?

ಸೃಷ್ಟಿಕರ್ತನನ್ನು ವಿವಿಧ ಹೆಸರುಗಳಿಂದ ನಾವು ಕರೆಯುತ್ತಲೇ ಇರುತ್ತೇವೆ. ಭಗವಂತ, ಪರಮಾತ್ಮ, ಈಶ್ವರ, ಅಲ್ಲಾಹ್ ಮೊದಲಾದವುಗಳು. ಆದರೆ ನಿಜವಾಗಿಯೂ ನಾವು ಸೃಷ್ಟಿಕರ್ತನನ್ನು ಅರಿಯುವ ಪ್ರಯತ್ನ ಮಾಡಿದ್ದೇವೆಯೇ?

ಸೃಷ್ಟಿಕರ್ತನು ಯಾರು? ಆತನು ಹೇಗಿರುವನು? ಆತನ ವೈಶಿಷ್ಟಗಳೇನು? ಮೊದಲಾದವುಗಳು

"ಸೃಷ್ಟಿಕರ್ತನನ್ನು ಹೋಲುವ ಯಾವುದೇ ವಸ್ತುವಿಲ್ಲ."

(ಪವಿತ್ರ ಕುರ್‌ಆನ್ 42:11, ಯಜಕನೇದ 10–71–4)

ಸೃಷ್ಟಿಕರ್ತನು ವಿಶಿಷ್ಟವಾಗಿರುವನು. ಆತನ ರೂಪದ ಬಗ್ಗೆ ಊಹಿಸಲು ಯಾವ ಮನುಷ್ಯನಿಂದಲೂ ಸಾಧ್ಯವಿಲ್ಲ.

ಈ ಬಗ್ಗೆ ಋಗ್ವೇದ ಹೇಳುತ್ತದೆ:

"ಓ ಭಗವಂತನೇ! ವಿಶ್ವದಲ್ಲಿ ನಿನ್ನಂತೆ ಯಾರೂ ಇಲ್ಲ. ನಿನ್ನನ್ನು ಹೋಲುವವರು ಭೂಮಿಯ ಮೇಲೆ ಈ ಮೊದಲೂ ಯಾರೂ ಇರಲಿಲ್ಲ ಮತ್ತು ಭವಿಷ್ಯದಲ್ಲಿ ಯಾರೂ ಇರುವುದಿಲ್ಲ. (ಋಗ್ವೇದ 7–32–23)

ಸೃಷ್ಟಿಕರ್ತನ ರೂಪ, ವೈಶಿಷ್ಟ್ಯಗಳ ಬಗ್ಗೆ ನಿಖರವಾಗಿ ಹೇಳಲು ಯಾರಿಗೂ ಸಾಧ್ಯವಿಲ್ಲ. ಆದರೂ ದಿವ್ಯ ಗ್ರಂಥಗಳಲ್ಲಿ ಬರುವ ವಿವರಣೆಗಳಿಂದ ಸೃಷ್ಟಿಕರ್ತನ ಬಗ್ಗೆ ಸ್ವಲ್ಪ ಮಟ್ಟಿಗೆ ಊಹಿಸಲು ಪ್ರಯತ್ನಿಸಬಹುದು.

**1) ಸೃಷ್ಟಿಕರ್ತನ ಸಾಮರ್ಥ್ಯದ ಬಗ್ಗೆ:**

ನಾವು ಬಲ್ಬ್‌ನ ಸ್ವಿಚ್ ಅದುಮಿದಾಗ ಬಲ್ಬ್‌ನಿಂದ ಬೆಳಕು ಬರುತ್ತದೆ. ಬಲ್ಬ್ ಶಕ್ತಿಯ ಒಂದು ಸಣ್ಣ ಮೂಲವಷ್ಟೇ. ಆದುದರಿಂದ ಬಲ್ಬ್‌ನಿಂದ ಹೊರಬರುವ ಬೆಳಕಿನ ಪ್ರಕಾಶವು ದುರ್ಬಲವಾಗಿರುತ್ತದೆ. ಈ ಪ್ರಕಾಶವನ್ನು ಕನ್ನಡಕದ ಸಹಾಯದಿಂದ ತಡೆಯಬಹುದು.


ವೆಲ್ಡಿಂಗ್ ಆರ್ಕ್ ಶಕ್ತಿಯ ಪ್ರಬಲ ಮೂಲವಾಗಿದೆ. ಇದರ ಕಿರಣಗಳನ್ನು ಸಾಮಾನ್ಯ ಕನ್ನಡಕದಿಂದ ತಡೆಯಲು ಸಾಧ್ಯವಿಲ್ಲ. ಇದರ ಅಲ್ಟ್ರ ವಾಯ್‌ಲೆಟ್ ಕಿರಣಗಳನ್ನು ತಡೆಯಲು ವಿಶೇಷವಾದ ಗಾಜಿನ ಅವಶ್ಯಕತೆ ವಿರುತ್ತದೆ.

ಕ್ಷ–ಕಿರಣಗಳು (ಎಕ್ಸ್ ರೇ) ಇನ್ನು ಹೆಚ್ಚು ಶಕ್ತಿಶಾಲಿ ಯಾಗಿರುತ್ತವೆ. ವೆಲ್ಡಿಂಗ್ ಗ್ಲಾಸ್‌ನಿಂದ ಈ ಕಿರಣಗಳನ್ನು ತಡೆಯಲು ಸಾಧ್ಯವಿಲ್ಲ. ಮನುಷ್ಯರ ಮಾಂಸ ಖಂಡವೂ ಕ್ಷ–ಕಿರಣಗಳನ್ನು ತಡೆಯಲು ವಿಫಲವಾಗುತ್ತದೆ. ಆದರೆ ಮನುಷ್ಯರ ಮೂಳೆ ಈ ಕಿರಣಗಳನ್ನು ತಡೆಯುತ್ತದೆ.

ಇದೇ ರೀತಿ ಯುರೇನಿಯಂನಿಂದ ಹೊರಡುವ ರೇಡಿಯೋ ವಿಕಿರಣಗಳು ಎಷ್ಟು ಪ್ರಬಲವಾಗಿರುತ್ತದೆಯೆಂದರೆ, ಇದನ್ನು ತಡೆಯಲು 3 ಅಡಿ ದಪ್ಪ ಉಕ್ಕಿನ ಇಟ್ಟಿಗೆಗಳಿಂದ ಗೋಡೆಯನ್ನು ನಿರ್ಮಿಸಲಾಗುತ್ತದೆ.

ಸೃಷ್ಟಿಕರ್ತನು ವಿಶ್ವದಲ್ಲಿ ಶಕ್ತಿಯ ಅತ್ಯಂತ ಪ್ರಬಲ ಮೂಲವಾಗಿರುವನು. ಆತನ ನೋಟದಲ್ಲಿ ಗರಿಷ್ಠ ಶಕ್ತಿವಿದ್ದು, ಇದು ವಿಶ್ವದಲ್ಲಿ ಯಾವುದೇ ವಸ್ತುವನ್ನು ಹಾಯ್ದು ಹೋಗುವ ಸಾಮರ್ಥ್ಯವನ್ನು ಹೊಂದಿದೆ. ಸೃಷ್ಟಿಕರ್ತನ ನೋಟವನ್ನು ತಡೆಯಲು ಯಾವುದೇ ವಸ್ತುವಿಗೆ ಸಾಧ್ಯವಿಲ್ಲ. ಸಂಪೂರ್ಣ ವಿಶ್ವವು ಸೃಷ್ಟಿಕರ್ತನಿಗೆ ಪಾರದರ್ಶಕವಾಗಿದೆ.

ನಿಮ್ಮ ಕೈಯಲ್ಲಿ ಒಂದು ಗಾಜಿನ ತುಂಡು ವಿದೆಯಂದಿಟ್ಟು ಕೊಳ್ಳಿ. ಗಾಜಿನ ತುಂಡು ಪಾರದರ್ಶಕ ವಾಗಿರುತ್ತದೆ. ನೀವು ಗಾಜಿನ ತುಂಡನ್ನು ನೋಡಬಹುದು ಮತ್ತು ಗಾಜಿನ ತುಂಡು ಪಾರದರ್ಶಕವಿರುವ ಪ್ರಯುಕ್ತ ಅದರ ಮೂಲಕ ಇತರ ವಸ್ತುಗಳನ್ನು ಸಹ ನೋಡಬಹುದು. ಗಾಜಿನ ತುಂಡು ನಿಮ್ಮ ಕೈಯಲ್ಲಿರುವುದರಿಂದ, ಅದು ಸಂಪೂರ್ಣವಾಗಿ ನಿಮ್ಮ ನಿಯಂತ್ರಣದಲ್ಲಿರುತ್ತದೆ.




ಇದೇ ರೀತಿ ಸಂಪೂರ್ಣ ವಿಶ್ವವು ಸೃಷ್ಟಿಕರ್ತನಿಗೆ ಪಾರದರ್ಶಕವಾಗಿದೆ. ಸೃಷ್ಟಿಕರ್ತನು ವಿಶ್ವದ ಕಡೆಗೆ ನೋಡಬಲ್ಲನು. ವಿಶ್ವದ ಒಳಗಡೆ ನೋಡಬಲ್ಲನು ಮತ್ತು ವಿಶ್ವದ ಮುಖಾಂತರವೂ ನೋಡಬಲ್ಲನು ಸಂಪೂರ್ಣ ನಿಶ್ವವು ಸೃಷ್ಟಿಕರ್ತನ ಮುಷ್ಟಿಯಲ್ಲಿದೆ. ಆತನಿಗೆ ಅನಿಸಿದುದನ್ನು ಆತನು ಮೂಡಬಲ್ಲನು. ವಿಶ್ವದ ಮೇಲೆ ಆತನ ಸಂಪೂರ್ಣ ನಿಯಂತ್ರಣ ವಿದೆ.

**ಪವಿತ್ರ ಕುರ್‌ಆನ್ ಹೇಳುತ್ತದೆ:**

"ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅಲ್ಲಾಹನದು. ನಿಮ್ಮ ಮನದಿಂಗಿತಗಳನ್ನು ನೀವು ಬಹಿರಂಗಗೊಳಿಸಿದರೂ ಬಚ್ಚಿಟ್ಟರೂ ಅಲ್ಲಾಹ್ ನಿಮ್ಮಿಂದ ಅವುಗಳ ಲೆಕ್ಕಾಚಾರ ಪಡೆದೇ ತಿರುವನು. ಅನಂತರ ತನಗಿಷ್ಟು ಬಂದವರನ್ನು ಕ್ಷಮಿಸುವ ಮತ್ತು ತನಿಗಿಷ್ಟ ಬಂದವರನ್ನು ಶಿಕ್ಷಿಸುವ ಅಧಿಕಾರ ಅವನಿಗಿದೆ. ಅಲ್ಲಾಹ್ ಪ್ರತಿಯೊಂದು ವಿಷಯದಲ್ಲಿ ಅಧಿಕಾರವಿರುವವನಾಗಿರುತ್ತಾನೆ." (ಪವಿತ್ರ ಕುರ್‌ಆನ್ 2:284)

**ಬೈಬಲ್ ನುಡಿಯುತ್ತದೆ:**

"ನಿನ್ನ ಅವಶ್ಯಕತೆಗಳನ್ನು ನಿನ್ನ ತಂದೆಯು ಬಲ್ಲನು." (ಬೈಬಲ್, ಮ್ಯಾಥ್ಯೂ 6:8)

"ಅವರು ಕರೆಯುವ ಮುನ್ನವೇ ನಾನು ಓಗೊಡುತ್ತೇನೆ." (ಬೈಬಲ್, ಈಸಾ 65:24)

ಸೃಷ್ಟಿಕರ್ತನು ಮನುಷ್ಯರಿಗೆ ಬಹಳ ಹತ್ತಿರದಲ್ಲಿದ್ದಾನೆ. ಮನುಷ್ಯರ ನಾಟಿ ಮಿಡಿತವನ್ನು ಆತನು ಬಲ್ಲನು. ಮನುಷ್ಯನ ಹೃದಯದಲ್ಲಿ ಏಳುತ್ತಿರುವ ಭಾವನೆಗಳನ್ನು ಆತನು ಬಲ್ಲನು. ಸೃಷ್ಟಿಕರ್ತನು ತನ್ನ ದಾಸರನ್ನು ಬಹುವಾಗಿ ಪ್ರೀತಿಸುತ್ತಾನೆ. ಇಹ ಪರಗಳಲ್ಲಿ ಮನುಷ್ಯರ ಯಶಸ್ಸಿಗಾಗಿ ಆತನು ಜೀವನ ಕ್ರಮವನ್ನು ನೀಡಿದ್ದಾನೆ. ಯಾರು ಈ ಜೀವನ ಕ್ರಮವನ್ನು ಅನುಸರಿಸುವರೋ, ಅವರು ಇಹ ಲೋಕದಲ್ಲೂ ಯಶಸ್ಸಿನ ಜೀವನವನ್ನು ನಡೆಸುವರು ಮತ್ತು ಪರಲೋಕದಲ್ಲೂ ಯಶಸ್ಸನ್ನು ಪಡೆಯುವರು.

**2) ಸೃಷ್ಟಿಕರ್ತನು ಸರ್ವ ವ್ಯಾಪಿಯಾಗಿರುವ ಬಗ್ಗೆ**

ಐನ್‌ಸ್ಟೀನ್‌ನ ಸಿದ್ಧಾಂತದ ಪ್ರಕಾರ, ಒಂದು ವಸ್ತುವಿನ ವೇಗವು ಬೆಳಕಿನ ವೇಗಕ್ಕಿಂತ (3,00,000 ಕಿ.ಮೀ./ಸೆಕೆಂಡ್ ಅಥವಾ 1,86,000 ಮೈಲು/ಸೆಕೆಂಡ್) ಹೆಚ್ಚಾದಾಗ, ಆ ವಸ್ತುವಿನ ಸಮಯವು ನಿಧಾನವಾಗಲಾರಂಭಿಸುತ್ತದೆ.

ಇದನ್ನು ಅರ್ಥೈಸಿಕೊಳ್ಳಲು ಗಗನ ನೌಕೆಯ ಉದಾಹರಣೆಯನ್ನು ಪರಿಗಣಿಸೋಣ. ಗಗನ ನೌಕೆಯು ಬೆಳಕಿನ ವೇಗಕ್ಕಿಂತ ಕಡಿಮೆ ವೇಗದಲ್ಲಿ ಚಲಿಸುವಾಗ, ಗಗನ ನೌಕೆಯಲ್ಲಿರುವ ಗಡಿಯಾರವು, ನಿಗದಿತ ಸಮಯಕ್ಕೆ ಅನುಗುಣವಾಗಿ ಚಲಿಸುತ್ತಿರುತ್ತದೆ.

ಗಗನ ನೌಕೆಯು ಬೆಳಕಿನ ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ಚಲಿಸಲಾರಂಭಿಸಿದಾಗ ಗಡಿಯಾರವು ನಿಧಾನವಾಗಿ ಚಲಿಸಲಾರಂಭಿಸುತ್ತದೆ. ಗಗನ ನೌಕೆಯು ಊಹಾತೀತ ವೇಗದಲ್ಲಿ ಚಲಿಸಿದಾಗ ಗಡಿಯಾರವು ಚಲಿಸದೆ ಸ್ತಬ್ಧವಾಗುತ್ತದೆ. ಅದಕ್ಕೆ ಕಾಲದ ಯಾವ ಪರಿಣಾಮ ವಾಗುವುದಿಲ್ಲ ಮತ್ತು ಅದು ಹಳೆತಾಗುವುದೂ ಇಲ್ಲ.

ಆರಂಭದಲ್ಲಿ ಬೆಳಕಿನಲ್ಲಿ 7 ಬಣ್ಣಗಳು 7 ಕಿರಣಗಳಿವೆ ಎಂದು ಭಾವಿಸಲಾಗಿತ್ತು. ನಂತರ ಬೆಳಕಿನ ಇತರ ವಿಧಗಳೂ ಇರುವುದು ತಿಳಿದು ಬಂತು. ಉದಾಹರಣೆಗೆ ಇನ್‌ಫ್ರಾರೆಡ್ ಮತ್ತು ಅಲ್ಟ್ರಾ ವಾಯ್‌ಲೆಟ್ ಕಿರಣಗಳು. ಇತರ ವಿದಧ ಕಿರಣಗಳೂ ಕಂಡು ಹಿಡಿಯಲ್ಪಟ್ಟವು– ಕ್ಷ–ಕಿರಣಗಳು ಮತ್ತು ರೇಡಿಯೋ ಆಕ್ಟಿವ್ ಕಿರಣಗಳು. ಇನ್ನೂ ಇತರ ವಿದಧ ಕಿರಣಗಳ ಮತ್ತು ಅಲೆಗಳ ಸಂಶೋಧನೆ ಜಾರಿಯಲ್ಲಿದೆ.

ಮನಸ್ಸು ಮತ್ತು ಹೃದಯ ಜಟಲ ವಿದ್ಯುತ್ ಶಕ್ತಿಯ ಸ್ವರೂಪದ ಆಧಾರದ ಮೇಲೆ ಕೆಲಸ ಮಾಡುತ್ತವೆ. ಮನಸ್ಸಿನಲ್ಲಿ ಉಂಟಾಗುವ ವಿಚಾರಗಳು ಸಹ ಒಂದು ರೀತಿಯ ಶಕ್ತಿಯ ವಿಧಗಳೇ. ಈ ಕಾರಣದಿಂದಲೇ ಮನೋ ಸಂಪರ್ಕ (Tele Pathy) ದಲ್ಲಿ ದೂರ ಪ್ರದೇಶದಲ್ಲಿರುವ ವ್ಯಕ್ತಿಗೂ ಸಂದೇಶವನ್ನು ರವಾನಿಸಬಹುದು.

● ದಿನಾಂಕ 24–8–2011 ರಂದು ಇಂಡಿಯನ್ ಎಕ್ಸ್‌ಪ್ರೆಸ್ ದಿನ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಯುರೋಪಿಯನ್ ಆರ್ಗನೈಝೇಶನ್ ಫಾರ್ ನ್ಯೂಕಿಯರ್ ರಿಸರ್ಚ್ (Cern) ಸಬ್ ಅಟಾಮಿಕ್ ಅಣುಗಳು ಬೆಳಕಿಗಿಂತ ಹೆಚ್ಚಿನ ವೇಗದಲ್ಲಿ ಚಲಿಸುತ್ತವೆ ಎಂಬುದನ್ನು ಕಂಡು ಹಿಡಿದಿರುವರು.

● ಮೇಲಿನ ವೈಜ್ಞಾನಿಕ ಮಾಹಿತಿಗಳ ಹಿನ್ನೆಲೆಯಲ್ಲಿ ತತ್ವಜ್ಞಾನಿಗಳು ಮತ್ತು ಚಿಂತಕರು ಸೃಷ್ಟಿಕರ್ತನು ಒಂದು ವಿದಧ ಶಕ್ತಿಯಾಗಿದ್ದು (ನೂರ್–ಬೆಳಕು) ಆದರೆ ಈ ಬೆಳಕಿನ ಸ್ವರೂಪ, ಮತ್ತು ವೇಗದ ವಿವರಗಳು ಲಭ್ಯವಿರುವುದಿಲ್ಲ. ಬಹುಶಃ ಸೃಷ್ಟಿಕರ್ತನು ಅಪರಿಮಿತ ವೇಗವನ್ನು (Infinite) ಹೊಂದಿರಬಹುದು. ಆದುದರಿಂದ ಸೃಷ್ಟಿಕರ್ತನಿಗೆ 'ಕಾಲ'ವು ಅನ್ವಯಿಸುವುದಿಲ್ಲ. ಅನಾದಿ ಕಾಲದಿಂದಲೂ ಸೃಷ್ಟಿಕರ್ತನು ಒಂದೇ ರೀತಿಯಲ್ಲಿದ್ದು, ಭವಿಷ್ಯದಲ್ಲಿ ಅನಂತ ಕಾಲದ ವರೆಗೂ ಹೀಗೆಯೇ ಇರುವನು. ಈ ರೀತಿ ಸೃಷ್ಟಿಕರ್ತನಿಗೆ ಹುಟ್ಟೂ ಇಲ್ಲ ಮತ್ತು ಮರಣವೂ ಇಲ್ಲ.

● ಈ ವಿಶ್ವದ 'ವ್ಯಾಸ'ವು 6,00,000 ಕಿ.ಮೀ. ಎಂದಿಟ್ಟು ಕೊಳ್ಳೋಣ. ವಿಶ್ವದ ಕೇಂದ್ರದಿಂದ ಹೊರಡುವ ಬೆಳಕು ವಿಶ್ವದ ಅಂಚನ್ನು ಒಂದು ಸೆಕೆಂಡ್‌ನಲ್ಲಿ ತಲುಪುತ್ತದೆ. (ಬೆಳಗಿನ ವೇಗ 3,00,000 ಕಿ.ಮೀ. ಪ್ರತಿ ಸೆಕೆಂಟಿಗೆ)

ಇದೇ ರೀತಿ ಸೃಷ್ಟಿಕರ್ತನ ಕಣ್ಣಿನ ನೋಟದ ಬೆಳಕು ವಿಶ್ವದಲ್ಲಿ ಯಾವುದೇ ಸ್ಥಳವನ್ನು ಶೂನ್ಯ ಸಮಯದಲ್ಲಿ ತಲುಪುತ್ತದೆ. ಆದುದರಿಂದ ಸೃಷ್ಟಿಕರ್ತನು ಎಲ್ಲಾ ಸಮಯದಲ್ಲೂ ಎಲ್ಲಾ ಕಡೆ ಇರುವವನಾಗಿದ್ದು, ಸರ್ವ ವ್ಯಾಪಿಯಾಗಿರುವನು.

**3) ಸೃಷ್ಟಿಕರ್ತನ ರೂಪ ವೈಶಿಷ್ಟ್ಯದ ಬಗ್ಗೆ**

ಸೃಷ್ಟಿಕರ್ತನ ರೂಪ ವೈಶಿಷ್ಟ್ಯವನ್ನು ಒಂದು ಉದಾಹರಣೆಯಿಂದ ಅರಿಯಲು ಪ್ರಯತ್ನಿಸೋಣ.

ಭಾರತೀಯ ದಂಡ ಸಂಹಿತೆಯ ಕಲಂ 302ರ ಪ್ರಕಾರ, ಒಬ್ಬ ವ್ಯಕ್ತಿ ಕೊಲೆ ಮಾಡಿದರೆ ಆತನಿಗೆ ಮರಣದಂಡನೆಯ ಶಿಕ್ಷೆ ವಿಧಿಸಲಾಗುವುದು. ಈ 302 ಕಲಂ ಅಸ್ತಿತ್ವದಲ್ಲಿ ಇರುವುದು ಎಲ್ಲಿ?

ದೆಹಲಿಯಲ್ಲಿಯೇ? ಅಥವಾ ಸಂವಿಧಾನದ ಪುಸ್ತಕದಲ್ಲಿಯೇ? ಹೌದೆಂದಾದರೆ, ಯಾವುದೇ ಪ್ರಕೃತಿಯ ವಿಕೋಪದ ಕಾರಣ ಸಂವಿಧಾನದ ಪುಸ್ತಕಗಳೆಲ್ಲವೂ ನಾಶ ಹೊಂದಿ, ಸಂವಿಧಾನದ ಪುಸ್ತಕಗಳು ಮರು ಮುದ್ರಣಗೊಳ್ಳುವವರೆಗೆ, ದೇಶದ ಸಂವಿಧಾನ ಚಾಲ್ತಿಯಲ್ಲಿಲ್ಲ ಎನ್ನಲು ಬರುತ್ತದೆಯೇ? ಖಂಡಿತ ಇಲ್ಲ. ರಾಷ್ಟ್ರದ ಸಂವಿಧಾನದ ಎಲ್ಲಾ ಪ್ರತಿಗಳು ನಾಶಹೊಂದಿದರೂ, ಸಂವಿಧಾನ ಜಾರಿಯಲ್ಲಿರುತ್ತದೆ. ಮತ್ತು ಕೊಲೆಗಡುಕರಿಗೆ ಮರಣ ದಂಡನೆಯ ಶಿಕ್ಷೆ ಜಾರಿಗೊಳ್ಳುತ್ತದೆ.

● ಈಗ ಮತ್ತೊಂದು ಉದಾಹರಣೆಯನ್ನು ಪರಿಗಣಿಸೋಣ. 302 ಕಲಂಗೆ ದೈವೀಕ ಶಕ್ತಿ ವಿದೆಯೆಂದು ಊಹಿಸಿ, ಈ ದೈವೀಕ ಶಕ್ತಿಯ ಕಾರಣ ಯಾವನೇ ವ್ಯಕ್ತಿ ಕೊಲೆಗೈದರೆ ಆತನು ಕೂಡಲೇ ಮರಣ ಹೊಂದುತ್ತಾನೆ ಎಂದು ಕೊಳ್ಳೋಣ. ಈ ರೀತಿಯ ಕಾನೂನಿಗೆ ಸಂಬಂಧಿಸಿದಂತೆ ಈ ಪ್ರಶ್ನೆಗಳಿಗೆ ಉತ್ತರವನ್ನು ನೀಡುವಿರಾ?

**1**. ಅದರ ರೂಪ
**2**. ಅದರ ವಿಳಾಸ
**3**. ಇದರ ಹೆತ್ತವರ, ಮಕ್ಕಳ ವಿವರಗಳು
**4**. ಅದು ಮಾನವ ರೂಪ ತಾಳಲು ಸಾಧ್ಯವೇ?
**5**. ಅದಕ್ಕೆ ಲಾಭ ಅಥವಾ ನಷ್ಟವನ್ನುಂಟು ಮಾಡಲು ಸಾಧ್ಯವೇ?

ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರ ಹೀಗಿರಲು ಸಾಧ್ಯ.

i, ಈ ಕಾನೂನಿಗೆ ಯಾವುದೇ ರೂಪ, ಆಕಾರವಿಲ್ಲ.

ii, ಈ ಕಾನೂನು ಯಾವುದೇ ಒಂದು ಸ್ಥಳದಲ್ಲಿ ನಿಮೀತವಾಗಿರುವುದಿಲ್ಲ, ದೇಶದೆಲ್ಲೆಡೆ ಅದು ಅನ್ವಯಿಸುತ್ತದೆ.

iii, ಮನುಷ್ಯರಿಗೆ ಇರುವಂತೆ ಕಾನೂನಿಗೆ ಹೆತ್ತವರು, ಮಕ್ಕಳು ಇರಲು ಸಾಧ್ಯವಿಲ್ಲ.

iv, ಕಾನೂನಿಗೆ ಮಾನವರಿಗೆ ಇರುವಂತೆ ರೂಪವಿರಲು ಸಾಧ್ಯವಿಲ್ಲ. ಯಾವುದೇ ರೂಪ ನಾವು ಅದಕ್ಕೆ ನೀಡಿದರೂ, ಅದು ಕೇವಲ ಕಲ್ಪನೆಯಾಗಿರುವುದು.

v, ಮಾನವರಂತೆ ಲಾಭ ಮತ್ತು ನಷ್ಟವನ್ನು ಕಾನೂನಿಗೆ ಮಾಡಲು ಸಾಧ್ಯವಿಲ್ಲ.

302 ಸಂವಿಧಾನಿಕ ಕಾನೂನುವಾಗಿರುವ ಪ್ರಯುಕ್ತ ಪಾರ್ಲಿಮೆಂಟ್‌ನಲ್ಲಿ ಇದಕ್ಕೆ ತಿದ್ದು ಪಡಿ ಮಾಡಬಹುದಾಗಿದೆ.

● ಈಗ ಮತ್ತೊಂದು ವಿಶ್ವ ವ್ಯಾಪ್ತಿ ಕಾನೂನನ್ನು ಪರಿಗಣಿಸೋಣ. ಭೂಮಿಯ ಗುರುತ್ವಾಕರ್ಷಣೆ ನಿಯಮ. ಈ ನಿಯಮಕ್ಕೆ ಶಕ್ತಿಯೂ ಇದೆ. ಈ ನಿಯಮದ ಪ್ರಕಾರ, ಅನಿಬಂಧಿತವಾಗಿ ಬೀಳುತ್ತಿರುವ ಪ್ರತಿಯೊಂದು ವಸ್ತು ಒಂದು ನಿಗದಿತ ವೇಗವನ್ನು ಹೊಂದಿರುತ್ತದೆ. ಈ ನಿಯಮದೊಂದಿಗಿರುವ ಶಕ್ತಿವೇನೆಂದರೆ ಗುರುತ್ವಾಕಾರ್ಷಣೆಯ ಪರಿವಿಧಿಯಲ್ಲಿರುವ ಪ್ರತಿಯೊಂದು ವಸ್ತುವನ್ನು ಭೂಮಿಯ ಕೇಂದ್ರದ ಕಡೆಗೆ ಎಳೆಯುತ್ತದೆ.

ಗುರುತ್ವಾಕರ್ಷಣೆಯಲ್ಲಿ ಯಾರಿಗೂ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಯಾರಿಗೂ ಇದನ್ನು ಬದಲಿಸಲೂ ಸಾಧ್ಯವಿಲ್ಲ.

"ಅಲ್ಲಾಹನು ಭೂಮಿ–ಆಕಾಶಗಳ ಪ್ರಕಾಶನಾಗಿರುವನು." (ಪವಿತ್ರ ಕುರ್‌ಆನ್ 24:35)

ಸೃಷ್ಟಿಕರ್ತನು ಶಕ್ತಿ ಹೊಂದಿರುವ ನಿಯಮವಲ್ಲ. ಆತನ ರೂಪ ವೈಶಿಷ್ಟಗಳು ಶಕ್ತಿಹೊಂದಿರುವ ನಿಯಮದಂತಿವೆ.

ಉದಾಹರಣೆಗೆ,

**1)** ಸೃಷ್ಟಿಕರ್ತನಿಗೆ ಭೌತಿಕ ಆಕಾರವಿಲ್ಲ.

**2)** ಆತನಿಗೆ ಸಂಬಂಧಗಳಿಲ್ಲ.

**3)** ಸೃಷ್ಟಿಕರ್ತನು ಮಾನವ ರೂಪವನ್ನು ತಾಳುವುದಿಲ್ಲ.

**4)** ಸೃಷ್ಟಿಕರ್ತನಿಗೆ ಲಾಭ, ನಷ್ಟ ಉಂಟು ಮಾಡಲು ಸಾಧ್ಯವಿಲ್ಲ.

● ಮೇಲಿನ ಉದಾಹರಣೆಯಿಂದ, ಯಾವುದೇ ಶಕ್ತಿಗೆ ಸೃಷ್ಟಿಸುವ, ನಾಶಪಟಿಸುವ, ಅನುಗ್ರಹಿಸುವ, ಶಿಕ್ಷೆ ನೀಡುವ ಸಾಮರ್ಥ್ಯವಿದೆ ಎಂದಾದರೆ, ಅದಕ್ಕೆ ಮನುಷ್ಯರಂತೆ ಇರಬೇಕಾದ ಅಗತ್ಯವಿಲ್ಲ ವೆಂದು ನಾವು ತೀರ್ಮಾನಿಸಬಹುದು.

● ಸೃಷ್ಟಿಕರ್ತನು ಮನುಷ್ಯನಿಗೆ ನೋಡುವ ಶಕ್ತಿಯನ್ನು ದಯಪಾಲಿಸಿದ್ದಾನೆ. ನಾವು ಏನನ್ನು ನೋಡುತ್ತಿರುವೆವೋ, ಅದರ ಅರಿವು ಸೃಷ್ಟಿಕರ್ತನಿಗಿದೆ. ಸೃಷ್ಟಿಕರ್ತನಿಗೆ ನಮಗಿರುವಂತೆ ಕಣ್ಣುಗಳಿಲ್ಲ. ಆದ್ದಾಗಲ್ಲಾ, ಸೃಷ್ಟಿಕರ್ತನು ಏಕ ಕಾಲದಲ್ಲಿ ಸಕಲ ವಸ್ತುಗಳನ್ನು ವೀಕ್ಷಿಸಬಲ್ಲನು.

● ಸೃಷಿಕರ್ತನು ಗಾಡಾಂಧಕಾರದಲ್ಲಿ ಕಪ್ಪುಬಂಡೆಯ ಮೇಲೆ ನಡೆಯುತ್ತಿವೆ ಕಪ್ಪು ಇರುವೆಯನ್ನು ನೋಡಬಲ್ಲನು ಮತ್ತು ಅದರ ಶಬ್ಧವನ್ನು ಕೇಳಬಲ್ಲನು. ಭಗವಂತನು ಎಲ್ಲರಿಗೂ ಕೇಳಲು ಕಿವಿ ನೀಡಿರುವನು. ಆದರೆ ಆತನಿಗೆ ಆಲಿಸಲು ಕಿವಿಯ ಅಗತ್ಯವಿಲ್ಲ.

● ಸೃಷ್ಟಿಕರ್ತನು ವಿಶ್ವವನ್ನು ಕರಾರುವಕ್ಕಾಗಿ ನಡೆಸಲು ವ್ಯವಸ್ಥೆಯನ್ನು ರೂಪಿಸಿರುವನು. ಆದರೆ, ಆತನು ಈ ವ್ಯವಸ್ಥೆಯ ಭಾಗವಲ್ಲ. ಈ ವ್ಯವಸ್ಥೆಗಿಂತ ಆತನು ಉನ್ನತನು.

● ನಮ್ಮ ಹುಟ್ಟಿನ ಮೊದಲೇ ನಮ್ಮ ಪರಗಳನ್ನು ಆತನು ಬಲ್ಲನು. ನಮ್ಮ ಪ್ರತಿಯೊಂದು ನಡೆ, ನುಡಿಗಳನ್ನು ಆತನು ವೀಕ್ಷಿಸುತ್ತಿರುವನು. ನಮ್ಮ ಹೃದಯದಲ್ಲಿ ಮೂಡುವ ವಿಚಾರಗಳನ್ನು ಆತನು ಬಲ್ಲನು. ಭಗವಂತನು ಜನರ ಜೀವನಾಡಿಗಿಂತಲೂ ಸಮಿಪವಿರುವನು.

● ಪವಿತ್ರ ಋಗ್ವೇದ ನುಡಿಯುತ್ತದೆ:

"ಸರ್ವೋತ್ತಮನು ಪ್ರಕಟವಾಗುವುದನ್ನು ಪ್ರಕಟಿಸುತ್ತಾನೆ. ಸಚ್ಚಾರಿತ್ರ್ಯವಂತರ ಅಭಿಲಾಷೆಗಳನ್ನು ಪೂರೈಸುತ್ತಾನೆ. ಆತನು ಮಹಾಪ್ರಭು ಆತನು ಸರ್ವಾಂತಯಾಮಿ ಸಕಲ ಸ್ತುತಿಗಳಿಗೆ ಅರ್ಹನು. ಸಕಲ ಮುನ್ನಡೆಗಳ ಕೇಂದ್ರ ಬಿಂದು. ಆತನು ಮಹಾ ಸಂಪನ್ನನು. ಆತನೇ ಶ್ರೇಷ್ಠನು ಸಕಲ ವಸ್ತುಗಳ ಸೃಷ್ಟಿಕರ್ತ ಮತ್ತು ಸಕಲ ವಿಷಯಗಳ ಜ್ಞಾನವುಳ್ಳವನು." (ಋಗ್ವೇದ 2:1:3)

● ಪವಿತ್ರ ಉಪನಿಷತ್ ಹೇಳುತ್ತದೆ:

"ಆಲಿಸಲು ಕಿವಿಯ ಅಗತ್ಯವಿಲ್ಲದವನು, ಸಕಲವನ್ನು ಆಲಿಸುವ ಸಾಮರ್ಥ್ಯವುಳ್ಳವನು, ಆತನೇ ಬ್ರಹ್ಮನೆಂಬುದನ್ನು ತಿಳಿ. ನೀನು ಪೂಜಿಸುತ್ತಿರುವ ವಿಗ್ರಹಗಳು ಬ್ರಹ್ಮವಲ್ಲ."

● ಪವಿತ್ರ ಕುರ್‌ಆನ್ ಹೇಳುತ್ತದೆ.

"ಹೇಳಿರಿ–ಅವನು ಅಲ್ಲಾಹನು ಏಕೈಕನು. ಅಲ್ಲಾಹನು ಸಕಲರಿಂದಲೂ ನಿರಪೇಕ್ಷನು ಮತ್ತು ಸರ್ವರೂ ಅವನ ಅವಲಂಬಿತರು. ಅವನಿಗೆ ಯಾವುದೇ ಸಂತಾನವಿಲ್ಲ. ಅವನು ಯಾರ ಸಂತಾನವೂ ಅಲ್ಲ ಮತ್ತು ಅವನಿಗೆ ಸರಿಸಮಾನರು ಯಾರೂ ಇಲ್ಲ." (ಪವಿತ್ರ ಕುರ್‌ಆನ್: 112)

● ಚೀನಾದ ತತ್ವ ಜ್ಞಾನಿ Lao Tu ತಮ್ಮ ಪುಸ್ತಕ 'Tao Te Ching' ನಲ್ಲಿ ಸೃಷ್ಟಿಕರ್ತನ ವಿವರಣೆಯನ್ನು ಬಹಳ ಉತ್ತಮ ರೀತಿಯಲ್ಲಿ ನೀಡಿರುವರು. ಈ ಪುಸ್ತಕದ ಮೂರು ಅಧ್ಯಾಯಗಳನ್ನು ಇಲ್ಲಿ ನೀಡಲಗಿದೆ.

**ತೌ ಅಂದರೆ 'ಹೇಗೆ' ಎಂದು ಅರ್ಥ:**

ತೌ ಅಂದರೆ ಹೇಗೆ? ಘಟನೆಗಳು ಹೇಗೆ ಸಂಭವಿಸುತ್ತವೆ, ಕಾರ್ಯಗಳು ಹೇಗೆ ಜರುಗುತ್ತವೆ. ಎಲ್ಲಾ ಸೃಷ್ಟಿಗಳ ಒಂದೇ ತತ್ವವೆಂದರೆ ತೌ.

ತೌ ವೆಂದರೆ ಸೃಷ್ಟಿಕರ್ತ

ತೌ ಅನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಏಕೆಂದರೆ ಅದು ಎಲ್ಲಾವುದಕ್ಕೂ ಅನ್ವಯಿಸುತ್ತದೆ. ತತ್ವವನ್ನು ವ್ಯಾಖ್ಯಾನಿಸಲು ಹೊರಟರೆ ಅದು ತೌ ವಲ್ಲ.

ತೌ ವೆಂದರೆ ತತ್ವ. ಸೃಷ್ಟಿಸುವುದು ಒಂದು ಪ್ರಕ್ರಿಯೆ. ತತ್ವ ಮತ್ತು ಪ್ರಕ್ರಿಯೆ ಈವೆರೆಡರ ಸಮ್ಮಿಲನವೇ ಇದು. ತೌ ಆದೇಶದಂತೆ ಪ್ರತಿಯೊಂದು ಸೃಷ್ಟಿಯ ಪ್ರಕ್ರಿಯೆ ಪ್ರಕಟವಾಗುತ್ತದೆ. ಇದರ ಹೊರತು ಬೇರೆ ವ್ಯವಧಾನವಿಲ್ಲ.

ತೌ ಅನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಆದರೆ ತೌ ಅನ್ನು ತಿಳಿದುಕೊಳ್ಳಬಹುದು: ಧ್ಯಾನದ ಮೂಲಕ, ಅಥವಾ ಜರುಗುತ್ತಿರುವ ಘಟನಾವಳಿಗಳನ್ನು ತಿಳಿಯುವ ಮೂಲಕ ತೌ ಅನ್ನು ಅರಿಯಬಹುದು.

ಜರುಗುತ್ತಿರುವ ಘಟನಾವಳಿಗಳನ್ನು ತಿಳಿಯಲು ಮುಕ್ತ ಮನಸ್ಸಿನಿಂದ ಗಮನಿಸಬೇಕು. ಪೂರ್ವಗ್ರಹಗಳನ್ನು ಬದಿಗಿಡಬೇಕು. ಪೂರ್ವ ಗ್ರಹ ವಿಚಾರಗಳನ್ನು ಹೊಂದಿರುವವರು ತಮ್ಮ ವಿಚಾರಗಳಿಗೆ ಹೊಂದಾಣಿಕೆಯಾಗುವುದನ್ನೇ ಕಾಣುತ್ತಾರೆ.

ತೌ ಅನ್ನು ತಿಳಿಯಲು ಧ್ಯಾನದ ವಿಧಾನವು ಪ್ರಯೋಜನಾಕಾರಿಯಾಗಿದೇ ಏಕೆಂದರೆ ತತ್ವ ಮತ್ತು ಪ್ರಕ್ರಿಯೆಗಳನ್ನು ಬೇರ್ಪಡಿಸಲೂಸಾಧ್ಯ. ಎಲ್ಲ ಪ್ರಕ್ರಿಯೆಗಳು ಅವುಗಳಲ್ಲಿ ಅಡಗಿರುವ ತತ್ವವನ್ನು ಹೊರಗೆಡಹುತ್ತವೆ. ಇದರ ಅರ್ಥ ನಾನು ತೌ ಅನ್ನು ತಿಳಿಯಬಹುದಾಗಿದೆ ಎಂದು ನಾನು ಸೃಷ್ಟಿಕರ್ತನನ್ನು ಅರಿಯಬಹುದು. ತೌ ಅನ್ನು ತಿಳಿಯುವ ಮೂಲಕ ಘಟನೆಗಳು ಹೀಗೆ ಜರುಗುತ್ತವೆ ಎಂಬುದನ್ನು ಅರಿಯುತ್ತೇನೆ.

● **ತೌ ವಸ್ತುವಲ್ಲ:** ನೀವು ಎಷ್ಟೇ ಪರಿಶ್ರಮ ಪಟ್ಟರೂ ತೌ ಬಳಿ ತಲುಪಲು ಸಾಧ್ಯವಿಲ್ಲ. ತೌ ಯಾವುದೇ ಅಸ್ತಿತ್ವದ ಹೆಸರಲ್ಲ. ತೌ ಎಂದರೆ ಒಂದು ತತ್ವ ಅಥವಾ ನಿಯಮ. ತೌ ಅಂದರೆ 'ಹೇಗೆ'?

ಎಲ್ಲಾ ವಸ್ತುಗಳು ತಾನ ಆದೇಶದಂತೆ ವರ್ತಿಸುತ್ತವೆ. ಆದರೆ ತೌ ಯಾವುದೇ ವರ್ತನೆ ತೋರುವುದಿಲ್ಲ. ತೌ ಯಾವುದೇ ವಸ್ತು ಅಥವಾ ಪ್ರಕ್ರಿಯೆ ವಲ್ಲ.

ಎಲ್ಲಾ ವಸ್ತುಗಳ ಮತ್ತು ಎಲ್ಲಾ ಘಟನೆಗಳ ನಿಯಮ ತೌವಾಗಿದೆ. ಸೃಷ್ಟಿಗಳ ಪ್ರಕ್ರಿಯೆಯ ಆಧಾರ ತೌವಾಗಿದೆ. ಸೃಷ್ಟಿಯ ಪ್ರಕ್ರಿಯೆ ವಸ್ತುಗಳನ್ನು ಮತ್ತು ಘಟನೆಗಳನ್ನು ಒಳಗೊಂಡಿದೆ. ಎಲ್ಲಾ ವಸ್ತುಗಳು ಮತ್ತು ಘಟನೆಗಳು ಸ್ಪಂದನ ಶೀಲವಾಗಿವೆ. ಸ್ಪಂದನೆಯು ಧ್ರವಗಳನ್ನು ಅಥವಾ ಅಭಿ ಮುಖಗಳನ್ನು ಒಳಗೊಂಡಿದೆ ಧ್ರುವಗಳ ಪರಸ್ಪರ ಸಹಕಾರ ನೀಡಬಹುದು ಅಥವಾ ಸಂಘರ್ಷಿಸಬಹುದು.

ಎಲ್ಲಾ ವಸ್ತುಗಳು ಮತ್ತು ಘಟನೆಗಳು ಪರಸ್ಪರ ಸಹಕರಿಸುತ್ತಿರಲಿ ಅಥವಾ ಸಂಘರ್ಷಿಸುತ್ತಿರಲಿ, ಹೋದಾದೇಕೆಯಿಂದಿರಲಿ ಅಥವಾ ಗೊಂದಲ ಮಯವಾಗಿರಲಿ, ತೌ ಗೆ ಅನುಗುಣವಾಗಿ ರೂಪತಾಳಿ ನಿರ್ಧಾರಕ್ಕೆ ಬರುತ್ತದೆ.

ಆದರೆ ತೌ ಸ್ಪಂದನಲ್ಲಿ ಶೀಲ ಘಟನೆಯಲ್ಲ. ಉದಾಹರಣೆಗೆ ತೌ ಶಬ್ದವಲ್ಲ. ತೌ ಗೆ ತದ್ವಿರುದ್ಧವಾಗಿ ಯಾರೂ ಇಲ್ಲ. ತೌ ಏಕೈಕವಾಗಿದೆ. ನಾನು ತಿಳಿದಿರುವಂತೆ, ತೌ ಕ್ಕಿಂತ ಮೊದಲು ಏನೂ ಇರಲಿಲ್ಲ. ತೌ ಅನ್ನು ಯಾರೂ ರಚಿಸುರುವುದಿಲ್ಲ. ಯಾರೂ ಭಗವಂತನನ್ನು ಸೃಷ್ಟಿಸಿರುವುದಿಲ್ಲ.

ಮೇಲಿನ ವಿವರಣೆಗಳಿಂದ ತಿಳಿದು ಬರುವುದೇನೆಂದರೆ ತೌ ವಸ್ತುವಲ್ಲ. ಅದು ಶಬ್ದ ಅಥವಾ ಸ್ಪಂದನೆವಲ್ಲ. ಅದನ್ನು ಭಾಗಗಳಲ್ಲಿ ವಿಂಗಡಿಸಲು ಸಾಧ್ಯವಿಲ್ಲ. ಅದು ಬದಲಾಗುವುದಿಲ್ಲ. ತೌ ಅನ್ನು ನಿಸ್ಸಾರಗೊಳಿಸಲು ಅಥವಾ ಹೆಚ್ಚಿಸಲು ಸಾಧ್ಯವಿಲ್ಲ ಅದಕ್ಕೆ ಯಾರೂ ಭಾಗಿದಾರರು ಅಥವಾ ಬದಲಿ ಇಲ್ಲ.

ಮುಂದಾವರೆದು ತೌ ಏಕೈಕವಾಗಿದೆ. ತೌ ಪ್ರತಿಯೊಂದು ವಿಷಯದ ಬಗ್ಗೆ ನಿರ್ಧರಿಸುತ್ತದೆ. ಅದು ಆದಿ ಕಾಲದಿಂದಿದೆ. ಅದು ಪ್ರತಿಯೊಂದರ ನಿಯಮವಾಗಿದೆ. ಪ್ರತಿಯೊಂದು ಕಾರ್ಯದ ಹಿಂದಿರುವ ತತ್ವವಾಗಿರುವುದು. ಅದಕ್ಕೆ ರೂಪ ಅಥವಾ ಗುಣಗಳಿಲ್ಲದಿದ್ದು ಎಲ್ಲಾ ಕಾಲಗಳಲ್ಲಿಯೂ, ಎಲ್ಲೆಡೆ ಇರುವುದು. ಅದು ಶಾಶ್ವತವಾಗಿರುವುದು. ತೌ ಯಾರ ಮೇಲೂ ಅವಲಂಬಿತವಾಗಿಲ್ಲ.

● ಪವಿತ್ರ ದಿವ್ಯ ಗ್ರಂಥಗಳು "ಸೃಷ್ಟಿಕರ್ತನ ಹೊಲಿಕೆಯ ಯಾವುದೇ ವಸ್ತುವಿಲ್ಲ" ವೆನ್ನುತ್ತವೆ. ಸೃಷ್ಟಿಕರ್ತನ ವಿವರಣೆ ನೀಡುವುದು ಸುಲಭ ಸಾಧ್ಯ ಕಾರ್ಯವಲ್ಲ. ಆತನು ಏಕೈಕನಾಗಿರುವನೆಂದು, ಆತನ ಯಾರೂ ಪಾಲುದಾರರಿಲ್ಲವೆಂದು, ಆತನು ಆದಿಯಿಂದ ಇದ್ದು, ಶಾಶ್ವತನಾಗಿರುವನೆಂದು, ಆತನ ಸರಿ ಸಮಾನರು ಯಾರೂ ಇಲ್ಲವೆಂದು, ಆತನು ಯಾರನ್ನು ಅವಲಂಬಿತನಾಗಿಲ್ಲವೆಂಬುದನ್ನು ಮನಗಂಡರೆ ಸಾಕು.

ಅಧ್ಯಾಯ: 12

# ದೈವ ಶಿಕ್ಷೆಗೆ ಕಾರಣಗಳು

## 12. Cause of Calamities

● ಮದಯನ್ ಸ್ಥಳವು ಸೌದಿ ಅರೇಬಿಯಾ ಮತ್ತು ಸಿರಿಯಾದ ನಡುವೆ ಇದೆ. ಸೃಷ್ಟಿಕರ್ತನು ಈ ಪಟ್ಟಣದ ಜನರ ಮಾರ್ಗದರ್ಶನಕ್ಕಾಗಿ ಪ್ರವಾದಿ ಹ. ಶುಅೈಬ್(ಅ)ರನ್ನು ರವಾನಿಸಿದ್ದನು. ಹ. ಶುಅೈಬ್(ಅ), ಸೃಷ್ಟಿಕರ್ತನ ಸಂದೇಶವನ್ನು ಜನರ ಮುಂದೆ ಇಟ್ಟಾಗ, ಜನರು ಅವರಿಗೆ ಈ ರೀತಿ ಉತ್ತರಿಸಿದರು:

● "ನಿಮ್ಮ ಬೋಧನೆಯು ನಮ್ಮ ಪೂರ್ವಿಕರ ಕಾಲದಿಂದಲೂ ಮಾಡುತ್ತಿರುವ ವಿಗ್ರಹರಾಧನೆಯಿಂದ ನಮ್ಮನ್ನು ತಡೆಯುತ್ತದೆ. ನಾವು ಸಂಪಾದಿಸಿರುವ ಹಣದಿಂದ ಮನಸೋ ಇಚ್ಛೆ ಖರ್ಚು ಮಾಡುವುದರಿಂದಲೂ ನೀವು ನಮ್ಮನ್ನು ತಡೆಯುತ್ತಿರುವಿರಿ? (ಪವಿತ್ರ ಕುರ್‌ಆನ್: 11:85)

● ಮದಯನ್ ಜನರು ಏಕೈಕ ದೇವನನ್ನು ಆರಾಧಿಸಲು ತಯಾರಿರಲಿಲ್ಲ ಮತ್ತು ಪ್ರವಾದಿ ಶುಅೈಬ್(ಅ)ರ ನೈತಿಕ ಉಪದೇಶಗಳಿಂದಲೂ ಶೋಸಿಹೋಗಿದ್ದರು. ಮದಯನ್‌ನ ಹೆಚ್ಚಿನ ಜನರು ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ವ್ಯಾಪಾರದಲ್ಲಿ ಅವರು ವಂಚನೆ ಮಾಡುತ್ತಿದ್ದರು. ತೂಕದಲ್ಲಿ ಕಡಿಮೆ ನೀಡುತ್ತಿದ್ದರು ಹಾಗೂ ಕಳಪೆ ವಸ್ತುಗಳನ್ನು ಶೋಷ ಪೂರಿತ ವಸ್ತುಗಳನ್ನು ಮಾರುತ್ತಿದ್ದರು. ಖರೀದಿಸುವಾಗ ಮಾತ್ರ ಉತ್ತಮ ಗುಣಮಟ್ಟದ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಬಯಸುತ್ತಿದ್ದರು. ಅಮಾಯಕ ಜನರನ್ನು ಬೇದರಿಸುತ್ತಿದ್ದರು ಮತ್ತು ಅವರ ಪ್ರದೇಶದಿಂದ ಹಾಗೂ ಹೋಗುತ್ತಿದ್ದ ಪ್ರಯಾಣಿಕರ ಸುಲಿಗೆ ಮಾಡುತಿದ್ದರು.

● ಮದಯನ್ ಜನರ ವರ್ತನೆ ಬಗ್ಗೆ ಕುರ್‌ಆನ್ ಈ ರೀತಿ ವರ್ಣಿಸಿದೆ:

"ತೂಕದಲ್ಲಿ ಕಡಿತಗೊಳಿಸಿ ಕೊಡುವವರಿಗೆ ವಿನಾಶವಿದೆ. ಅವರು ಜನರಿಂದ ಪಡೆಯುವಾಗ ಸಂಪೂರ್ಣವಾಗಿ ಪಡೆಯುತ್ತಾರೆ ಮತ್ತು ಅಳತೆ ಮಾಡಿ ಅಥವಾ ತೂಕ ಮಾಡಿ (ಜನರಿಗೆ) ಕೊಡುವಾಗ ಕಡಿಮೆ ಕೊಡುತ್ತಾರೆ. ಒಂದು ಮಹಾ ದಿನದಂದು ಇವರನ್ನು ಎಬ್ಬಿಸಿ ತರಲಾಗುವುದೆಂದು ಇವರು ಗ್ರಹಿಸುವುದಿಲ್ಲವೇ? (ಅದು) ಎಲ್ಲ ಜನರೂ ಸರ್ವ ಲೋಕಗಳ ಪಾಲಕ ಪ್ರಭುವಿನ ಮುಂದೆ ನಿಲ್ಲುವ ದಿನವಾಗಿದೆ. (ಪವಿತ್ರ ಕುರ್‌ಆನ್ 83:1–6)

ಜನರ ಈ ಕೃತ್ಯಗಳ ಕಾರಣ ಸೃಷ್ಟಿಕರ್ತನ ಯಾತನೆ ಅವರ ಮೇಲೆ ಎರಗಿತು. ಒಂದು ದೊಡ್ಡ ಕಪ್ಪು ಮೋಡ ಮದಯನ್ ಪಟ್ಟಣವನ್ನು ಆವರಿಸಿತು. ಜನರು ಮಳೆಯಾಗಬಹುದೆಂದು ನಿರೀಕ್ಷಿಸಿ ಮೋಡದ ಕೆಳಗೆ ಜಮಾಯಿಸಿದರು. ಪಟ್ಟಣದ ಎಲ್ಲಾ ಜನರು ಮೋಡದ ಕೆಳಗೆ ಜಮಾಯಿಸಿದಾಗ ಆಕಸ್ಮಿಕವಾಗಿ ಬೆಂಕಿಯ ಸುರಿಮಳೆ ಪ್ರಾರಂಭವಾಗಿ ಎಲ್ಲಾ ಜನರನ್ನು ಆಹಾಲೆ ತೆಗೆದು ಕೊಂಡಿತ್ತು.

"... ನೀನು ಸತ್ಯವಾಗಿ ಯಾಗಿದ್ದರೆ ನಮ್ಮ ಮೇಲೆ ಆಕಾಶದ ಒಂದು ತುಂಡನ್ನು ಬೀಳಿಸಿ ಬಿಡು" ಎಂದು ಆಗ ಶುಐಬರು "ನೀವು ಮಾಡುತ್ತಿರುವುದನ್ನೆಲ್ಲ ನನ್ನ ಪ್ರಭು ತಿಳಿದಿರುವವನು" ಎಂದರು. ಅವರು ಅವರನ್ನು (ಶುಐಬರನ್ನು) ಸುಳ್ಳಾಗಿಸಿ ಬಿಟ್ಟರು. ಕೊನೆಗೆ ಛತ್ರಿಯ ದಿನದ ಯಾತನೆ ಅವರ ಮೇಲೆ ಎರಗಿ ಬಿಟ್ಟಿತು. ಅದೊಂದು ಅತಿ ಭಯಾನಕ ದಿನದ ಯಾತನೆಯಾಗಿತ್ತು. (ಪವಿತ್ರ ಕುರ್‌ಆನ್ 26:

189)

● ಪ್ರವಾದಿ ಲೂತ್(ಅ) ಪ್ರವಾದಿ ಇಬ್ರಾಹೀಮ್(ಅ)ರ ಸಹೋದರ ಸಂಬಂಧಿಯಾಗಿದ್ದರು. ಅವರು ಮೆಸೆಪೊಟೇಮಿಯಾ (ಇರಾಕ್) ನಲ್ಲಿರುವ ಪ್ರಾಚೀನ ನಗರ 'ಉರ್'ನ ನಿವಾಸಿಯಾಗಿದ್ದರು. ಆದರೆ ಸೃಷ್ಟಿಕರ್ತನು ಅವರಿಗೆ ಸೊಡೋಮ್ ಮತ್ತು ಗೊಮೊರ್ರಹ್ ಪ್ರದೇಶಗಳಿಗೆ ತೆರಳಿ ಅಲ್ಲಿಯ ಜನರಿಗೆ ಮಾರ್ಗದರ್ಶನ ಮಾಡಲು ಆದೇಶಿಸಿದನು.

ಸೊಡೋಮ್ ಮತ್ತು ಗೊಮೊರ್ರಹ್‌ದ ಜನರು ಸಲಿಂಗ ಕಾಮ ಕ್ರೀಡೆಯಲ್ಲಿ ಮತ್ತು ಕಳ್ಳತನದಲ್ಲಿ ತೊಡಗಿದ್ದರು. ಪ್ರವಾದಿ ಲೂತ್(ಅ) ಜನರನ್ನು ಈ ಹೀನ ಕಾರ್ಯಗಳಿಂದ ತಡೆದರು. ಅವರ ಬೋಧನೆಗೆ ಜನರ ಪ್ರತಿಕ್ರಿಯೆ ಈ ರೀತಿಯದಾಗಿತ್ತು.

"ಇವರನ್ನು ನಮ್ಮ ನಾಡಿನಿಂದ ಹೊರಕ್ಕೆ ದಬ್ಬಿರಿ. ಭಾರೀ ಪರಿಶುದ್ಧರಾಗುತ್ತಾರಿವರು! ಎಂಬುದರ ವಿನಾ ಇನ್ನೇನೂ ಇರಲಿಲ್ಲ." (ಪವಿತ್ರ ಕುರ್‌ಆನ್: 7:8)

ಒಂದು ದಿನ ಮೂವರು ದೇವಚರರು ಸುಂದರ ಬಾಲಕರ ರೂಪದಲ್ಲಿ ಪ್ರವಾದಿ ಲೂತ್(ಅ)ರ ಮನೆಗೆ ಅತಿಥಿಗಳಾಗಿ ಆಗಮಿಸಿದರು. ಜನರಿಗೆ ಹ. ಲೂತ್(ಅ)ರ ಮನೆಗೆ ಸುಂದರ ಬಾಲಕರು ಬಂದಿರುವ ವಿಷಯ ತಿಳಿಯುತ್ತಲೇ, ಅವರ ಮನೆಗೆ ಧಾವಿಸಿ, ಆ ಬಾಲಕರನ್ನು ಅವರ ವಶಕ್ಕೆ ಒಪ್ಪಿಸಲು ಬೇಡಿಕೆ ಇದ್ದರು.

"ಅವರು (ಈ ರೀತಿ) ಉತ್ತರಿಸಿದರು, 'ನಿಮ್ಮ ಪುತ್ರಿಯರಲ್ಲಿ ನಮಗೇನೂ ಹಕ್ಕಿಲ್ಲವೆಂಬುದು ನಿಮಗೆ ಗೊತ್ತೇ ಇದೆ. ನಾವು ಇಚ್ಛಿಸುವುದೇನೆಂಬುದೂ ನಿಮಗೆ ತಿಳಿದಿದೆ." (ಪವಿತ್ರ ಕುರ್‌ಆನ್: 11:78–79)

ದೇವಚರರು ಪ್ರವಾದಿ ಲೂತ್(ಅ)ರ ಆತಂಕವನ್ನು ನೋಡಿ ಈ ರೀತಿ ನುಡಿದರು.

" ಓ ಲೂತ್, ನಾವು ನಿಮ್ಮ ಪ್ರಭುವಿನಿಂದ ಕಳುಹಿಸಲ್ಪಟ್ಟ ದೇವಚರರಾಗಿರುತ್ತೇವೆ. ನಿಮಗೇನೂ ಕೇಡುಂಟು ಮಾಡಲು ಇವರಿಂದಾಗದು. ನೀವು ಕತ್ತಲೆ ಇರುವಾಗಲೇ ನಿಮ್ಮ ಕುಟುಂಬದವರನ್ನು ಪಂಗಡ ಕರೆದು ಕೊಂಡು ಹೋಗಿ ಬಿಡಿರಿ. ನಿಮ್ಮಲ್ಲಿ ಯಾರೊಬ್ಬರೂ ಹಿಂದೆ ತಿರುಗಿ ನೋಡಬಾರದೆಂಬುದನ್ನು ನೆನಪಿಟ್ಟುಕೊಳ್ಳಿರಿ. ಆದರೆ ನಿಮ್ಮ ಪತ್ನಿ (ನಿಮ್ಮೊಂದಿಗೆ ಹೋಗಲಾರಳು) ಏಕೆಂದರೆ ಇವರ ಮೇಲೆ ಸಂಭವಿಸಲಿರುವುದೆಲ್ಲಾ ಅವಳ ಮೇಲೂ ಸಂಭವಿಸುವುದು. ಅವರ ವಿನಾಶಕ್ಕಾಗಿ ಪ್ರಾರಃಕಾಲವು ನಿಶ್ಚಯಿಸಲ್ಪಟ್ಟಿದೆ." (ಪವಿತ್ರ ಕುರ್‌ಆನ್: 11:81)

ಮರು ದಿನ ಸೂರ್ಯೋದಯದ ಮೊದಲು ಭಯಾನಕ ಭೂಕಂಪ ತೀವ್ರವಾದ ಶಬ್ದದೊಂದಿಗೆ ಸಂಭವಿಸಿತು. ದೇವಚರರು ನಗರದ ಮೇಲೆ ಕಲ್ಲಿನ ಮಳೆ ಗೈದರು. ನಗರದಲ್ಲಿ ಒಂದೇ ಒಂದು ವ್ಯಕ್ತಿ ಬದುಕುಳಿಯಲಿಲ್ಲ. ಹ. ಲೂತ್(ಅ)ರ ಪತ್ನಿ ಸಹ ಈ ದೈವಿಕ ಶಿಕ್ಷೆಯಲ್ಲಿ ನಾಶವಾದಳು.

ಪವಿತ್ರ ಬೈಬಲ್‌ನಲ್ಲಿ ಈ ಘಟನೆಯ ವಿವರಗಳು ಕೆಲ ವ್ಯತ್ಯಾಸದೊಂದಿಗೆ ಲಭ್ಯವಿದೆ. ಬೈಬಲ್‌ನಲ್ಲಿ ದೇವಚರರು ಜನರ ಮೇಲ್ಗೆ ಉರಿಯುತ್ತಿರುವ ಸಾರ ಜನಕದ ಮಳೆಗೆರೆದರೆಂದು ಹೇಳಲಾಗಿದೆ. (ಜೆನೆಸಿಸ್ ಅಧ್ಯಾಯ: 19 ಸೂಕ್ತ: 1–30)

ಸಲಿಂಗ ಕಾಮವು ಘೋರ ಪಾಪ ಕಾರ್ಯವಾಗಿರುವುದು. ಯಾರೂ ಈ ಪಾಪ ಕೃತ್ಯದಲ್ಲಿ ತೊಡಗಬಾರದು ಹಾಗೂ ಈ ಪಾಪ ಕಾರ್ಯದಲ್ಲಿ ತೊಡಗಿರುವವರೊಂದಿಗೆ ಅನುಕಂಪ ತೋರಬಾರದು.

ಹ. ನೂಹ್(ಅ) ಅಥವಾ ಮನುರಿಗೆ

ಮೂವರು ಗಂಡು ಮಕ್ಕಳಿದ್ದರು. ಹಾಮ್, ಶೇಮ್ ಮತ್ತು ಯಕೂತ್. ಶೇಮ್‌ರ ಸಂತತಿಯಾದ ಆದ ಸಮುದಾಯವು ಯಮೆನ್‌ನಲ್ಲಿ ನೆಲೆಸಿತ್ತು. ಸೃಷ್ಟಿಕರ್ತನು ಅವರಿಗೆ ಅಪಾರ ಸಂಪತ್ತು, ಜಾನುವಾರಗಳು, ಮಕ್ಕಳು ಮತ್ತು ತೋಟಗಳಿಂದ ಅನುಗ್ರಹಿಸಿದ್ದನು. ಆದ ಸಮುದಾಯ ಕಟ್ಟಡ ನಿರ್ಮಾಣದಲ್ಲಿ ನಿಪುಣರಾಗಿದ್ದರು. 'ಅದೆನ್' ಬಳಿ ಅವರು ಒಂದು ಬೃಹತ್ ಅರಮನೆಯನ್ನು ನಿರ್ಮಿಸಿದ್ದರು... ಇದಕ್ಕೆ 'ಇರಾಮ್'ನ ತೋಟ ವೆನ್ನುತ್ತಾರೆ. ಈ ಸಮುದಾಯದ ಸಮ್ರಾಜ್ಯ ಸಿರಿಯಾ, ಇರಾಕ್, ಇರಾನ್ ಪಾಕಿಸ್ತಾನ ಮತ್ತು ಅರಬಿ ದೇಶಗಳಲ್ಲಿ ವ್ಯಾಪಿಸಿತ್ತು. ಈ ಸಮುದಾಯಕ್ಕೆ ತಮ್ಮ ಸಮರ್ಥ್ಯದ ಬಗ್ಗೆ ಬಹಳ ಅಹಂಕಾರವಿತ್ತು. ತಮ್ಮನ್ನು ಜಯಿಸಲು ಯಾರಿಗೂ ಸಾಧ್ಯವಿಲ್ಲವೆಂದು ಭಾವಿಸುತ್ತಿದ್ದರು.

ಕಾಲ ಕಳೆದಂತೆ ಈ ಜನರು ಮನುವಿನ ಬೋಧನೆಗಳಿಂದ ದೂರ ಸರಿದರು. ಪಾಪ ಕೃತ್ಯಗಳಲ್ಲಿ, ಅಕ್ರಮಗಳಲ್ಲಿ, ಹಿಂಸೆ, ಸಕೀಹ್, ಸಾಲಿಮ್ಹ, ರಝೀಕ್ಹ, ಹಾಫಿಝುನ್ ಮೊದಲಾದ ದೇವತೆಗಳ ಆರಾಧನೆಯಲ್ಲಿ ತೊಡಗಿದರು.

ಸೃಷ್ಟಿಕರ್ತನು ಈ ಜನರ ಮಾರ್ಗದರ್ಶನಕ್ಕಾಗಿ ಹ. ಹೂದ್(ಅ)ರನ್ನು ಕಳುಹಿಸಿದನು. ಹ. ಹೂದ್(ಅ) ಜನರಿಗೆ ಈ ರೀತಿ ಉಪದೇಶಿಸಿದರು, "ಸಹೋದರರೇ, ಏಕೈಕನಾಗಿರುವ ನಿಮ್ಮ ಸೃಷ್ಟಿಕರ್ತನನ್ನು ಆರಾಧಿಸಿರಿ. ಕೇವಲ ಆತನು ಮಾತ್ರ ಆರಾಧನೆಗೆ ಅರ್ಹನು. ನೀವು ಏಕೆ ಆತನನ್ನು ಭಯಪಡುವುದಿಲ್ಲ? ಇದಕ್ಕೆ ಆದ್ ಸಮುದಾಯದ ನಾಯಕನು ಉತ್ತರಿಸಿದನು,

"ಹೂದ್ ನೀನು ಓರ್ವ ಮೂರ್ಖ ಮತ್ತು ಸುಳ್ಳುಗಾರನ ತರಹ ಕಾಣುವೆ."

ಹ. ಹೂದ್(ಅ) ಉತ್ತರಿಸಿದರು:

"ಓ ಜನರೇ, ನಾನು ಮೂರ್ಖನಲ್ಲ. ನಾನು ನಿಮ್ಮ ಸೃಷ್ಟಿಕರ್ತನ ಸಂದೇಶವಾಹಕನಾಗಿರುವೆನು. ನಾನು ನಿಮ್ಮ ಹಿತ ಚಿಂತಕನಾಗಿರುವೆನು. ಸೃಷ್ಟಿಕರ್ತನ ಬೋಧನೆಯನ್ನು ನಿಮಗೆ ತಲುಪಿಸುತ್ತಿರುವೆನು. ಓರ್ವ ಮಾನವನು ಪ್ರವಾದಿಯಾಗಿ ನಿಮ್ಮ ಒಳಗೆ ಬಂದಿರುವುದು ನಿಮಗೆ ಅಚ್ಚರಿಯ ಸಂಗತಿಯಾಗಿದೆಯೇ? ಸೃಷ್ಟಿಕರ್ತನ ಅನುಗ್ರಹಗಳನ್ನು ಜ್ಞಾಪಿಸಿಕೊಳ್ಳಿರಿ. ಆತನು ನಿಮಗೆ ಸಿರಿ–ಸಂಪತ್ತನ್ನು ನೀಡಿದನು ಮತ್ತು ಮನು (ಹ. ನೂಹ್(ಅ)ರ ನಂತರ ಅಧಿಕಾರವನ್ನು ನೀಡಿದನು."

ಆದ್ ಸಮುದಾಯವು ಉತ್ತರಿಸಿತು,

"ಪ್ರಾಚೀನ ಕಾಲದಿಂದಲೂ ನಮ್ಮ ಪೂರ್ವಿಕರು ಆರಾಧಿಸುತ್ತಾ ಬಂದಿರುವ ಈ ದೇವತೆಗಳ ಆರಾಧನೆಯಿಂದ ನೀನು ನಮ್ಮನ್ನು ತಡೆಯ ಬಯಸುತ್ತೀಯಾ? ನೀನು ನಿಜವಾಗಿಯೂ ಪ್ರವಾದಿಯಾಗಿದ್ದರೆ, ನೀನು ನಮ್ಮನ್ನು ಹೆದರಿಸುತ್ತಿದ್ದ ದೈವಿಕ ಯಾತನೆಯನ್ನು ನಮ್ಮ ಮೇಲೆ ಎರಗಿಸು." (ಪವಿತ್ರ ಕುರ್‌ಆನ್: 7: 65–70)

ದೈವಿಕ ಯಾತನೆಯು ಮರಳಿನ ಬಿರುಗಾಳಿಯ ರೂಪದಲ್ಲಿ ಆದ್ ಸಮುದಾಯದ ಮೇಲೆ ಎರಗಿತು. ನಿರಂತರ ಏಳು ರಾತ್ರಿಗಳು ಮತ್ತು ಎಂಟು ದಿನಗಳು ಈ ಬಿರುಗಾಳಿಯು ಎರಗಿತು. ಆದ್ ಸಮುದಾಯದ ಸರ್ವಸ್ವವು ಈ ಬಿರುಗಾಳಿಯಲ್ಲಿ ನಾಶ ಗೊಂಡಿತು.

**ಕೊನೆಯಲ್ಲಿ ಸೃಷ್ಟಿಕರ್ತನು ಈ ರೀತಿ ನುಡಿದನು:**

"ಕೊನೆಗೆ ನಾವು ನಮ್ಮ ಕೃಪೆಯಿಂದ ಹೂದ್ ಮತ್ತು ಅವರ ಸಂಗಡಿಗರನ್ನು ರಕ್ಷಿಸಿದೆವು ಮತ್ತು ನಮ್ಮ ನಿದರ್ಶನಗಳನ್ನು ಸುಳ್ಳಾಗಿಸಿದವರ ಬೇರನ್ನೇ ಕಡಿದು ಬಿಟ್ಟೆವು. ಅವರು ವಿಶ್ವಾಸವಿರಿಸುವವರಾಗಿರಲಿಲ್ಲ." (ಪವಿತ್ರ ಕುರ್‌ಆನ್: 7:72)

ಸಮೂದ್ ಸಮುದಾಯವು ಸಿರಿಯಾ ಮತ್ತು

ಸೌದಿ ಅರೇಬಿಯಾದ ನಡುವಿರುವ ವಾದಿಯುಲ್ ಕುರಾ ಮತ್ತು ಅಲ್ ಹಿಜ್ರ್‌ನಲ್ಲಿ ನೆಲೆಸಿದ್ದರು. ಅವರು ಹ. ನೂಹ್(ಅ)ರ ಪುತ್ರ ಹ. ಶೇಮ್‌ರ ಸಂತತಿಯಾಗಿದ್ದರು.

ಸೃಷ್ಟಿಕರ್ತನು ಸಮೂದ್ ಸಮುದಾಯಕ್ಕೆ ಸಂಪತ್ತು ಹಾಗೂ ಪ್ರಬಲ ದೇಹ ಧಾರ್ಡ್ಯತೆಯಿಂದ ಅನುಗ್ರಹಿಸಿದ್ದನು. ಅವರು ಶಾರೀರಿಕವಾಗಿ ಎಷ್ಟು ಶಕ್ತಿಶಾಲಿಯಾಗಿದ್ದರೆಂದರೆ ಬೆಟ್ಟ ಗುಡ್ಡಗಳಲ್ಲಿ ಕಲ್ಲು ಬಂಡೆಯಲ್ಲಿ ಮನೆಯನ್ನು ಕೊರೆಯುತ್ತಿದ್ದರು.

ಕಾಲಾನುಕಾಲದಲ್ಲಿ ಸಮೂದ್ ಸಮುದಾಯವು ತಮ್ಮ ಶಕ್ತಿ ಮತ್ತು ಸಂಪತ್ತಿನ ಮದದಲ್ಲಿ ಸೃಷ್ಟಿಕರ್ತನಲ್ಲದೇ, ಇತರ ದೇವಿ–ದೇವತೆಗಳನ್ನೂ ಆರಾಧಿಸಲಾರಂಭಿಸಿದರು. ಸೃಷ್ಟಿಕರ್ತನು ಹ. ಸಾಲಿಹ್(ಅ) ರನ್ನು ಈ ಜನರ ಮಾರ್ಗದರ್ಶನಕ್ಕಾಗಿ ರವಾನಿಸಿದನು. ಅಹಂಕಾರದಲ್ಲಿ ಮುಳುಗಿದ್ದ ಸಮೂದ್ ಸಮುದಾಯವು ಪ್ರವಾದಿತ್ವವನ್ನು ಸಾಬೀತು ಪಡಿಸಲು ಪವಾಡವನ್ನು ತೋರಿಸುವಂತೆ ಹ. ಸಾಲಿಹ್(ಅ)ರಿಗೆ ಬೇಡಿಕೆಯನ್ನಿಟ್ಟರು.

ಸಮೂದ್ ಸಮುದಾಯದ ಬೇಡಿಕೆ ಮೇರೆಗೆ ಸೃಷ್ಟಿಕರ್ತನು ಬಂಡೆ ಕಲ್ಲಿನಿಂದ ಒಂದು ಹೆಣ್ಣು ಒಂಟೆಯನ್ನು ಸೃಷ್ಟಿಸಿದನು. ಆದರೆ ಮದವೇರಿದ್ದ ಸಮೂದ್ ಸಮುದಾಯವು ಈ ಒಂಟೆಯನ್ನು ಕೊಂದು ಹಾಕಿತು. ಅಷ್ಟೇ ಅಲ್ಲ. ತಮ್ಮ ಕೃತ್ಯಗಳ ಕಾರಣ, ತಮ್ಮ ಮೇಲೆ ದೈವಿಕ ಶಿಕ್ಷೆಯನ್ನು ಎರಗಿಸುವಂತೆ ಹ. ಸಾಲಿಹ್(ಅ) ರಿಗೆ ಪಂಥಾಹ್ವಾನವನ್ನು ನೀಡಿದರು.

ಸೃಷ್ಟಿಕರ್ತನ ಯಾತನೆಯು ಭಯಂಕಾರ ಶಬ್ದದ ರೂಪದಲ್ಲಿ ಬಂದಿತು. ಮೂರನೆಯ ದಿನ ಎಲ್ಲಾ ಜನರು ಸತ್ತು ಬಿದ್ದಿದ್ದರು. (ಪವಿತ್ರ ಕುರ್‌ಆನ್: 91) ಸಮೂದ್ ಸಮುದಾಯವು ಬೆಟ್ಟ ಗುಡ್ಡಗಳಲ್ಲಿ, ಕಲ್ಲು ಬಂಡೆ ಕೊರೆದು ನಿರ್ಮಿಸಿದ್ದ ಮನೆಗಳನ್ನು ಇಂದಿಗೂ ನೋಡಬಹುದಾಗಿದೆ (ಚಿತ್ರವನ್ನು ನೋಡಿ)

**ಸೃಷ್ಟಿಕರ್ತನ ನಿಯಮಗಳು:**

ಪವಿತ್ರ ವೇದಗಳು, "ಭಗವಂತನ ನಿಯಮಗಳು ಬದಲಾಗುವುದಿಲ್ಲ."ವೆಂದು ಹೇಳುತ್ತವೆ. (ಋಗ್ವೇದ 5:24:10) ಅಥರ್ವ ವೇದವು ಸೃಷ್ಟಿಕರ್ತನ ಕಾನೂನನ್ನು ಬದಲಾಯಿಸಲು ಸಾಧ್ಯವಿಲ್ಲ ಎನ್ನುತ್ತದೆ. (ಅಥರ್ವ ವೇದ 18:1:10)

- ಪವಿತ್ರ ಕುರ್‌ಆನ್ ಈ ಬಗ್ಗೆ ಈ ರೀತಿ ನುಡಿಯುತ್ತದೆ:

"ಅಲ್ಲಾಹನ ವಚನಗಳು ಬದಲಾಗುವಂತಿಲ್ಲ." (ಪವಿತ್ರ ಕುರ್‌ಆನ್: 10:64)

"ನೀವು ಅಲ್ಲಾಹನ ಕಾರ್ಯ ನಿಧಾನದಲ್ಲಿ ಯಾವ ಬದಲಾವಣೆಯನ್ನೂ ಕಾಣಲಾರಿರಿ." (ಪವಿತ್ರ ಕುರ್‌ಆನ್: 48:23)

ತನ್ನ ಬೋಧನೆಗಳನ್ನು ಮತ್ತು ಆದೇಶಗಳನ್ನು ಧಿಕ್ಕರಿಸಿದ ಮತ್ತು ಕಡೆಗಣಿಸಿದ ಅನೇಕ ಜನಾಂಗಳನ್ನು, ನಾಗರಿಕತೆಗಳನ್ನು ಸೃಷ್ಟಿಕರ್ತನು ನಾಶಗೊಳಿಸಿರುವನು. ಭವಿಷ್ಯದಲ್ಲೂ ಆತನ ಆದೇಶಗಳನ್ನು ಧಿಕ್ಕರಿಸುವ ಸಮುದಾಯಗಳಿಗೆ ಘೋರ ವಿನಾಶ ಕಾದಿದೆ.

ಜನರನ್ನು ಎಚ್ಚರಿಸಲು ಸೃಷ್ಟಿಕರ್ತನು ಈ ರೀತಿ ಹೇಳಿರುವನು,

- "ತಮ್ಮ ಸಂಪತ್ಸಾ ಕರ್ಯಗಳ ಬಗ್ಗೆ ಅಹಂಭಾವ ಹೊಂದಿದ್ದ ಎಷ್ಟೋ ನಾಡುಗಳನ್ನು ನಾವು ನಾಶಗೊಳಿಸಿದ್ದೇವೆ. ಅದೋ ಅವರ ನಿವಾಸಗಳು ಹಾಳು ಬಿದ್ದಿರುವುದನ್ನು ನೋಡಿಕೊಳ್ಳಿರಿ. ಅವುಗಳಲ್ಲಿ ಅನಂತರ ಯಾರಾದರೂ ವಾಸಿಸಿದ್ದೇ ಅಪರೂಪ. ಕೊನೆಗೆ ನಾವೇ ಅವುಗಳ ವಾರೀಸುದಾರರಾದೆವು." (ಪವಿತ್ರ ಕುರ್‌ಆನ್: 28:58)

● ಪ್ರಾಚೀನ ನಾಗರೀಕತೆಗಳ ಇತಿಹಾಸವನ್ನು ಓದಿದಾಗ, ನಾಶ ಹೊಂದಿದ ಅನೇಕ ನಾಗರಿಕತೆಗಳಲ್ಲಿ ವಾಸವಿದ್ದ ಜನರ ವಸತಿಗಳು ಸುರಕ್ಷಿತವಾಗಿದ್ದು, ಕೇವಲ ಜನರು ನಾಶಹೊಂದಿರುವುದನ್ನು ಕಾಣುತ್ತೇವೆ. ಈ ಜನರನ್ನು ಸೃಷ್ಟಿಕರ್ತನ ಶಿಕ್ಷೆಯ ಕಾರಣದಿಂದ ನಾಶಹೊಂದಿರುವರೆಂದು ಇತಿಹಾಸ ಹೇಳುವುದಿಲ್ಲ. ಆದರೆ ಈ ನಾಗರಿಕತೆಗಳ ಇತಿಹಾಸದ ಅಧ್ಯಯನ ನಡೆಸಿದಾಗ, ಈ ನಾಗರಿಕತೆಗಳ ಜನರು ನಿಸ್ಸಂಶಯವಾಗಿ ದೈವಿಕ ವಿಕೋಪದ ಕಾರಣದಿಂದಲೇ ನಾಶ ಹೊಂದಿರುವುದು ನಿಚ್ಚಳವಾಗುತ್ತದೆ. ಇದೇ ರೀತಿ ಹೂದ್, ಆದ್, ಸಮೂದ್ ಮತ್ತು ಮದ್ಯೆನ್ ಸಮುದಾಯಗಳು ನಾಶಹೊಂದಿದ್ದು ಇದರ ವಿವರಗಳು ಕುರ್‌ಆನ್, ಬೈಬಲ್ ಮತ್ತು ತೌರಾತ್‌ನಲ್ಲಿವೆ.

● Whitaker's world of fat – ರಸ್ಸೆಲ್ ಆಶ್ ಪುಟಾಗಿರವರ ಪ್ರಕಾರ, ಮನೆಗಳು ಸುರಕ್ಷಿತವಾಗಿದ್ದು, ವಾಸಿಸುವವರು ಮಾತ್ರ ನಾಶಹೊಂದಿರುವ ಪಾಳು ಬಿದ್ದಿರುವ ನಗರಗಳು ಕ್ಯಾಂಬೋಡಿಯಾದ Ang Kor ಮೆಕ್ಸಿಕೋನ Chichen Ikza, ಅಮೇರಿಕಾದ Cliff Palace Colarado, ಪೆರುವಿನ Rachu Picchu ಮತ್ತು ಇರಾಕಿನ Ur ಗಳಾಗಿವೆ. ಇತರ ಕಾರಣಗಳಿಂದ ನಾಶವಾಗಿರುವ ನಗರಗಳೆಂದರೆ ಇಟಲಿಯ– Pompeic, ತುರ್ಕಿಯ ಟ್ರಾಯ್ ಮೊದಲಾದವುಗಳು ಸಮುದ್ರದಲ್ಲಿ ಮುಳುಗಿ ನಾಶವೊಂದಿರುವ ನಗರಗಳೆಂದರೆ ಅಟ್ಲಾಂಟಿಕ್, ಜಪಾನಿನ ಓಕಿನಾದ ನೀರಿನಲ್ಲಿ ಮುಳುಗಿದ ನಗರ, ಕ್ಯೂಬಾದ ಮುಳುಗಿದ ನಗರ ಮೊದಲಾದವುಗಳು. ಈ ನಗರಗಳು ನಾಶ ಹೊಂದಿರುವುದಕ್ಕೆ ನಿಖರ ಕಾರಣಗಳನ್ನು ಯಾರು ನೀಡುವ ಪರಿಸ್ಥಿತಿಯಿಲ್ಲ.

● ಜನರು ಸಾಮಾನ್ಯವಾಗಿ ಧನಿಕರಾದಾಗ, ಸೃಷ್ಟಿಕರ್ತನ ಆದೇಶಗಳನ್ನು ಉಲ್ಲಂಘಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಸೃಷ್ಟಿಕರ್ತನು ಜನರನ್ನು ಎಚ್ಚರಿಸಲು, ಲಘುವಾದ ಶಿಕ್ಷೆಯನ್ನು ನೀಡುತ್ತಾನೆ. ಉದಾಹರಣಗೆ ಬರಗಾಲ, ಪ್ರವಾಹ ಭೂಕಂಪ, ಸಾಂಕ್ರಮಿಕ ರೋಗಗಳು ಮೊದಲಾದ ವಿಪತ್ತುಗಳು ಜನರ ಮೇಲೆ ಎರಗುತ್ತವೆ.

"ಆ ನಂತರ ಅವರು, ತಮಗೆ ಕೊಡಲ್ಪಟ್ಟ ಬುದ್ಧಿವಾದವನ್ನು ಮರೆತು ಬಿಟ್ಟಾಗ ನಾವು ಅವರಿಗಾಗಿ ಎಲ್ಲ ವಿದಧ ಸಂಪನ್ನತೆಯ ದ್ವಾರಗಳನ್ನು ತೆರೆದು ಬಿಟ್ಟೆವು. ಅವರಿಗೆ ದಯಪಾಲಿಸಲ್ಪಟ್ಟ ಕೊಡುಗೆಗಳಲ್ಲಿ ಅವರು ಚೆನ್ನಾಗಿ ಮಗ್ನರಾಗಿದ್ದಾಗ, ನಾವು ಹಠಾತ್ತನೆ ಅವರನ್ನು ಹಿಡಿದುಕೊಂಡೆವು." (ಪವಿತ್ರ ಕುರ್‌ಆನ್: 6:44)

ದೈವಿಕ ಶಿಕ್ಷೆ ಎರಗಿ ನಾಶಹೊಂದಿದ ನಗರಗಳ ಚಿತ್ರವನ್ನು ನೀಡಲಾಗಿದೆ.

ಸೃಷ್ಟಿಕರ್ತನು ಮನುಷ್ಯನ ಮೇಲೆ ಅನುಗ್ರಹಗಳ ಮಳೆ ಸುರಿಸಿದಾಗ, ಮನುಷ್ಯನು ಹೆಚ್ಚು ವಿನ್ವ್ರನಾಗ್ಬೇಕೇ ಎನ್ಃಹ್ ಅಹಂಕಾರಿಯಾಗುವುದಲ್ಲ. ಬೈಬಲ್ ಹೇಳುವಂತೆ ಸನ್ನಡತೆವುಳ್ಳವರು ಮಾತ್ರ ಯಶಸ್ವಿಯಾಗುತ್ತಾರೆ.

"ಸನ್ನಡೆಯುಳ್ಳವರು ತೆಂಗಿನ ಮರದಂತೆ ಏಳಿಗೆಯನ್ನು ಹೊಂದುತ್ತಾನೆ." (ಪವಿತ್ರ ಬೈಬಲ್ ಪಿ.ಎಸ್. 92:12)

ವ್ಯಾಪಾರ ವಹಿವಾಟಿನಲ್ಲಿ ವಂಚನೆ, ಅಕ್ರಮ, ಅನ್ಯಾಯ, ಸಲಿಂಗ ಕಾಮ, ದೈವಿಕ ಆದೇಶಗಳ ಉಲ್ಲಂಘನೆ ಮೊದಲಾದವುಗಳಿಂದ ಜನರು ದೈವಿಕ ಶಿಕ್ಷೆಗೆ ಗುರಿಯಾಗುತ್ತಾರೆ. ದೈವಿಕ ಶಿಕ್ಷೆಯಿಂದ ಪಾರಾಗಲು ಇರುವ ಏಕೈಕ ಮಾರ್ಗೋಪಾಯವೆಂದರೆ ಸೃಷ್ಟಿಕರ್ತನ ಆಜ್ಞೆಗಳ ಪಾಲನೆಯಾಗಿದೆ.



Chichen Itza (maya) of Maxico



Ur of Iraq



Troy of Turkey



Angkor of Combodia



Machu Picchu of Peru



Dead Pompeii of italy.



Houses of Thamod
(Qaume-Samud)



Cliff palace (Mesa Verde)
Colorado of USA.

Some of the civilisations which might have got terminated due to divine punishment.

ಅಧ್ಯಾಯ: 13

# ವೇದಗಳು ಮತ್ತು ಕುರ್‌ಆನ್‌ನಲ್ಲಿರುವ ಸಮಾನ ಸೂಕ್ತಗಳು ಪ್ರಾರ್ಥನೆಗೆ ಸಂಬಂಧಿಸಿದಂತೆ

## 13. Common Verses between Vedas & Quran

ಸೃಷ್ಟಿಕರ್ತನ ಅನುಗ್ರಹವನ್ನು ಬೇಡುವುದಕ್ಕೆ ದುಆ (ಉರ್ದು) ಪ್ರಾರ್ಥನೆ (ಹಿಂದಿ), ಸರ್ಪಿಕೇಶನ್ (ಇಂಗ್ಲೀಷ್‌ನಲ್ಲಿ) ಹೇಳುತ್ತಾರೆ. ಧರ್ಮದಲ್ಲಿ ಪ್ರಾರ್ಥನೆಗೆ ಬಹಳ ಮಹತ್ವವಿದೆ.

ಪ್ರವಾದಿ ಮುಹಮ್ಮದ್(ಸ) ನುಡಿದಿರುವರಾಗಿ ವರದಿಯಾಗಿದೆ:

“ದುಆ (ಪ್ರಾರ್ಥನೆ) ವಾಸ್ತವಿಕವಾಗಿ ಆರಾಧನೆಯಾಗಿದೆ.” (ಮಿಷ್ಕಾತ್)

“ಪಾಪ ಕಾರ್ಯಮಾಡಿದ ನಂತರ ಸೃಷ್ಟಿಕರ್ತನಲ್ಲಿ ಕ್ಷಮೆಯಾಚಿಸಿ, ಆತನ ಅನುಗ್ರಹವನ್ನು ಬೇಡಿರಿ. ನೀವು ಈ ರೀತಿ ಮಾಡದಿದ್ದರೆ, ಆತನು, ಈ ರೀತಿ ಮಾಡುವವರಿಂದ ನಿಮ್ಮನ್ನು ಬದಲಿಸಬಹುದು.” (ಮಿಷ್ಕಾತ್)

“ದುಆ (ಪ್ರಾರ್ಥನೆ) ಪ್ರವಾದಿಯ ಆಯುಧವಾಗಿದೆ.” (ಮಿಷ್ಕಾತ್)

“ದುಆ (ಪ್ರಾರ್ಥನೆ) ದಿಂದ ಮರಣವನ್ನು ಸಹ ಮುಂದೂಡಬಹುದು. ಸೃಷ್ಟಿಕರ್ತನಲ್ಲಿ ಆತನ ಅನುಗ್ರಹಗಳಿಗೆ ಪ್ರಾರ್ಥಿಸುವುದು ಮನುಷ್ಯರಿಗೆ ಅತ್ಯಾವಶ್ಯಕವಾಗಿದೆ. ಈ ಕಾರಣಕ್ಕಾಗಿ ಸೃಷ್ಟಿಕರ್ತನೇ ಆತನನ್ನು ಬೇಡುವ ನಿಧಾನವನ್ನು ದಿವ್ಯ ಗ್ರಂಥಗಳಲ್ಲಿ ಕಲಿಸಿರುವನು.

ಪ್ರಾರ್ಥನೆಯು ವಾಸ್ತವಿಕವಾಗಿ ಆರಾಧನೆಯಾಗಿರುವುದು. ಆದುದರಿಂದ ಅವಕಾಶ ದೊರೆತಾಗಲೆಲ್ಲಾ ನಾವು ಪ್ರಾರ್ಥಿಸಬೇಕು. ದಿವ್ಯ ಗ್ರಂಥದ ಯಾವುದೇ ಸೂಕ್ತವನ್ನು ಪಠಿಸುವುದರಿಂದ ನಮಗೆ ಖಂಡಿತವಾಗಿ ಪುಣ್ಯ ಫಲ ದೊರಕುತ್ತದೆ. ಆದರೆ ಪ್ರಾರ್ಥನೆಯ ಸೂಕ್ತಗಳನ್ನು ಪಠಿಸುವುದರ ಮೂಲಕ ನಮಗೆ ಇಮ್ಮಡಿ ಲಾಭ ಸಿಗುವುದು. ಒಂದು ಸೂಕ್ತಗಳನ್ನು ಪಠಿಸುವುದರ ಪುಣ್ಯ ಫಲ, ಎರಡನೆಯದು ಪ್ರಾರ್ಥಿಸುವುದರ ಕಾರಣ ದೊರಕುವ ಭಗವಂತನ ಅನುಗ್ರಹಗಳು.

ಪವಿತ್ರ ವೇದಗಳ ಸೂಕ್ತಗಳು

| ಪವಿತ್ರ ವೇದಗಳ ಸೂಕ್ತಗಳು | ಪವಿತ್ರ ಕುರ್‌ಆನಿನ ಸೂಕ್ತಗಳು |
|---|---|
| • होतारं सत्ययजं रोदस्योरूत्तान हस्तो नमसा विवासेत।<br>ಸ್ವರ್ಗವನ್ನು ಮತ್ತು ಭೂಮಿಯನ್ನು ನಿಯಂತ್ರಿಸುವ ಸೃಷ್ಟಿಕರ್ತನನ್ನು ಪ್ರಾರ್ಥಿಸುವಾಗ ವಿನಯದಿಂದ ಕೈಗಳನ್ನು ಮೇಲಕ್ಕೆ ಎತ್ತಿರಿ. (ಋಗ್ವೇದ 6:16:46) | • उद्‌अू रब्बुकुम् त-जर्रुअं व्-व खुफ्य इन्नहू लायुहिब्बुल-मुअ-तदीन (कुरआन ७:५५)<br>“ನಿಮ್ಮ ಪ್ರಭುವನ್ನು ಭಯ ವಿನಯದೊಂದಿಗೆ ಮತ್ತು ರಹಸ್ಯವಾಗಿ ಪ್ರಾರ್ಥಿಸಿರಿ.” (ಕುರ್‌ಆನ್ 7:55) |
| • तस्य ते भक्तिवांसः स्याम (अर्थवेद ०६:७८:३)<br>(ಓ ಸೃಷ್ಟಿಕರ್ತನೇ) ನಾವು ನಿನ್ನನ್ನು ಆರಾಧಿಸುವವರಾಗಿರುವೆವು. (ಅಥರ್ವ ವೇದ 6–79–3) | • इय्या-क नअ़्बुदु व इय्या-क नस्तअीन (कुरआन १:४)<br>“ನಾವು ನಿನ್ನ ಆರಾಧನೆಯನ್ನೇ ಮಾಡುತ್ತೇವೆ ಮತ್ತು ನಿನ್ನೋರ್ವ ನಿಂದಲೇ ಸಹಾಯ ಬೇಡುತ್ತೇವೆ.” (ಕುರ್‌ಆನ್: 1:4) |

| **ಪವಿತ್ರ ವೇದಗಳ ಸೂಕ್ತಗಳು** | **ಪವಿತ್ರ ಕುರ್‌ಆನಿನ ಸೂಕ್ತಗಳು** |
|---|---|
| • अवनो वृजिना शिषी हि (ऋगवेद १०:१०५:८)<br>(ಓ ದೇವನೇ) ನಮ್ಮ ಪಾಪಗಳನ್ನು ಕ್ಷಮಿಸು. (ಋಗ್ವೇದ 10–105–8) | • रब्बना फागफिरलना जुनूबना व कफ़्फिर अन्ना सय्यिआतिना (कुरआन ३:१९३)<br>"ಓ ನಮ್ಮೊಡೆಯಾ, ನಮ್ಮಿಂದ ಸಂಭವಿಸಿ ಹೋಗಿದ್ದ ಅಪರಾಧಗಳನ್ನು ಕ್ಷಮಿಸು. ನಮ್ಮಲ್ಲಿರುವ ಕೆಡುಕುಗಳನ್ನು ದೂರೀಕರಿಸು ಮತ್ತು ನಮ್ಮ ಅವಸಾನವನ್ನು ಸಜ್ಜನರೊಂದಿಗೆ ಮಾಡು." (ಕುರ್‌ಆನ್: 3:193) |
| • अवशसा निःषसा यत् पराशसोपारिम जाग्रतो यत् स्वपन्तः। (अर्थववेद०६:४५:२)<br>ಪ್ರಜ್ಞಾ ಪೂರ್ವಕವಾಗಿ ಅಥವಾ ಅರಿವಿಲ್ಲದೆ ಅಪ್ರಾಮಾಣಕ, ದ್ವೇಷ ಹಾಗೂ ಅಜ್ಞಾನದ ಭಾವದಲ್ಲಿ ನಾವು ಮಾಡಿರುವ ಪಾಪದ ಕಾರ್ಯಗಳನ್ನು ದಯವಿಟ್ಟು ಕ್ಷಮಿಸು. | • रब्बना ला तुआखिज्ना इन् नसीना अव् अखताना। रब्बाना वला तह्मिल अलैना इस्रन कमा हमल्तहु अलल् लज़ीना मिन क़ब्लिना, रब्बना वला तुहम्मिल्ना मा ला ता-कता लना बिहि। वअूफुअन्ना वग्फिर लना वर् हम्ना अन्-त मौलाना (कुरआन २:२८६)<br>"ಓ ನಮ್ಮ ಪ್ರಭೂ ನಮ್ಮಿಂದ ಪ್ರಮಾದ ವಶತ್ ಅಪರಾಧಗಳಾಗಿ ಬಿಟ್ಟರೆ ಅವುಗಳಿಗಾಗಿ ನಮ್ಮನ್ನೂ ಹಿಡಿಯ ಬೇಡ. ಪ್ರಭೂ ನಮ್ಮ ಪೂರ್ವಿಕರ ಮೇಲೆ ಹೊರಿಸಿದಂತಹ ಹೊರೆಯನ್ನು ನಮ್ಮ ಮೇಲೆ ಹೊರಿಸಬೇಡ. ನಮ್ಮ ಪಾಪಗಳನ್ನು ಪರಿಹರಿಸು, ನಮ್ಮನ್ನು ಕ್ಷಮಿಸು, ನಮ್ಮ ಮೇಲೆ ಕೃಪೆ ದೋರು." (ಕುರ್‌ಆನ್ 2:286) |
| • इन्द्र ऋतु न आ भर पिता पुत्रेभ्यो यथा। शिक्षा णो अस्मिन् पुरूहूत यामनि जीवा ज्योतिरशीमहि।। (अर्थवेद.१८:३:६७)<br>(ಓ ದೇವನೇ) ಐಹಿಕ ಜೀವನದಲ್ಲಿ ನಮಗೆ ಜ್ಞಾನೋದಯ ವಾಗುವಂತೆ (ದೈವಿಕ) ಜ್ಞಾನದೊಂದಿಗೆ ನಮ್ಮನ್ನು ಅನುಗ್ರಹಿಸು. (ಅಥರ್ವ ವೇದ 18–3–67) | • युअतिल्-हिकम-त मंय्यशा-उ व मंय्युअतल्-हिक्म्-त फ-कद ऊति-य खयरन् कसीरन् व यज्जक्करू इल्ला उलूल-अलबाब (कुरआन २:२६९)<br>जिसको चाहता है हिकमत (तत्वदर्शिता) प्रदान करता है, और जिसे हिकमत (तत्तज्ञान) मिली, उसे वास्तव में बड़ी दौलत मिल गई। इन बातों से सिर्फ़ वही लोग शिक्षा ग्रहण करते है, जो बुद्धिमान हैं। |
| • नय सुपथा राय अस्मान (यर्जुरवेद ४०:१६)<br>ಓ ದೇವನೇ, ನಮ್ಮ ಮುಕ್ತಿಗಾಗಿ ದಯನಿಟ್ಟು ನಮ್ಮನ್ನು ಸನ್ಮಾರ್ಗದಲ್ಲಿ ನಡೆಸು. (ಅಥರ್ವ ವೇದ 40–16) | • इह्दनस-सिरात्ल्मुस्क़ीम (कुरआन १:५)<br>"ನಮಗೆ ಸನ್ಮಾರ್ಗವನ್ನು ತೋರಿಸು ನೀನು ಅನುಗ್ರಹಿಸಿದವರ ಮಾರ್ಗ." (ಕುರ್‌ಆನ್: 1:5) |
| • इन्द्र ऋतुं न आ भर (अर्थवेद १८:०३:६७)<br>ಓ ಸೃಷ್ಟಿಕರ್ತನೇ, (ದೈವಿಕ) ಬುದ್ಧಿಶಕ್ತಿ ನಮ್ಮನ್ನು ಅನುಗ್ರಹಿಸು. (ಅಥರ್ವ ವೇದ 18–3–67)<br>• सं श्रुतेन गमेमहि (अर्थवेद ०१:०१:४)<br>ಓ ಸೃಷ್ಟಿಕರ್ತನೇ (ದೈವಿಕ) ಜ್ಞಾನದೊಂದಿಗೆ ನಮ್ಮನ್ನು ಅನುಗ್ರಹಿಸು. (ಅಥರ್ವವೇದ 1–1–4) | • रब्बि जिदनी अिल्मा (कुरआन २०:११४)<br>ऐ पालनहार! मुझे और अधिक ज्ञान प्रदान कर |

| ಪವಿತ್ರ ವೇದಗಳ ಸೂಕ್ತಗಳು | ಪವಿತ್ರ ಕುರ್‌ಆನಿನ ಸೂಕ್ತಗಳು |
|---|---|
| ● अग्निः प्रातः सवने पात्वस्मान् वैश्चानरो विश्वशंभुः। (अर्थवेद ०६:४७:०१)<br>ಓ ಸೃಷ್ಟಿಕರ್ತನೇ, ನೀನು ಸಕಲ ಮಾನವ ಜನಾಂಗದ ಅನುರಾಗಿ, ಸಕಲ ವಿಶ್ವದ ಸೃಷ್ಟಿಕರ್ತ, ಕರುಣಾಮಯಿ ಯಾಗಿರುವಿ. ಓ ಸೃಷ್ಟಿಕರ್ತನೇ, ನಾವು ಪ್ರಾತಃಕಾಲದ ಪ್ರಾರ್ಥನೆ ಮಾಡುವಾಗ ನಮ್ಮನ್ನು ಸಂರಕ್ಷಿಸು. (ಅಥರ್ವ ವೇದ 6–47–1) | ● वलायुहीतू-नबिशैइम्मिन् अ़िल्मिही इल्ला बिमा शा-अ वसि-अ़ कुर्सिय्युहुस्समावाति वल्अर्ज (कुरआन २:२५५)<br>"ಅಲ್ಲಾಹ್ ಚಿರಂತನನು, ಸ್ವಯಂ ಜೀವಂತನು. ಅಖಿಲ ಪ್ರಪಂಚದ ನಿಯಂತ್ರಕನಾದ ಆತನ ಹೊರು ಆರಾಧ್ಯನಾರೂ ಇಲ್ಲ. ಅವನಿಗೆ ತೂಕಡಿಕೆಯಾಗಲೀ ನಿದ್ರೆಯಾಗಲೀ ಬಾಧಿಸುವುದಿಲ್ಲ." (ಕುರ್‌ಆನ್ 2:255)<br><br>● व कुर्आनल्-फजिर इन-न-कुरआनंल ्-फजिर का-न मश्हूदा (कुरआन १७:७८)<br>"ಸೂರ್ಯಾನ ಇಳಿಮುಖಾ ರಂಭದಿಂದ ನಿಶಾಂಧಕಾರದ ತನಕ ನಮಾಝುನ್ನು ಸಂಸ್ಥಾಪಿಸಿರಿ ಮತ್ತು ಪ್ರಾತಃಕಾಲದ ಕುರ್‌ಆನನ್ನು ರೂಢಿಗೊಳಿಸಿ ಕೊಳ್ಳಿರಿ." (ಕುರ್‌ಆನ್: 17:78) |
| ● तस्य वयं हेडिसि मापि भूम सुमृडीके अस्य सुमतो स्याम्। (अर्थवेद ०७:२०:३)<br>ನಾವು ಸದಾ ಸೃಷ್ಟಿಕರ್ತನ ಅನುಗ್ರಹ ಮತ್ತು ಪ್ರೀತಿಯಲ್ಲಿ ಇರುವಂತಾಗಲಿ ಮತ್ತು ಎಂದೂ ಆತನ ಕ್ರೋಧಕ್ಕೆ ಗುರಿಯಾಗದಂತಿರಲಿ. | ● रब्बना ला तुजिग़ कुटूबना बअ्दा इज़ हदैतना व हब लना मिल् लदुन्का रह्मा। इन्नका अन्तल वहाब (कुरआन ३:८)<br>"ಓ ನಮ್ಮ ಪ್ರಭೂ, ನೀನು ನಮ್ಮನ್ನು ನೇರ ಮಾರ್ಗದಲ್ಲಿ ಹಾಕಿರುತ್ತಾ ಪುನಃ ನಮ್ಮ ಮನಸ್ಸುಗಳನ್ನೂ ದೋಷಗಳಲ್ಲಿ ಸಿಲುಕಿಸಬೇಡ. ನೀನು ನನ್ನ ಅನುಗ್ರಹಾಗಾರದಿಂದ ಕೃಪೆಯನ್ನು ನೀಡು." (ಕುರ್‌ಆನ್ 3:8) |
| ● ऋत्वः समहदीनता प्रतीपं जगमा शुचे मृला सुक्षत्र मृलय।। (ऋगवेद. ७:८९:०३)<br>ಓ ಸೃಷ್ಟಿಕರ್ತನೇ, ನಮ್ಮ ಅಜ್ಞಾನದ ಕಾರಣದಿಂದ ನಾವು ಸನ್ಮಾರ್ಗದಿಂದ ವಿಚಲಿತರಾಗುತ್ತೇವೆ. ನಮ್ಮ ಮೇಲೆ ಕರುಣೆಯನ್ನು ತೋರು. (ಋಗ್ವೇದ 7–89–3) | ● इन्नल्ला-ह ला यज्लिमुन्ना-स यशअंव्-व ला किन्नन्ना-स अन्फुसहुम् यज्लिमून (कुरआन १०:४४)<br>"ಅಲ್ಲಾಹನೊಡನೆ ಭೇಟಿಯನ್ನು ಸುಳ್ಳಾಗಿಸಿದವರು ನಿಜಕ್ಕೂ ನಷ್ಟ ಹೊಂದಿದರೆಂದೂ, ಅವರು ಸನ್ಮಾರ್ಗದಲ್ಲಿರಲಿಲ್ಲವೆಂದೂ. (ಆಗ ಅವರಿಗೆ ಖಚಿತವಾಗುವುದು.) (ಕುರ್‌ಆನ್: 10:44) |
| ● शनः कुरू प्रजाभ्यः (यर्जुरवेद. ७:८९:०३)<br>ಓ ಸೃಷ್ಟಿಕರ್ತನೇ, ನಮ್ಮ ಸಂತಾನವನ್ನು ಅನುಗ್ರಹಿಸು. | ● व अस्लिह ली फी जुर्रिय्यती (कुरआन ४६:१५)<br>"ತನ್ನ ಮಾತಾ ಪಿತರೊಂದಿಗೆ ಸೌಜನ್ಯದಿಂದ ವರ್ತಿಸಬೇಕೆಂದು ನಾವು ಮಾನವನಿಗೆ ಆದೇಶಿಸಿದೆವು." (ಕುರ್‌ಆನ್ 46:15) |

| ಪವಿತ್ರ ವೇದಗಳ ಸೂಕ್ತಗಳು | ಪವಿತ್ರ ಕುರ್‌ಆನಿನ ಸೂಕ್ತಗಳು |
|---|---|
| • यत्रानन्दाश्च मोदाष्च मुदः प्रमुद आसते। कामस्य यत्राप्ताः कामास्तत्र माममृतं कुधी।। (ऋगवेद. ९:११३:११)<br><br>ಓ ಸೃಷ್ಟಿಕರ್ತನೇ, ಶಾಂತಿ ಮತ್ತು ಪ್ರೀತಿ ಶಾಶ್ವತವಾಗಿರುವ, ಹೃದಯದಲ್ಲಿ ಮೂಡಿದ ತಕ್ಷಣ ಆಸೆಗಳು ಪೂರೈಸುವ ಸ್ವರ್ಗವನ್ನು ದಯಪಾಲಿಸು. | • वफ़ीहा मा तश्तहीहिल्-अन्फ़ुसु व त-लज्जुल्-अअ-युनि व अन्तुम् फ़ीहा खालिदून (कुरआन ४३:७१)<br><br>"ನೀವಿಲ್ಲಿ ಸದಾ ವಾಸಿಸುವಿರಿ, ನೀವು ಭೂಲೋಕದಲ್ಲಿ ಮಾಡುತ್ತಿದ್ದ ನಿಮ್ಮ ಸತ್ಕರ್ಮಗಳ ನಿಮಿತ್ತ ಈ ಸ್ವರ್ಗಕ್ಕೆ ಉತ್ತರಾಧಿಕಾರಿಗಳಾದಿರಿ. ಇಲ್ಲಿ ನಿಮಗಾಗಿ ಧಾರಾಳ ಹಣ್ಣು ಹರಿಸಲುಗಳಿದ್ದು ಅವುಗಳನ್ನು ನೀವು ತಿನ್ನುವಿರಿ ಎಂದು ಅವರೊಡನೆ ಹೇಳಲಾಗುವುದು." (ಕುರ್‌ಆನ್ 43:71) |
| • श्रद्धां प्रातर्हवामहे श्रद्धां मध्यंदिनं परि। श्रद्धां सूर्यस्य जिम्रुचि श्रद्धे श्रद्धापयेह नः।। (ऋग्वेद. १०:१५१:०५)<br><br>ಓ ಸೃಷ್ಟಿಕರ್ತನೆ, ಮುಂಜಾನೆ, ಮಧ್ಯಾಹ್ನ ಮತ್ತು ಸೂರ್ಯಾಸ್ತವಾದ ನಂತರ ನಾವು ನಿನ್ನಲ್ಲಿ ವಿಶ್ವಾಸವಿರಿಸಿದ್ದೇವೆ. ಓ ಸೃಷ್ಟಿಕರ್ತನೇ, ಈ ಜಗತ್ತಿನಲ್ಲಿ ನಿನ್ನ ಅತ್ಯಂತ ವಿಧೇಯ ದಾಸನಾಗಿ ಮಾಡು. | • व सब्बिह बिहम्दि रब्बि-क कब्-ल तुलअिश-शम्सि व कब्-ल गुरूबिहा व मिन् आनाइल्लयलि फ- सब्बिह व अत-राफन्नहारी ल-अल्लक-क तर्जा। व-ला तमुद्-दन्-न ऐनय-क इला मा मत्तअ-ना बिही अज्वाजम् मिन्हुम् जह्-र-तल्-हयातिददून्या। लिनफतिनहुम् फीहि। (कुरआन २०:१३०-१३१)<br><br>"ಮತ್ತು ಸೂರ್ಯೋದಯಕ್ಕೆ ಹಾಗೂ ಸೂರ್ಯಾಸ್ತಮಾನಕ್ಕೆ ಮುಂಚೆ ನಿಮ್ಮ ಪ್ರಭುವಿನ ಸುತ್ತಿಸ್ತೋತ್ರದೊಂದಿಗೆ ಅವನ ಪವಿತ್ರವನ್ನು ಕೊಂಡಾಡಿರಿ ಮತ್ತು ರಾತ್ರಿ ವೇಳೆಗಳಲ್ಲಿಯೂ, ಹಗಲಿನ ಕಿನಾರೆಗಳಲ್ಲಿಯೂ ಅವನ ಪಾವಿತ್ರ್ಯವನ್ನು ಕೊಂಡಾಡಿರಿ ಮತ್ತು ರಾತ್ರಿ ವೇಳೆಗಳಲ್ಲಿಯೂ, ಹಗಲಿನ ಕಿನಾರೆಗಳಲ್ಲಿಯೂ ಅವನ ಪಾವಿತ್ರ್ಯವನ್ನು ಸ್ತುತಿಸರಿ." (ಕುರ್‌ಆನ್ 20:130) |
| • वयं देंवानां समतौ स्याम (अथर्ववेद. ६:४७:०२)<br><br>ಓ ಸೃಷ್ಟಿಕರ್ತನೇ, ಪವಿತ್ರ ವ್ಯಕ್ತಿಗಳ ಸಂಗ ದೊರೆಯುವಂತೆ ಅನುಗ್ರಹಿಸು. (ಅಥರ್ವ ವೇದ 6–47–2) | • व अद्ख़िल्नी बिरह्मति-क फी अ़िबादिकस्-सालिह़ीन (कुरआन २७:१९)<br><br>"ನಿನ್ನ ಕೃಪೆಯಿಂದ ನನ್ನನ್ನು ನಿನ್ನ ಸಜ್ಜನ ದಾಸರಲ್ಲಿ ಸೇರಿಸು." (ಕುರ್‌ಆನ್ 27:19) |

**ಅಧ್ಯಾಯ: 14**

# ಸೃಷ್ಟಿಕರ್ತನ ಸುತ್ತಿಗೆ ಸಂಬಂಧಿಸಿದ ಸೂಕ್ತಗಳು

## 14. Verses Related to praises of God

ಇಹಲೋಕದಲ್ಲಿ ಓರ್ವ ವ್ಯಕ್ತಿಯು ಸುಮಾರು 70–75 ವರ್ಷಗಳ ಕಾಲ ಜೀವಿಸಬಹುದು. ಈ ಸೀಮಿತ ಅವಧಿಯನ್ನು ಕಳೆಯಲಿಕ್ಕಾಗಿ ಸುಮಾರು 23 ವರ್ಷ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲಾಗುತ್ತದೆ. ನಂತರ 40–45 ವರ್ಷಗಳ ಅವಧಿಯಲ್ಲಿ ಪ್ರತಿ ದಿನ 8–10 ಗಂಟೆ ಹಣ ಸಂಪಾದನೆಗಾಗಿ ದುಡಿಯಲಾಗುತ್ತದೆ. ಹೀಗೆ ಸುಮಾರು 70–75 ವರ್ಷ ಕಾಲಾವಧಿಯ ಇಹಲೋಕದ ಜೀವನಕ್ಕಾಗಿ ಇಷ್ಟು ಪರಿಶ್ರಮ ಪಡಲಾಗುತ್ತದೆ.

ಮರಣದ ನಂತರ ಪರಲೋಕದ ಜೀವನ ಪ್ರಾರಂಭವಾಗುತ್ತದೆ. ಪರಲೋಕದ ಜೀವನವು ಶಾಶ್ವತ ಜೀವನವಾಗಿದೆ. ಆದರೆ ಮನುಷ್ಯನು ಈ ಶಾಶ್ವತ ಜೀವನವನ್ನು ನಡೆಸಲು, ಎದುರಿಸಲು ಯಾವುದೇ ತಯಾರಿಯನ್ನು ನಡೆಸದಿಸರುವುದು ಸೋಜಿಗವೇ ಸರಿ.

"ಸನ್ಮಾರ್ಗವು ಸರಳವಾಗಿದೆ." (ಋಗ್ವೇದ 8:31:13)

"ನಾವು ಈ ಕುರ್‌ಆನನ್ನು ನಿಮ್ಮ ಮೇಲೆ ಅವತೀರ್ಣಗೊಳಿಸಿರುವುದು ನಿಮ್ಮನ್ನು ಸಂಕಷ್ಟಕ್ಕೀಡು ಮಾಡಲಿಕ್ಕಲ್ಲ." (ಕುರ್‌ಆನ್: 20:2)

ಮೇಲಿನ ಸೂಕ್ತಗಳಿಂದ ಸನ್ಮಾರ್ಗವು ಕಷ್ಟಕರವಾಗಿರದೇ, ಸರಳವಾಗಿರುವುದು ಎಂಬುದು ವ್ಯಕ್ತವಾಗುತ್ತದೆ.

"ಸನ್ಮಾರ್ಗದಲ್ಲಿ ನಡೆಯುವವನು ತೆಂಗಿನ ಮರದಂತೆ ಅಭಿವೃದ್ಧಿ ಹೊಂದುವನು." (ಬೈಬಲ್ ಪಿ.ಎಸ್.: 92:12)

ಸನ್ಮಾರ್ಗದಲ್ಲಿ ನಡೆಯುವುದರಿಂದ, ಇಹ ಪರಗಳೆಡರಲ್ಲೂ ಮನುಷ್ಯನು ಯಶಸ್ಸನ್ನು ಪಡೆಯುವನು.

ಯಾವನೇ ವ್ಯಕ್ತಿಯು ಸನ್ಮಾರ್ಗದಲ್ಲಿ ನಡೆಯುತ್ತಿದ್ದರೆ ಅದು ಅವನ ಪ್ರಯತ್ನದ ಫಲ ಎಂದು ಅರ್ಥ ಅಲ್ಲ. ಮನುಷ್ಯನ ಪ್ರಾಮಾಣಿಕ ಪ್ರಯತ್ನ ಹಾಗೂ ಸೃಷ್ಟಿಕರ್ತನ ಅನುಗ್ರಹದಿಂದ ಮಾತ್ರ ಸನ್ಮಾರ್ಗದಲ್ಲಿ ನಡೆಯಲು ಸಾಧ್ಯವಾಗುತ್ತದೆ. ಆದುದರಿಂದ ಸನ್ಮಾರ್ಗದಲ್ಲಿ ನಡೆಸುವಂತೆ ನಾವು ಸೃಷ್ಟಿಕರ್ತನನ್ನು ಪ್ರಾರ್ಥಿಸುತ್ತಿರಬೇಕು.

ಸೃಷ್ಟಿಕರ್ತನನ್ನು ಪ್ರಾರ್ಥಿಸುವ ಜೊತೆಯಲ್ಲಿ ಆತನನ್ನು ನಾವು ಸುತ್ತಿಸಬೇಕು. ಸೃಷ್ಟಿಕರ್ತನನ್ನು ಸುತ್ತಿಸುವುದರಿಂದ ಆತನು ಸಂತುಷ್ಟನಾಗುತ್ತಾನೆ. ದಿವ್ಯ ಗ್ರಂಥಗಳಲ್ಲಿ ಸೃಷ್ಟಿಕರ್ತನನ್ನು ಸುತ್ತಿಸುವ ಅನೇಕ ಸೂಕ್ತಗಳಿವೆ. ಕೆಲ ಸೂಕ್ತಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

| ಪವಿತ್ರ ವೇದಗಳ ಸೂಕ್ತಗಳು | ಪವಿತ್ರ ಕುರ್‌ಆನಿನ ಸೂಕ್ತಗಳು |
|---|---|
| ● भुवनस्य यस्पतिके एव नमस्यो विक्ष्वीडयः (अथर्ववेद २:२:१)<br>ಸೃಷ್ಟಕರ್ತನೊಬ್ಬನೇ ಇಡೀ ವಿಶ್ವದ ಒಡೆಯನಾಗಿರುವನು. ಪ್ರತಿಯೊಂದು ಸೃಷ್ಟಿಯು ಆತನಿಗೆ ವಿಧೇಯುವಾಗಿದೆ. ಆರಾಧನೆಗೆ ಸೃಷ್ಟಿಕರ್ತನೋರ್ವನೇ ಅರ್ಹನು. (ಅಥರ್ವ ವೇದ 2–2–1) | ● रब्बुस्समावाति वल्अर्जि व मा बयनहुमा फअ्-बुदहु वस्तबिर् लिइबादतिही हल् तअ्-लमु लहू समिय्या (कुरआन १९:६५)<br>"ಅವನು ಆಕಾಶಗಳ, ಪೃಥ್ವಿಯ ಮತ್ತು ಅವುಗಳ ನಡುವೆಯಿರುವ ಸರ್ವಸ್ವಗಳ ಪಾಲಕ ಪ್ರಭು." (ಕುರ್‌ಆನ್: 19:65) |

| ಪವಿತ್ರ ವೇದಗಳ ಸೂಕ್ತಗಳು | ಪವಿತ್ರ ಕುರ್‌ಆನಿನ ಸೂಕ್ತಗಳು |
|---|---|
| • य एक इ त्तमुष्टु हि कृष्टिनां विचर्षणिः। (ऋग्वेद ६:४५:१६)<br>ಕೇವಲ ಸೃಷ್ಟಿಕರ್ತನು ಮಾತ್ರ ಮಾನವರ ಪರಿಪಾಲಕನು. (ಋಗ್ವೇದ 6–45–16) | • हु-वल्लाहुल्लजी ला इला-ह इल्ला हुव आलिमुल गयबि वश्शहादति (कुरआन ५९:२२)<br>"ಅವನೇ ಅಲ್ಲಾಹ್ ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ. ಅಗೋಚರವಾದ ಮತ್ತು ಗೋಚರವಾಗಿರುವ ಎಲ್ಲವನ್ನು ಬಲ್ಲವನು. ಅವನೇ ಪರಮ ದಯಾಮಯನೂ ಕರುಣಾ ನಿಧಿಯೂ ಆಗಿರುತ್ತಾನೆ." (ಕುರ್‌ಆನ್: 59:22) |
| • न भवत्विद्रं ऊती (ऋग्वेद १:१००:१)<br>ಸೃಷ್ಟಿಕರ್ತನು ಭೂಮಿ ಮತ್ತು ಸ್ವರ್ಗಗಳ ಸಾಮ್ರಾಟನಾಗಿರುವನು. (ಋಗ್ವೇದ: 1–100–1) | • कबीरूल्-मु-अत-आल (कुरआन १३:६)<br>"ಅವನು ಅತಿ ಮಹಾನನು ಮತ್ತು ಬೆರೋನ್ನತನು." (ಕುರ್‌ಆನ್: 13:9) |
| • अध्दा देव महा (अथर्ववेद २०:५८:३)<br>ವಿಸ್ವಂದೇಹವಾಗಿ ಸೃಷ್ಟಿಕರ್ತನು ಅತ್ಯಂತ ಮಹಾನನು. (ಅಥರ್ವ ವೇದ 20–58–3) | • अ-लम् तअ-लम् अन्नल्ला-ह-लहू मुल्कुस्समावाति वल्अर्जि व मा लकुम् मिन् दुनिल्लाहि मिव्वलिय्यिंव-व ला नसीर (कुरआन २:१०७)<br>"ಭೂಮಿ ಆಕಾಶಗಳ ಅಧಿಪತ್ಯ ಅಲ್ಲಾಹನಿಗೆ ಮಾತ್ರ ಇರುವುದೆಂದೂ, ಅಲ್ಲಾಹನ ಹೊರತು ನಿಮ್ಮ ಸಂರಕ್ಷಿಕನೂ ಸಹಾಯಕನೂ ಯಾರೂ ಇಲ್ಲವೆಂದು ನಿಮಗೆ ತಿಳಿಯದೇ?" (ಕುರ್‌ಆನ್: 2:107) |
| • मही देवस्य सवितः परिष्टुतिः (ऋग्वेद ५:८१:१)<br>ಓ ಸೃಷ್ಟಿಕರ್ತನೇ, ದಯುವಿಟ್ಟು ನಮಗೆ ಸಹಾಯವನ್ನು ನೀಡು. (ಋಗ್ವೇದ 5–81–1) | • इय्या-क नअ़बुदु व इय्या-क नस्तअीन (कुरआन १:४)<br>"ನಾವು ನಿನ್ನ ಆರಾಧನೆಯನ್ನೇ ಮಾಡುತ್ತೇವೆ ಮತ್ತು ನಿನ್ನೋರ್ವನಿಂದಲೇ ಸಹಾಯ ಬೇಡುತ್ತೇವೆ." (ಕುರ್‌ಆನ್: 1:4) |
| • वसुर्दयामान (ऋग्वेद ३:३४:१)<br>ಸರ್ವ ಸುತ್ತಿಗಳು ಸೃಷ್ಟಿಕರ್ತನಿಗೆ ಮೀಸಲು ಆತನು ವಿಶ್ವದ ಸೃಷ್ಟಿಕರ್ತನಾಗಿರುವನು. | • अल्‌हम्दु लिल्लाहि रब्बिल-आ़लमीन अर्रहमानिर्रहीम (कुरआन १:१)<br>"ಅಲ್ಲಾಹನಿಗೇ ಸರ್ವ ಸುತ್ತಿ ಅವನು ಸಕಲ ವಿಶ್ವದ ಪ್ರಭು." (ಕುರ್‌ಆನ್: 1:1) |
